ಪಂಚಮ

ಸಂಪುಟ : 8 ಫೆಬ್ರುವರಿ 1984 ಬೆಲೆ 1–00 ಸಂಚಿಕೆ : 2–3

ಪತನದ ರಾಜಕೀಯದತ್ತ ರೈತ ಚಳುವಳಿ

ರೈತ ಚಳುವಳಿ ಬಗ್ಗೆ ಮೊದಲಿಂದಲೂ ಕುತೂಹಲ ಹಾಗೂ ಆತಂಕಗಳನ್ನು ಇಟ್ಟುಕೊಂಡಿರುವ 'ಪಂಚಮ' ಇಂದು ಆ ಬಗ್ಗೆ ಮತ್ತೆ ಮಾತಾಡಬೇಕಾಗಿದೆ.

ಜನವರಿ 26ರಿಂದ ಜನತಾ ಸರ್ಕಾರದ ವಿರುದ್ಧ ರೈತಸಂಘದಿಂದ ನಡೆದಿರುವ ಅಸಹಕಾರ ಚಳುವಳಿ (ರಸ್ತೆ ಮತ್ತು ರೈಲುತಡೆ ಚಳುವಳಿ) ಕರ್ನಾಟಕದ ಎಲ್ಲ ಬಗೆಯ ಜನರಿಂದ ತೀವ್ರ ಚರ್ಚೆಗೆ ತುತ್ತಾಗಿದೆ. ಕರ್ನಾಟಕದ ಎಲ್ಲಾ ಜೈಲುಗಳೂ ಭರ್ತಿಯಾಗಿ ಶಾಲಾ ಕಾಲೇಜುಗಳೂ ಜೈಲುಗಳಾಗುತ್ತಾ, ಜನಶಕ್ತಿಯ ಎದುರು ಸರ್ಕಾರಿ ಶಕ್ತಿ ಸಣ್ಣದು ಎನ್ನುವುದನ್ನು ತೋರಿಸಿದೆ, ನಿಜ. ಆದರೆ ಈ ಬಗೆಯ ಚರ್ಚೆಗೀಡುಮಾಡುವ ಮತ್ತು ಸರ್ಕಾರಿ ಯಂತ್ರವನ್ನು ಅಸಹಾಯಕತೆಗೀಡು ಮಾಡುವ ಕ್ರಿಯೆ ಮೂಲಭೂತ ಬದಲಾವಣೆ ಬಯಸುವ ಯಾವುದೇ ಚಳುವಳಿಯ ಪ್ರಥಮ ಹಂತದ ಕಾರ್ಯಕ್ರಮಗಳಾದರೂ. ಇವುಗಳಿಂದ ಆ ಚಳುವಳಿ ಯಾವ ಬಗೆಯ ರಾಜಕೀಯ ಆರ್ಥಿಕ ಮತ್ತು ಸಾಮಾಜಿಕ ಪ್ರಕ್ರಿಯೆಗಳ ನಿರೀಕ್ಷೆಗಳನ್ನು ಇಟ್ಟುಕೊಂಡಿದೆ ಎನ್ನುವುದು ಮುಖ್ಯ.

ಹಾಗೆ ನೋಡಿದರೆ ಮೊದಲನೆಯದಾಗಿ ಪ್ರಜಾಪ್ರಭುತ್ವವಾದಿ ರೈತಸಂಘಕ್ಕೆ ರಾಜಕೀಯ ಕತ್ತಿಯ ಅಲಗಿನ ಮೇಲೆ ನಿಂತಿರುವ ಜನತಾ ಸರ್ಕಾರದ ಪತನದ ಆಶಯ ಗುರಿಯಾಗಬೇಕಾಗಿರಲಿಲ್ಲ. ಯಾಕೆಂದರೆ ಜನತಾ ಸರ್ಕಾರ ಬಿದ್ದರೆ ಆ ಜಾಗದಲ್ಲಿ ಕೂರಲು ಕಾಂಗ್ರೆಸ್ ಹೊರತಾಗಿ ಜನತಾಕ್ಕಿಂತ ಭಿನ್ನವಾದ ಜನಪರವಾದ ಪರ್ಯಾಯ ರಾಜಕೀಯ ಶಕ್ತಿ ಇನ್ನೂ ಬೆಳೆದಿಲ್ಲ. ರೈತ ಚಳುವಳಿ, ಮೊದಲು ... ಮಂತ ಅಜ್ಞಾನಗಳಿಂದ ಛಿದ್ರವಾಗಿರುವ ...ಡಿನ ಸತ್ವಪೂರ್ಣ ಸಾಮಾಜಿಕ ಚಳುವಳಿ ... ಬೇರುಬಿಡಬೇಕಾಗಿದೆ. ರೈತ ಸಮುದಾಯ ...ರ್ಥಿಕ ಸಂಕಷ್ಟಗಳ ವಿರುದ್ಧ ಹೋರಾಡುತ್ತಲೇ ... ಬೇರು ಬಿಡಬೇಕಾಗಿದೆ. ಇದಾಗದ ಹೊರತು ಮೇಲ್ಪಟ್ಟದ ರಸ್ತೆ–ರೈಲು ತಡೆ ಅಸಹಕಾರಗಳ ಮೂಲಕ ಆಡುವ ರಾಜಕೀಯ ಆಟ ರೈತಸಂಘವನ್ನು ಪತನದ ಕಡೆಗೇ ನೂಕುತ್ತದೆ. ಕಳೆದ ಮೂರು ವರ್ಷಗಳಿಂದ ಹಳೆ ಮೈಸೂರನ್ನು ಮೀರಿ ಬೆಳೆಯಲಾರದೆ ತೆವಳುತ್ತಿರುವ ರೈತ ಸಂಘ ಇಂಥ ಆತುರದ ರಾಜಕೀಯ ನಿರ್ಣಯದಿಂದಾಗಿ ತನ್ನ ಬೆಳವಣಿಗೆಯ ಮೆಟ್ಟಿಲುಗಳನ್ನು ತಾನೇ ಕೆಡವಿಕೊಳ್ಳುವಂತ ಮೂರ್ಖತನಕ್ಕೆ ಇಳಿದಿದೆ ಎನ್ನಿಸುತ್ತದೆ.

ಈಗ ನಡೆದಿರುವ ರಸ್ತೆ–ರೈಲು ತಡೆ ಚಳುವಳಿಗೆ ಸಾರ್ವಜನಿಕರು ತೋರುತ್ತಿರುವ ಪ್ರತಿಕ್ರಿಯೆಗಳ ಹಿನ್ನೆಲೆಯಲ್ಲೇ ಇದನ್ನು ಗುರ್ತಿಸಬಹುದು. ರೈತ ಸಂಘದ ಇಂಥ ಕಾರ್ಯಕ್ರಮಗಳನ್ನು ತೀವ್ರವಾಗಿ ವಿರೋಧಿಸುವ ಪಟ್ಟಣದ ಹಿತಾಸಕ್ತ ಜನ ಮಾಡುವ ಆರೋಪವೆಂದರೆ–"ಇದು ಶ್ರೀಮಂತ ರೈತರು ನಡೆಸಿರುವ ಚಳುವಳಿ; ಇದರಿಂದ ಬಡರೈತರು ಮತ್ತು ಕೃಷಿಕಾರ್ಮಿಕರಿಗೆ ಅನುಕೂಲವಿಲ್ಲ" ಎನ್ನುವುದು. ಕೂಲಿಕಾರ 'ದಲಿತರು ಹೆಚ್ಚು ಕೂಲಿಗಾಗಿ ಮತ್ತು ಸರ್ಕಾರಿ ಕೆಲಸಗಳಲ್ಲಿ ಮೀಸಲಾತಿಗಾಗಿ ನಡೆಸುವ ಹೋರಾಟವನ್ನೂ ಈ ಜನ ವಿರೋಧಿಸುತ್ತಾರೆನ್ನುವುದು ಸತ್ಯ.) ಪಟ್ಟಣದ ಆರ್ಥಿಕ ಮತ್ತು ರಾಜಕೀಯ ಹಿತಾಸಕ್ತಿಗಳಿಗೆ ಆಗುವ ಆಘಾತದಿಂದ ಈ ಆರೋಪ ಬಂದಿದೆ ಎಂದು ರೈತಸಂಘ ವಾದಿಸಬಹುದಾದರೂ ಇದೇ ಆರೋಪವನ್ನು ಮೊದಲಿಂದಲೂ ಹಳ್ಳಿಗಾಡಿನ ದಲಿತರೂ ಮಾಡುತ್ತಾ ಬಂದಿದ್ದಾರೆ ಎಂಬುದನ್ನು ರೈತಸಂಘ ಮರೆಯಬಾರದು.

ದಲಿತ ಚಳವಳಿ ರೈತ ಚಳವಳಿಗೆ ಜನಸಂಖ್ಯೆ ದೃಷ್ಟಿಯಿಂದ ಸರಿಸಾಟಿಯಾಗಲಾರದು ನಿಜ; ರೈತರು ಜೈಲು ತುಂಬುವ ಸಂಖ್ಯೆಯಲ್ಲಿ ದಲಿತರು ಜೈಲು ತುಂಬಲಾರರು ಎನ್ನುವುದೂ ನಿಜವಿರಬಹುದು. ಆದರೆ ದಲಿತ ಚಳುವಳಿಯು ಸಾಮಾಜಿಕ ಆರ್ಥಿಕ ರಾಜಕೀಯ ಇತ್ಯಾದಿ ಎಲ್ಲ ಬಗೆಯ ಅವಮಾನಗಳ ಮೊತ್ತದಿಂದ ಹುಟ್ಟಿಬಂದಿರುವುದರಿಂದ ಅದು ಇಡುವ ಹೆಜ್ಜೆ ಇಡೀ ವ್ಯವಸ್ಥೆಯ ಭೌತಿಕ ಮತ್ತು ನೈತಿಕ ಸ್ವರೂಪವನ್ನೇ ಅಲ್ಲಾಡಿಸುವಂತದ್ದಾಗುತ್ತದೆ. ಹಳ್ಳಿಗಾಡಲ್ಲಿ ಜೀತ ಕೂಲಿನಾಲಿ ಮಾಡಿ ಉಸಿರಾಡುತ್ತಿರುವಅಸ್ಪೃಶ್ಯ ಸಮುದಾಯದ ನೋವುಗಳೊಂದಿಗೆ ಸ್ಪಂದಿಸುವಂತಾದಾಗ, ಹಳ್ಳಿಗಾಡಿನ ಸಾಮಾಜಿಕ ಮತ್ತು ಆರ್ಥಿಕ ಸಾಮಂತಶಾಹಿ ಕೊಳಕುಗಳ ವಿರುದ್ಧ ಹೋರಾಡುವಂತ ತೀವ್ರತರ ಸಾಮಾಜಿಕ ಚಳವಳಿಯಾಗಿ ಮಾರ್ಪಾಡಾದಾಗ ಮಾತ್ರ ದಲಿತ ಚಳುವಳಿಯ ಈ ಗಟ್ಟಿತನವನ್ನು ರೈತ ಚಳುವಳಿಯೂ ಮೈಗೂಡಿಸಿಕೊಳ್ಳಲು ಸಾಧ್ಯ.

ಆಗ ನಡೆವ ರೈತಚಳುವಳಿಯನ್ನು ಪಟ್ಟಣದ ಉಂಡಾಡಿ ಜನ ಸುಲಭವಾಗಿ ತಳ್ಳಿಹಾಕಲಾರರು ಮತ್ತು ಹೆಗಡೆಯಂತ ನಯವಂಚಕ ಪುರೋಹಿತ ಮುಖ್ಯಮಂತ್ರಿಯು ರೈತ-ಬಡರೈತ, ರೈತ-ದಲಿತರ ನಡುವೆ ಎತ್ತಿಕಟ್ಟುತ್ತಾ ಅಪಹಾಸ್ಯ ಮಾಡಲಾರ

—ಸಂಪಾದಕ


ಸೊರಗಿದ ಫಿಲ್ಮೋತ್ಸವದಲ್ಲಿ: ಮಿಂಚಿದ ಕರಿಯ ಚಿತ್ರಗಳು

ಮುಂಬಯಿಯಲ್ಲಿ ನಡೆದ ಅಂತರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪಂಚಮ ಪ್ರತಿನಿಧಿಯಾಗಿ ಭಾಗವಹಿಸಿದ್ದ ವಿಜಯಕುಮಾರ್ ಕೊಟ್ಟ ವಿಶ್ಲೇಷಣಾ ವರದಿ ಇಲ್ಲಿದೆ.

ಫಿಲ್ಮೋತ್ಸವ–84, ಅಂತರಾಷ್ಟ್ರೀಯ ಚಲನ ಚಿತ್ರಗಳ ಪ್ರದರ್ಶನ ಮುಂಬಯಿಯಲ್ಲಿ ಜನವರಿ 3ರಂದು ಅಧಿಕೃತವಾಗಿ ಉದ್ಘಾಟನೆಗೊಂಡು 17 ರಂದು ಮುಕ್ತಾಯಗೊಂಡಿತು. ಸುಮಾರಾಗಿ ಹೇಳಬೇಕೆಂದರೆ ಎಲ್ಲಾ ವರ್ಷಗಳಂತೆ ಈ ವರ್ಷವೂ ಸರ್ಕಾರಿ ಮೇಳದಂತೆಯೇ ಈ ಉತ್ಸವ ಜರುಗಿತು. ಸುಮಾರು 55 ದೇಶಗಳಿಂದ ಆಯ್ದು 150 ಚಿತ್ರಗಳನ್ನು ತೋರಿಸಿದ ಫಿಲ್ಮೋತ್ಸವದಲ್ಲಿ ಜಳ್ಳೇ ಹೆಚ್ಚಾಗಿದ್ದರೂ ಅದರಲ್ಲಿ ಗಟ್ಟಿಯಾಗಿ ದ್ದುದು ಈ ಬಾರಿಯ ಆಕರ್ಷಣೆಯಾಗಿದ್ದ 'ಫೋಕಸ್ ಆನ್ ಆಫ್ರಿಕ' ದಲ್ಲಿನ ಚಿತ್ರಗಳು.

ಅಂದ ಮಾತ್ರಕ್ಕೆ ಆಫ್ರಿಕದೇಶಗಳಿಂದ ಬಂದ ಚಿತ್ರಗಳೆಲ್ಲವೂ ಅಂತರಾಷ್ಟ್ರೀಯ ಮಟ್ಟದಲ್ಲಿ ಇತರ ಚಿತ್ರಗಳೊಂದಿಗೆ ತಾಂತ್ರಿಕತೆಯಲ್ಲಾಗಲೀ ಮತ್ತು ಕೆಲವೊಂದು ವಿಚಾರಗಳಲ್ಲಿ ಸ್ಪರ್ಧಿಸುವಂತಾಗಿದ್ದವು ಅಂತಲ್ಲ. ಅಂತಹ ಬಯಕೆಯೂ ಅವುಗಳಿಗೆ ಇರಲಿಲ್ಲ. ಅದಕ್ಕೆ ತದ್ವಿರುದ್ಧವಾಗಿ ಹಾಲಿವುಡ್ ಚಿತ್ರಗಳಲ್ಲಿ ಕಾಣದಂತಹ ಕಲಾತ್ಮಕತೆಯಿಂದ ಕೂಡಿ, ತನ್ನತನ ವನ್ನು ಕಂಡುಕೊಳ್ಳುವ ಪ್ರಾಮಾಣಿಕ ಪ್ರಯತ್ನ ಈ ಎಲ್ಲಾ ಚಿತ್ರಗಳಲ್ಲೂ ಕಂಡು ಬರುತ್ತಿತ್ತು. ಇನ್ನೊಂದು ಬಹುಮುಖ್ಯವಾದ ಕಾರ್ಯ ಈ ಚಿತ್ರ ಗಳು ಮಾಡುತ್ತಿದ್ದೇವೆಂದರೆ, ಯಾವೊಬ್ಬನೇ ವೀಕ್ಷಕನಿಂದ ಈ ಅಫ್ರಿಕನ್ ಚಿತ್ರಗಳು ನೆಲೆಯಾದ ಪ್ರದೇಶ, ಜನಜೀವನ, ಸಂಸ್ಕೃತಿಯನ್ನು ಚಿತ್ರದ ಹೊರತಾಗಿ ತಿಳಿದುಕೊಳ್ಳಲೇಬೇಕೆಂಬ Demand ನ್ನು ಸೃಷ್ಟಿ ಮಾಡುತ್ತಿದ್ದುದು. ಅಷ್ಟರಮಟ್ಟಿಗೆ ನಿಜವಾಗಿಯೂ ಈ ಆಫ್ರಿಕನ್ ಚಿತ್ರಗಳು ಸಾಫಲ್ಯ ಹೊಂದಿದವು ಎಂದೇ ಹೇಳಬೇಕು.

ಆಫ್ರಿಕಾ ಒಟ್ಟಾರೆ ಒಂದೇ ದೇಶ ಎನ್ನುವ ಭಾವನೆ ನಮ್ಮಲ್ಲಿ ಬಹಳ ಜನಕ್ಕಿದೆ. ಕೆಲವರಿಗೆ ...ಕಾ ಎನ್ನುವುದು ಇದೆ ಎಂಬುದೂ ಸಹ ...ದೆಯೋ ಇಲ್ಲವೊ ! ಆಫ್ರಿಕಾ ಹಲವು ರಾಷ್ಟ್ರ ...ಳಗೊಂಡ ಒಂದು ಖಂಡ. ಅವುಗಳಲ್ಲಿ ...ಷ್ಟ್ರದಲ್ಲಿ ಕಂಡು ಬರುವಂತಹ ಭಿನ್ನ ...ಸಾಂಸ್ಕೃತಿಕ ಮತ್ತು ನಮ್ಮ ರಾಷ್ಟ್ರ ...ನಂತ ಭಿನ್ನವಾದ ರಾಜಕೀಯ, ...ಗಳನ್ನೂ ಹೊಂದಿವೆ, ಆದರೆ ...ೀ ಶತಮಾನದಲ್ಲಿ ಈ ರಾಷ್ಟ್ರ



ಪ್ರತಿಭಾವಂತ ಆಫ್ರಿಕನ್ ಚಿತ್ರನಿರ್ದೇಶಕಿ ಸಫಿಫಾಯ್

ಗಳೆಲ್ಲವನ್ನೂ ಏಕ ಚೌಕಟ್ಟಿನಿಂದ ಬಂಧಿಸಲ್ಪಟ್ಟಿ ದ್ದುದು ಬಿಳಿಯರ ಆಡಳಿತ. ಅದು ದಕ್ಷಿಣ ಸಹರ ದಲ್ಲಿದ್ದಂತೆ ಬ್ರಿಟಿಷರ ಆಡಳಿತವೇ ಇರಬಹುದು ಅಥವಾ ಉತ್ತರ ಸಹರದಲ್ಲಿದ್ದಂತೆ ಫ್ರೆಂಚ್, ಜರ್ಮ ನ್ ಅಥವಾ ಪೋರ್ಚುಗೀಸರ ಆಡಳಿತವೇ ಇರ ಬಹುದು. ಈ ಬಿಳಿಯರು ಆಗ ನೇರವಾಗಿ ನಡೆ ಸಿದ, ಈಗ ಅಪರೋಕ್ಷವಾಗಿ ನಡೆಸುತ್ತಿರುವ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕತೆಯ Rape ನ್ನು ಒಂದಲ್ಲಾ ಒಂದು ರೀತಿಯಲ್ಲಿ, ಆಫ್ರಿ ಚಿತ್ರದ ಪಿತಾಮಹ ಎಂದು ಕರೆಯಲ್ಪಡುತ್ತಿರುವ ಸೆನೆಗಲ್‌ನ ಉಸ್ಮೇನ್ ಸೆಂಬೇನೆಯಿಂದ 1966ರಲ್ಲಿ ತೆಗೆಯಲ್ಪಟ್ಟ ಆಫ್ರಿಕನ್ ಜನಾಂಗದವರಿಂದ ತೆಗೆದ ಮೊದಲನೆಯ ಚಿತ್ರವೆಂದು ಪರಿಗಣಿಸಲ್ಪಟ್ಟಿರುವ 'ಮನಿ ಆರ್ಡರ್' ನಿಂದ ಹಿಡಿದು 1982ರಲ್ಲಿ ಮಾಲಿ ದೇಶದ ಸುಲೇಮಾನ್ ಸಿಸ್ಸೆ ತೆಗೆದ 'ದಿ ವಿಂಡ್' ಚಿತ್ರದವರೆಗೂ ನೋಡಬಹುದು. ಇದ್ದು ದರಲ್ಲೇ ತೃಪ್ತಿ ಜೀವನ ನಡೆಸುತ್ತಿದ್ದ 'ಮನಿ ಆರ್ಡರ್' ಚಿತ್ರದ ನಾಯಕ ಹೊರದೇಶದಿಂದ ಬಂದ 'ಮನಿ ಆರ್ಡರ್' ನ್ನು ಬಿಡಿಸಿಕೊಳ್ಳಲು ಹೋಗಿ ಆಡಳಿತಾಶಾಹಿಯ ಮತ್ತು ಅದರಲ್ಲಿಯ ಭ್ರಷ್ಟಾಚಾರದ ಕಪಿಮುಷ್ಟಿಗೆ ಸಿಕ್ಕಿ ನರಳುವ ಚಿತ್ರಣ ಈ ಚಿತ್ರದಲ್ಲಿ ಕಂಡು ಬರುತ್ತದೆ. ವಸಾ ಹತುಶಾಹಿಯ ಬಳುವಳಿ ಯಾವ ರೂಪದಲ್ಲಿ ಈಗಿನ ಆಫ್ರಿಕನ್ ವ್ಯವಸ್ಥೆಯಲ್ಲಿ ಇಳಿದು ಇನ್ನೂ ಭೂತವಾಗಿ ಕಾಡುತ್ತಿದೆಯೆಂಬುದನ್ನು ಪರೋಕ್ಷ ವಾಗಿ ಇಲ್ಲಿ ಚಿತ್ರಿಸಿದೆ. ಅದೇ ರೀತಿ ಪಾಶ್ಚಾತ್ಯ ಪ್ರಭಾವಕ್ಕೊಳಗಾದ ಒಂದು ಸಮಾಜ ಹೇಗೆ ಅದರ ಹಿಡಿತಕ್ಕೆ ಸಿಕ್ಕಿ ತನ್ನತನವನ್ನು ಹುಡುಕುತ್ತಾ ಸಾಮಾಜಿಕವಾಗಿ, ರಾಜಕೀಯವಾಗಿ ಬಂಡೇಳು ತ್ತಾರೆಂಬುದನ್ನು ಪ್ರತಿಪಾದಿಸುವ ಚಿತ್ರ 'ದಿವಿಂಡ್'. ಈ ರೀತಿ ಆಫ್ರಿಕನ್ ಚಿತ್ರ ಅಧಿಕೃತವಾಗಿ ಅಸ್ತಿ ತ್ವಕ್ಕೆ ಬಂದ ಸುಮಾರು 15–16 ವರ್ಷಗಳಲ್ಲಿ ತೆಗೆದ ಚಿತ್ರಗಳನ್ನು ಒಂದಾದ ಮೇಲೆ ಒಂದರಂತೆ ನೋಡುತ್ತಾ ಬಂದಾಗ, ಈ ಸಿನಿಮಾ ಮಾಧ್ಯಮ ಆಫ್ರಿಕನ್ ಜನಜೀವನದಲ್ಲಿ ಯಾವ ಬಗೆಯ ಪಾತ್ರ ವನ್ನು ಹೊಂದಲು ಯತ್ನಿಸುತ್ತಿದೆ ಎಂಬ ಪ್ರಶ್ನೆ ನಮಗಿದಿರಾಗುತ್ತದೆ. ಇದಕ್ಕೆ ಮರಾಕ್ಕೋದೇಶದ ನಿರ್ದೇಶಕ ಬೆನ್ ಬರ್ಕಾ ಹೇಳುವಂತೆ ಆಫ್ರಿ ದವರು ತೆಗೆದು ನಿರ್ದೇಶಿಸುತ್ತಿರುವ ಚಿತ್ರಗಳು ಅಲ್ಲಿಯ ದೈನಂದಿನ ಜೀವನವನ್ನು ನೇರವಾಗಿ ಗುರುತಿಸುವ ಬದುಕಿನ ಅಂಗವಾಗಿದೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ವಸಾಹತುಶಾಹಿಯ ಭಾಷೆಯನ್ನು (ಉದಾ : ಇಂಗ್ಲಿಷ್, ಫ್ರೆಂಚ್, ಜರ್ಮನ್) ಶೇ80ರಷ್ಟು ಮತ್ತು ಆಫ್ರಿಕ ಭಾಷೆ ಯನ್ನು ಶೇ 90ರಷ್ಟು ಓದಲು ಬರೆಯಲು ಬಾರದ ಆ ದೇಶದ ಜನತೆಯಲ್ಲಿ ಅರಿವು ಮೂಡಿ ಸಲು ಅವರಿಂದ ಒಂದು ರೀತಿಯ Responseನ್ನು create ಮಾಡುವಲ್ಲಿ ಈ ಸಿನಿಮಾ ಮಾಧ್ಯಮ ಈ ನಿರ್ದೇ ಶಕರುಗಳ ಕೈಯಲ್ಲಿ ಒಂದು ಆಯುಧವಾಗಿ ಪರಿಣ ಮಿಸಿದೆ. ಇವರಿಂದಲೇ ಕೆಲವೊಮ್ಮೆ ಅಲ್ಲಿಯ ದೇಶದ ಸಿನಿಮಾ ಮಾಧ್ಯಮದಲ್ಲಿ ಏಕಸ್ವಾಮ್ಯ ಹಿಡಿತವನ್ನು ಸ್ಥಾಪಿಸುವ ಹೊರದೇಶದ ಫಿಲ್ಮ್ ಕಂಪನಿಗಳಿಗೂ, ಆ ದೇಶದ ಸರಕಾರಕ್ಕೂ ಇವರು ಗಳು ತಲೆನೋವಾಗಿರುವುದು ಮತ್ತು ಇದೇ ಆಫ್ರಿ ಕನ್ ಜನತೆಯ ಅನಕ್ಷರತೆಯ ಕಾರಣಕ್ಕಾಗಿಯೇ ಅಲ್ಲಿಯ ಕೆಲವೊಂದು ಚಿತ್ರಗಳಲ್ಲಿ ನೇರ ನಿರೂಪಣೆ ಯನ್ನು ಅಳವಡಿಸಿಕೊಂಡಿರುವುದು. ಉದಾ :– upper voltaದ ನಿರ್ದೇಶಕ ಗಸ್ಟೋನ್ ಜೆ. ಬಿ. ಕಬೋರ ಚಿತ್ರಿಸಿ ರುವ 'ವೆನ್‌ಕುನ್ನಿ' ಮತ್ತು ಏಕೈಕ ಮಹಿಳಾ ನಿರ್ದೇ ಶಕಿ ಸಫಿಫಾಯ್ ತೆಗೆದಿರುವ 'A letter from the village' ಅತ್ಯುತ್ತಮ ಉದಾಹರಣೆ. ಇಲ್ಲಿ ವ್ಯಾಖ್ಯಾನುಸಾರ ಚಿತ್ರದುದ್ದಕ್ಕೂ ಡಾಕ್ಯುಮೆಂಟರಿ ತರಹದಲ್ಲಿ ನಿರೂಪಿಸುತ್ತಾ, ನಿರ್ದೇಶಕ ತಾನು

ಹೇಳಬೇಕೆಂದಿರುವುದನ್ನು ನೇರವಾಗಿ ಜನರಿಗೆ ತಲುಪಿಸುತ್ತಾನೆ. 'ವೆನ್‌ಕುನ್ನಿ' ಯ ಚಿತ್ರದ ಪ್ರಾರಂಭದಲ್ಲಿ ವ್ಯಾಖ್ಯಾನಿಸುವ ಸಾಲುಗಳು ಈ ರೀತಿ ಇವೆ. "In those days before the white man had set foot on African soil, the country flourished, the granaries were filled with millet the wells and rivers were full of water peace and happiness prevailed every where" ಈ ಕೊನೆಯ ವಾಕ್ಯದ ತುಂಡನ್ನೇ ಆಧಾರಿತವಾದ ಈ ಚಿತ್ರ ತನ್ನ ಇಡೀ ಚಿತ್ರದಲ್ಲಿ ಆಫ್ರಿಕನ್ ಜನಾಂಗದ ಪ್ರತಿಯೊಬ್ಬ ಮನುಷ್ಯನು ಬಯಸುವ ಈ ವಾತವರಣದ ಸೃಷ್ಟಿಯತ್ತ ಸಾಗಿ ಇಡೀ ಚಿತ್ರಕ್ಕೆ ಒಂದು ಸುಂದರ ಚೌಕಟ್ಟನ್ನು ಒದಗಿಸುತ್ತದೆ. 'ವೆನ್‌ಕುನ್ನಿ' ಯಲ್ಲಿ ಈ ನಿರೂಪಣೆ pre-colonial period ನಲ್ಲಿ ಇದ್ದಿರಬಹುದಾದ ಒಂದು ಆದರ್ಶಪ್ರಾಯ ಸಮಾಜವನ್ನು ಬಯಸುವ ಆಫ್ರಿಕಾ ಜನರ ಹಂಬಲವನ್ನು ಚಿತ್ರಿಸಲು ನೆರವಾದರೆ ಸೆನೆಗಲ್‌ನ ಸಫಿ ಫಾಯ್ ನಿರ್ದೇಶಿಸಿರುವ A letter from villageನಲ್ಲಿ ಒಂದು ಹಳ್ಳಿಯ ವಾಸ್ತವ ಸ್ಥಿತಿಯನ್ನು ಪ್ರತಿಬಿಂಬಿಸಲು ಉಪಯೋಗಿಸಲಾಗಿದೆ.

ಈಗ Contemprory ಆರ್ಥಿಕ, ಸಾಮಾಜಿಕ ವ್ಯವಸ್ಥೆಯನ್ನು, ಅದು ತಂದೊಡ್ಡುತ್ತಿರುವ ಸಂಕಷ್ಟ-ಕೋಟಲೆಗಳನ್ನು ಚಿತ್ರಿಸಲು ಹವಣಿಸಿರುವ ಈ ಚಿತ್ರ African ritual culture ಮತ್ತು Traditionನ್ನು ಹದವಾಗಿ, ಸರಳವಾಗಿ, ಪರಿಣಾಮಕಾರಿಯಾಗಿ ಬೆರೆಸುತ್ತಾ ಸಮಗ್ರರೀತಿಯಲ್ಲಿ ಒಂದು ಹಳ್ಳಿಯ ಜನಜೀವನವನ್ನು ನಮ್ಮ ಮುಂದೆ ಇಡುತ್ತಾ ಬರುತ್ತದೆ (ಈ ಚಿತ್ರದಲ್ಲಿ ನಟಿಸಿರುವವರೆಲ್ಲಾ ಆ ಹಳ್ಳಿಯಜನರೇ !) ಇದನ್ನು ಹೇಳಲು ಕಾರಣವಿಷ್ಟೇ, ಹಿಂದೆ ಆಫ್ರಿಕನ್ ಸಮುದಾಯ (Tribe) ದಲ್ಲಿ ಒಬ್ಬ 'ಕಥೆಗಾರ' ಇರುತ್ತಿದ್ದನಂತೆ, ಆತ ಹಲವಾರು ತಲೆಮಾರುಗಳಿಂದ ಬಾಯಿಯಿಂದ ಬಾಯಿಗೆ ಬಂದ ಘಟನೆಗಳನ್ನು, ಕಥೆಗಳನ್ನೂ ಚಾಚೂ ತಪ್ಪದೆ ತನ್ನ ಜನರಿಗೆ ಹೇಳುವುದು ಆತನ ಕಸುಬಾಗಿತ್ತು. ಅದನ್ನು ಕೇಳಲು ದಿನಾರಾತ್ರಿ ಜನರ ಗುಂಪೇ ಆತನ ಸುತ್ತ ನೆರೆದಿರುತ್ತಿತ್ತು. ಅಂತಹ Oral ಸಂಪ್ರದಾಯವನ್ನೇ ಸಿನಿಮಾ ಮಾಧ್ಯಮಕ್ಕೂ ಅಳವಡಿಸಿಕೊಂಡು, ಜನರನ್ನು ತಲುಪಲು ಮತ್ತು ಜನರ ಮಧ್ಯದಿಂದ ಬೆಳೆಯಲು ತವಕಿಸುತ್ತಿರುವ ಈ ಆಫ್ರಿಕನ್ ಚಿತ್ರಗಳು ಪರಿಣಾಮಕಾರಿಯಾಗಿ ಮೂಡಿಬರಲು ಎಂತಹ ಸರಳ ಮತ್ತು effective ತಂತ್ರಗಳನ್ನು ಉಪಯೋಗಿಸಿಕೊಳ್ಳುತ್ತಿದೆ ಎಂದು. ಇಷ್ಟೇ ಸರಳ ಮತ್ತು Complex ತಂತ್ರಗಳನ್ನು ಅಳವಡಿಸಿಕೊಂಡು ತೆಗೆದಿರುವ ಚಿತ್ರಗಳಲ್ಲಿ. ಉಲ್ಲೇಖಿಸುವಂತಾದ್ದು ಇಥಿಯೋಫಿಯದಲ್ಲಿ ಹುಟ್ಟಿ ಈಗ ತಾತ್ಕಾಲಿಕವಾಗಿ ವಾಷಿಂಗ್ಟನ್‌ನಲ್ಲಿ ನೆಲಸಿರುವ ಹೇಲೆ ಗೆರಿಮಾನಿರ್ದೇಶಿಸಿರುವ ಚಿತ್ರಗಳು ಈತನ Harvest 3000-years (1976) ನ್ನು 1974 ರಲ್ಲಿ ಇಥಿಯೋಫಿಯದಲ್ಲಿ Haile Selassie ದೊರೆಯನ್ನು ಕೆಳಗಿಳಿಸುವ ಮುಂಚೆ ತೆಗೆಯಲಾಯಿತು. ಇದು ಚಿತ್ರಿಸಿರುವ ಇಥಿಯೋಪಿಯಾ ದೇಶದ ಹಳ್ಳಿಯ ದಟ್ಟ ಚಿತ್ರಗಳು, ಒಂದು ಸಾಮಾನ್ಯ ಹಳ್ಳಿಯಲ್ಲಿ ಒಂದು ದಿನದಲ್ಲಿ ನಡೆಯುವ ಘಟನೆಗಳು ; ಒಂದೊಂದು Detail ಗೂ ಕೊಟ್ಟಿರುವ Importance ಅಲ್ಲಲ್ಲಿ ಪ್ರಜ್ಞಾಪೂರ್ವಕವಾಗಿ ಅಳವಡಿಸಿರುವ ನಿಶ್ಯಬ್ದತೆ ಮತ್ತು ಸರಳ ನಿರೂಪಣೆ ಆ ಜನರು ನಡೆಸುತ್ತಿರುವ ಜೀವನದ ಭೀಕರತೆಯನ್ನು ಚಿತ್ರಿಸುವಲ್ಲಿ ಯಶಸ್ವಿಯಾಗಿದೆ. ಇದರ ಪರಿಣಾಮವನ್ನು ಯಾರಾದರೂ ಊಹಿಸಬಹುದಾಗಿದ್ದು ಈ ಚಿತ್ರವನ್ನು ಅಲ್ಲಿಯ ಸರಕಾರ ಬಹಿಷ್ಕರಿಸಿತು. ಈತ ಕಪ್ಪುಅಮೆರಿಕನ್ನರಮೇಲೆ ತೆಗೆದ ಇನ್ನಿತರಮೂರು ಚಿತ್ರಗಳು Child of resistance, Bushmama, Ashes and embers ಅಷ್ಟೇ ಕ್ಲಿಷ್ಟ ನಿರೂಪಣೆಯನ್ನು ಹೊಂದಿವೆ. ಚಿತ್ರದ ನಿರೂಪಣೆಯಲ್ಲಿ Holy Wood ಶೈಲಿಯ ಮೇಲೆ ಬಂಡಾಯವೆದ್ದ ಈತ ತನ್ನ ಚಿತ್ರಗಳಲ್ಲಿ Documentary ತರಹದ ವಿಷಯ ನಿರೂಪಣೆ ಮತ್ತು Surreal ಶೈಲಿಯ Blend ನ್ನೂ ಅಳವಡಿಸಿಕೊಂಡು, ವೀಕ್ಷಕನಿಗೆ, ಹೇಳಬೇಕೆಂದಿರುವುದನ್ನು Powerful ಆಗಿ ಅಭಿವ್ಯಕ್ತಗೊಳಿಸುತ್ತಾನೆ. ಈ ರೀತಿಯ ಆರ್ಥಿಕ ರಾಜಕೀಯ ಸಾಮಾಜಿಕ ವಿಷಯಗಳನ್ನೊಟ್ಟಿಗೆ ಒಳಗೊಂಡು analytic ಆಗಿ ನಿರೂಪಿತವಾದ ಚಿತ್ರಗಳು ಕೆಲವೇ ಇದ್ದರೂ ಅವುಗಳಲ್ಲಿ ಬೆನ್ ಬರ್ಕಾ ನಿರ್ದೇಶಿಸಿದ 1000 and one Hands (Monocco) ಕೂಡ ಹೆಸರಿಸಬಹುದಾಗಿದ್ದುದು ವರ್ಗ ಸಂಘರ್ಷಣೆಯ ಎಳೆಯನ್ನು ನಿಶಬ್ದವಾಗಿ (ಇಲ್ಲಿ ಘಟನೆ ನಡೆಯುವ ವಾತಾವರಣಕ್ಕೆ ಹೆಚ್ಚು ಒತ್ತುಕೊಟ್ಟು ಆ ಪರಿಸರದಲ್ಲಿ ಪಾತ್ರಗಳು ಹೆಚ್ಚು ಮಾತನಾಡದೆ ಮೂಕರೀತಿಯಲ್ಲಿ ಚಲಿಸುತ್ತಾ, ಇಡೀ ವಾತಾವರಣ ಪಾತ್ರಗಳ ಮೇಲೆ Dominate ಮಾಡುವ ರೀತಿ ಬಹು ಪರಿಣಾಮವಾಗಿ ಮೂಡಿ ಬಂದಿದೆ) ಚಿತ್ರಿಸುವ ಈ ಚಿತ್ರ ರತ್ನಗಂಬಳಿಯ ಕಾರ್ಖಾನೆಯಲ್ಲಿ ಕೆಲಸ ಮಾಡುವ ಒಂದು ಸಂಸಾರದ ದುರಂತ ಕಥೆಯನ್ನು ಚಿತ್ರಿಸುತ್ತದೆ.

ರಾಜಕೀಯ ಸೊಗಡುಳ್ಳ ಇನ್ನಿತರ ಚಿತ್ರವೆಂದರೆ ಪಾಲೀಸ್ ವ್ಯೆಯ್ಯ ನಿರ್ದೇಶಿಸಿದ 'ಹೌಸ್ ಅರೆಸ್ಟ್' ಮತ್ತು ಮಾಲಿಯ ಸುಲೇಮಾನ್ ಸಿಸ್ಸೆ ತೆಗೆದಿರುವ 'ದಿ ಪೋರ್ಟರ್' ಚಿತ್ರಗಳು.

ಮೆಡ್ ಹೊಂಡೋ ನಿರ್ದೇಶಿಸಿದ 'ಸೋಲಿಲೋ' ಮತ್ತು 'ವೆಸ್ಟ್ ಇಂಡೀಸ್ : ಫ್ಯುಗೆಟಿವ್ ಸ್ಲೇವ್ಸ್ ಆಫ್ ಲಿಬರ್ಟಿ' ಚಿತ್ರಗಳು ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಆಫ್ರಿಕ ಜನರ ಸ್ಥಿತಿಗತಿಯನ್ನು ಪ್ರತಿಬಿಂಬಿಸುವುದರ ಜತೆಗೆ ಚಾರಿತ್ರಿಕ ಹಿನ್ನೆಲೆಯಲ್ಲಿ ಆ ಧಾರ್ಮಿಕತೆಯನ್ನು ವಿಶ್ಲೇಷಿಸುತ್ತಾ ಹೋಗುತ್ತವೆ. ಈಗ ನೆಲಸಿರುವ ಎರಡು ಮುಖ್ಯ ಧರ್ಮಗಳು (ಕ್ರಿಶ್ಚಿಯನ್, ಮುಸ್ಲಿಮ್) ಮೂಲವಾಗಿ ಆಫ್ರಿಕನ್ ನೆಲೆಯಿಂದ ಬಂದವಾಗಿರದೆ ಹೊರ ಜನರಿಂದ ಆಫ್ರಿಕನ್ ಜನರ ಮೇಲೆ ಹೇರಿರುವ ಧರ್ಮವಾಗಿದೆ ಎಂಬ ಭಾವನೆಯನ್ನು ಉಂಟುಮಾಡುವ ಈ ಚಿತ್ರಗಳು ಆಫ್ರಿಕನ್ ಜನಾಂಗವನ್ನು ಇವುಗಳಿಂದ ಬೇರ್ಪಡಿಸಿ ಒಂದು ನಗ್ನಾವಸ್ಥೆ ತಂದು ಅಲ್ಲಿಂದ ನಿಜವಾದ 'ಧರ್ಮ'ವನ್ನು ಹುಡುಕುವ ಪ್ರಯತ್ನ ಈ ಚಿತ್ರಗಳಲ್ಲಿ ಕಂಡುಬರುತ್ತದೆ. ಹಾಗೆಯೇ ಈ ಧರ್ಮಗಳು ಆಫ್ರಿಕನ್ ದೇಶದಲ್ಲಿ ಕಾಲಿಟ್ಟು ಕೊನೆಗೆ ಹೇಗೆ ವಸಾಹತುಶಾಹಿಗೆ ದಾರಿ ಮಾಡಿಕೊಟ್ಟವು ಎಂಬುದನ್ನು ಕಾಂಗೋ ದೇಶದ J. M. Tchi soukou ನಿರ್ದೇಶಿಸಿರುವ 'ದಿ ಚಾಪೆಲ್' ಚಿತ್ರದಲ್ಲಿ ಸೊಗಸಾಗಿ, ಸರಳವಾಗಿ ಮತ್ತು ಪರಿಣಾಮಕಾರಿಯಾಗಿ ಮೂಡಿ ಬಂದಿದೆ. ಧರ್ಮವನ್ನು ಬೋಧನೆ ಮಾಡುವ ಪಾದ್ರಿ ಮೊದಲ ಬಾರಿಗೆ ಬರುವಾಗ ಬೈಬಲ್ ಹಿಡಿದುಕೊಂಡು ಬರುತ್ತಾನೆ. ಆದರೆ ಚಿತ್ರದ ಕೊನೆಯ ಹೊತ್ತಿಗೆ ಆ ಪಾದ್ರಿಯ ಜೊತೆ ಸೈನಿಕರು ಬರುತ್ತಾರೆ.

ಮುಸ್ಲಿಮ್ ಧರ್ಮದ ಸಾಮಾಜಿಕ ಮತ್ತು ಆರ್ಥಿಕ ನೆರಳಲ್ಲಿ ಸ್ತ್ರೀಯರ ಸ್ಥಾನಮಾನಗಳನ್ನು ಗುರುತಿಸುವ ಪ್ರಯತ್ನ 'ಒನ್ ಮ್ಯಾನ್ ಸವೆರಲ್ ಉಮೆನ್' 'ದಿ ಗರ್ಲ್' 'ದಿ ಪ್ರೈಸ್ ಆಫ್ ಲಿಬರ್ಟಿ' ಚಿತ್ರಗಳಲ್ಲಿ ಕಾಣಬಹುದು.

ನಾನು ಮೊದಲೇ ಹೇಳಿದ ಹಾಗೆ ಈ ಚಿತ್ರಗಳಲ್ಲಿ ಲೋಪದೋಷಗಳು ಇಲ್ಲದೇ ಇಲ್ಲ. ಆ ರೀತಿ ನೋಡಿದರೆ ಉತ್ತಮ ಚಿತ್ರಗಳೆಂದು ಪರಿಗಣಿಸಲ್ಪಟ್ಟ One thousand and one Hands ನಲ್ಲಿ ಕಂಡುಬರುವ Crude symbols ಗಳು Ashes emders ನಲ್ಲಿ ಮನಸ್ಸಿನ ಸ್ಥಿಮಿತವನ್ನು ಪರೀಕ್ಷಿಸುವಂತೆ ಬಳಸಿರುವ ಅತಿ ಉದ್ದದ Documantry ತರಹದ ನಿರೂಪಣೆ, A letter from village ನ ಕಥಾವಸ್ತುವಿನಲ್ಲಿ ಕಂಡುಬರುವ ಜಾಳ...ಮುಂತಾದವುಗಳು ಒಂದಲ್ಲಾ ಒಂದು ರೀತಿ ಎಲ್ಲಾ ಚಿತ್ರಗಳಲ್ಲೂ ಕಾಣಬಹುದು. ಆದರೆ ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಆಫ್ರಿಕಾದಲ್ಲಿ ಕೇವಲ 15 ವರ್ಷಗಳ ಹಿಂದೆ ಹುಟ್ಟಿದ ಈ ಮಾಧ್ಯಮ ತನ್ನ ಸಾಮಾಜಿಕ 'ಜವಾಬ್ದಾರಿ'ಯನ್ನು ಅರಿತು, ಸಮಾಜದ ಬೆಳವಣಿಗೆಗೆ ಪೂರಕವಾಗಿ ತಳೆದಿರುವ ಪ್ರಾಮಾಣಿಕ ಮತ್ತು ದಿಟ್ಟ ಹೆಜ್ಜೆ. ಮತ್ತು ಇದನ್ನು ಕಾರ್ಯಗತಗೊಳಿಸಲು ಅದು ಎಷ್ಟೇ ಲೋಪದೋಷಗಳಿಂದ ಕೂಡಿದ್ದರೂ ಆ ದಾರಿಯಲ್ಲಿ ಸಾಗಲು ಹುಡುಕುತ್ತಿರುವ ಹೊಸ approach ನ್ನು ಈ ಎಲ್ಲಾ ಚಿತ್ರಗಳಲ್ಲೂ ಕಾಣಬಹುದು. ●

ಸಾಧನೆಯ ಸಂವತ್ಸರ ಭರವಸೆಗಳ ಈಡೇರಿಕೆಯ ದೃಢಸಂಕಲ್ಪ

ಒಂದು ವರ್ಷದ ಹಿಂದೆ ಜನತೆ ನೀಡಿದ ನಿರ್ಣಯದಂತೆ ಕರ್ನಾಟಕದಲ್ಲಿ 10 ನೇ ಜನವರಿ 1983 ರಂದು ಜನತಾ ಸರ್ಕಾರ ಅಧಿಕಾರಕ್ಕೆ ಬಂದಿತು. ತನ್ನ ಆಡಳಿತದ ಪ್ರಥಮ ವಾರ್ಷಿಕ ದಿನದಂದು ಜನತೆಗೆ ಒಂದು ವರ್ಷದ ಕೆಳಗೆ ತಾನು ನೀಡಿದ್ದ ಭರವಸೆಗಳನ್ನು ಬಹುತೇಕ ಈಡೇರಿಸಿದ ಸಮಾಧಾನ ಸರ್ಕಾರಕ್ಕಿದೆ. ನೀಡಿದ್ದ ಆಶ್ವಾಸನ ಮತ್ತು ಸಾಧಿಸಿರುವ ಪ್ರಗತಿಯ ಚಿತ್ರ ಇಂದು ಜನತೆಯ ಮುಂದಿದೆ.

ಸ್ವಚ್ಛ ಆಡಳಿತ

ಅಧಿಕಾರದ ಎಲ್ಲ ರಂಗಗಳಲ್ಲೂ ಭ್ರಷ್ಟಾಚಾರ ನಿವಾರಣೆಗೆ ಲೋಕಾಯುಕ್ತರ ನೇಮಕ. ಮುಖ್ಯಮಂತ್ರಿಗಳೂ ಸೇರಿದಂತೆ ಸಾರ್ವಜನಿಕ ರಂಗದ ಎಲ್ಲ ಅಧಿಕಾರಿಗಳೂ ಇದರ ವ್ಯಾಪ್ತಿಗೆ ಒಳಪಡುವರು. ಸಾರ್ವಜನಿಕರ ಕುಂದುಕೊರತೆಗಳ ಶೀಘ್ರ ನಿವಾರಣೆಗಾಗಿಯೇ ಒಂದು ಪ್ರತ್ಯೇಕ ಸಚಿವ ಶಾಖೆ. ಪಕ್ಷಾಂತರ ನಿಷೇಧಕ್ಕೆ ಮಸೂದೆ.

ಆಡಳಿತ ವಿಕೇಂದ್ರೀಕರಣ

ಜಿಲ್ಲಾ ಪರಿಷತ್ತುಗಳು ಮಂಡಳ ಪಂಚಾಯಿತಿಗಳು ಮತ್ತು ನ್ಯಾಯಪಂಚಾಯತಿಗಳ ರಚನೆಗಾಗಿ ಪಂಚಾಯತ್ ರಾಜ್ಯ ಮಸೂದೆ ಅಧಿಕಾರ ವಿಕೇಂದ್ರೀಕರಣದ ದಿಸೆಯಲ್ಲಿ ಇದೊಂದು ದಿಟ್ಟ ಹೆಜ್ಜೆ.

- ಪ್ರಥಮಬಾರಿಗೆ ನಗರ ಸಭೆ ಮತ್ತು ಪುರಸಭೆಗಳಿಗೆ ಚುನಾವಣೆ ನಡೆಸಿದ ಹೆಮ್ಮೆ.
- ಹದಿನೆಂಟು ವರ್ಷ ತುಂಬಿದವರಿಗೆಲ್ಲ ನಗರ-ಪುರಸಭಾ ಚುನಾವಣೆಗಳಲ್ಲಿ ಮತಾಧಿಕಾರ ವಿಸ್ತರಣೆ.
- ನಗರಸಭೆ ಹಾಗೂ ಪುರಸಭೆಗಳಲ್ಲಿ ಮಹಿಳೆಯರಿಗೆ ಶೇ. 20 ಸ್ಥಾನಗಳ ಮೀಸಲು.

ಕನ್ನಡಕ್ಕೆ ಅಗ್ರಸ್ಥಾನ

- ಶಾಲೆಗಳಲ್ಲಿ ಕನ್ನಡ ಕಲಿಕೆ ಕಡ್ಡಾಯ.
- ಆಡಳಿತದ ಎಲ್ಲ ಹಂತಗಳಲ್ಲೂ ಕನ್ನಡದ ಬಳಕೆ ; ಕಣ್ಣಿಟ್ಟು ನೋಡಲು ಕಾವಲು ಸಮಿತಿ.

ಗ್ರಾಮೀಣ ಅಭಿವೃದ್ಧಿ

- ಎರಡು ವರ್ಷಗಳಲ್ಲಿ ಎಲ್ಲ ಹಳ್ಳಿಗಳಿಗೂ ಕುಡಿಯುವ ನೀರಿನ ಪೂರೈಕೆ. ಇದುವರೆಗೆ 1600ಕ್ಕೂ ಹೆಚ್ಚು ಕೊಳವೆಬಾವಿಗಳ ನಿರ್ಮಾಣ.
- ಗ್ರಾಮೀಣ ಬಡಜನರಿಗೆ ವರ್ಷವಿಡೀ ಉದ್ಯೋಗ ನೀಡುವ ಸಲುವಾಗಿ ಗ್ರಾಮೀಣ ಉದ್ಯೋಗ ಯೋಜನೆ.
- ರೈತರಿಗೆ 36 ಕೋಟಿ ರೂ. ಯಷ್ಟು ವಿವಿಧ ರಿಯಾಯಿತಿಗಳು ಸಾಲಗಳ ಮನ್ನಾ, ನೀರಿನ ತೆರಿಗೆಯಲ್ಲಿ ವಿನಾಯಿತಿ. ವಿಫಲವಾದ ನೀರಾವರಿ ಬಾವಿಗಳಿಗೆ ಸಹಾಯಧನ.
- 80,000 ಹೆಕ್ಟೇರುಗಳಷ್ಟು ಹೆಚ್ಚುವರಿ ಭೂಮಿಗೆ ನೀರಾವರಿ ವಿಸ್ತರಣೆ.
- ಎಲ್ಲಾ ವಸತಿರಹಿತ ಕೃಷಿಕರಿಗೆ ಇನ್ನೆರಡು ವರ್ಷಗಳಲ್ಲಿ ಗೃಹ ನಿವೇಶನಗಳ ಹಂಚಿಕೆ-ಜನತಾ ಮನೆಗಳ ನಿರ್ಮಾಣಕ್ಕಾಗಿ ಈ ವರ್ಷ 12 ಕೋಟಿ ರೂ. ವೆಚ್ಚ.
- ಕಡು ಬಡವರ ಉದ್ಧಾರಕ್ಕಾಗಿ 45 ತಾಲ್ಲೂಕುಗಳಲ್ಲಿ ಅಂತ್ಯೋದಯ ಯೋಜನೆ ಆರಂಭ.

ಕೈಗಾರಿಕೆ

- ಹೊಸ ಕೈಗಾರಿಕಾ ನೀತಿಯಂತೆ ಪ್ರತಿವರ್ಷ 1000 ಸಣ್ಣ ಮತ್ತು ಗೃಹ ಕೈಗಾರಿಕೆಗಳನ್ನು ಸ್ಥಾಪಿಸುವ ಸಂಕಲ್ಪ.
- ಕೈಮಗ್ಗ ಮತ್ತು ಕರಕುಶಲ ಉತ್ಪನ್ನಗಳಿಗೆ ವಿಶೇಷ ಉತ್ತೇಜನ, ಮುಂದಿನ 5 ವರ್ಷಗಳಲ್ಲಿ 20,000 ಖಾದಿ ಮತ್ತು ಗ್ರಾಮೋದ್ಯೋಗ ಘಟಕಗಳ ಸ್ಥಾಪನೆಯ ಗುರಿ.

ಶಿಕ್ಷಣ

- ಶಿಕ್ಷಣವ್ಯವಸ್ಥೆಯ ಸುಧಾರಣೆಗೆ ಸಮಗ್ರ ಮಸೂದೆಯ ಮಂಡನೆ.
- "ಅಕ್ಷರ ಸೇನೆ" ಅನಕ್ಷರತೆಯ ನಿರ್ಮೂಲನಕ್ಕಾಗಿ ಕೈಗೊಂಡಿರುವ ಒಂದು ಬೃಹತ್ ಯೋಜನೆ.
- ಕರ್ನಾಟಕ ವಿದ್ಯಾರ್ಥಿಗಳಿಗೆ ಇಲ್ಲಿಯ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕ್ಯಾಪಿಟೇಶನ್ ಶುಲ್ಕದಿಂದ ವಿನಾಯಿತಿ.
- ಮುಂದಿನ 5 ವರ್ಷಗಳಲ್ಲಿ ಕ್ಯಾಪಿಟೇಶನ್ ಶುಲ್ಕವನ್ನು ಹಂತ ಹಂತವಾಗಿ ತೊಡೆದು ಹಾಕಲು ಸುಗ್ರೀವಾಜ್ಞೆಯ ಜಾರಿ.

ಸಮಾಜ ಕಲ್ಯಾಣ

- ಪ್ರತಿಭಾವಂತ ಹರಿಜನ, ಗಿರಿಜನ ಪದವೀಧರರಿಗೆ ಸರ್ಕಾರದ ಗೆಜೆಟೆಡ್ ಹುದ್ದೆಗಳಿಗೆ ನೇರ ನೇಮಕಾವಕಾಶ.
- ದೇವದಾಸಿ ಪದ್ಧತಿಯ ನಿರ್ಮೂಲನೆ.
- ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ನೀಡಲಾಗುತ್ತಿರುವ ವಿದ್ಯಾರ್ಥಿವೇತನ ಮೊತ್ತದ ಹೆಚ್ಚಳ
- ಹಿಂದುಳಿದ ವರ್ಗಗಳ ಏಳಿಗೆಗಾಗಿ ದ್ವಿತೀಯ ಹಿಂದುಳಿದ ವರ್ಗಗಳ ಆಯೋಗ ಹಾಗೂ ಅಲ್ಪ ಸಂಖ್ಯಾತರ ಹಿತರಕ್ಷಣೆಗೆ ಪ್ರಥಮ ಬಾರಿಗೆ ಅಲ್ಪ ಸಂಖ್ಯಾತರ ಆಯೋಗಗಳ ರಚನೆ.

ಉದ್ಯೋಗ

- 24,000 ದಿನಗೂಲಿ ಕಾರ್ಮಿಕರಿಗೆ ಖಾಯಂ ಉದ್ಯೋಗದ ಭರವಸೆ.
- ಕಡಿಮೆ ಆದಾಯದ ಪಿಂಚಣಿದಾರ ಸರ್ಕಾರಿ ನೌಕರರಿಗೆ ... (ಕಡಿಮೆ ಆದಾಯದ ಪತ್ರಿಕೋದ್ಯೋಗಿಗಳಿಗೆ ನಿವೃತ್ತಿ ವೇತನ ಮತ್ತ ವೈದ್ಯಕೀಯ ಸೌಲಭ್ಯಗಳ ನೀಡಿಕೆ.)
- ಜನ ಸಮುದಾಯ ಸಮಗ್ರ ಪ್ರಗತಿಗೆ ನೆರವಾಗುವ ಇಂತಹ ನೂರಾರು ಪ್ರಗತಿಪರ ಕಾರ್ಯಕ್ರಮಗಳ ಮುನ್ನಡೆ.

ಈ ಸಾಧನೆಯ ಹಾದಿಯಲ್ಲಿ ಎದುರಿಸಿದ ಅಡ್ಡಿ ಆತಂಕಗಳು ಅಸಂಖ್ಯಾತ. ಆದರೂ ಜನತೆಯ ಆಶೋತ್ತರಗಳ ಕನಸನ್ನು ನನಸಾಗಿಸಲು ಅದರಲ್ಲಿಯೂ ಕಡು ಬಡವರ ಏಳಿಗೆಯನ್ನು ಸಾಧಿಸಲು ಸರ್ಕಾರ ದೃಢ ಸಂಕಲ್ಪ ಹಾಗೂ ಸಮರ್ಪಣಾಭಾವದಿಂದ ಅವಿರತ ಶ್ರಮಿಸುತ್ತಿದೆ. ಮುಂದೆಯೂ ಶ್ರಮಿಸುತ್ತದೆ.

'ಜನತೆಯ ಆಶೋತ್ತರಗಳಿಗೆ ಸದಾಮಿಡಿಯುವ ಸರ್ಕಾರ--'ಜನತಾ ಸರ್ಕಾರ'

ಕರ್ನಾಟಕ ವಾರ್ತೆ

ರಾಜಕಾರಣ ಮತ್ತು ಭಾಷೆ

'ಗ್ಲಲಳ' ಕಾದಂಬರಿ ಖ್ಯಾತಿ ಆರ್ವೆಲ್ಲನ ವಿಚಾರಗಳು

ಅಸಕ್ತರಿಗೆ ಇಂದು ಭಾಷೆ ಕೆಡುತ್ತಿದೆಯೆಂದೂ ತಿಳಿದಿದೆ. ಇದಕ್ಕೆ ಕಾರಣ ಒಟ್ಟು ನಾಗರಿಕತೆ ಕೆಡುತ್ತಿರುವುದೇ ಎಂದೂ, ಪ್ರಜ್ಞಾಪೂರ್ವಕವಾದ ಯಾವುದೇ ವಿಧಾನದಿಂದಲೂ ಇದನ್ನು ತಡೆಯಲಾಗುವುದಿಲ್ಲವೆಂದು ಇವರ ತಿಳಿವಳಿಕೆ. ಭಾಷೆ ಒಂದು ಸಹಜ ಬೆಳವಣಿಗೆಯೆ ವಿನಾ ನಮ್ಮ ಉದ್ದೇಶಗಳಿಗಾಗಿ ರೂಪಿಸುವ ಸಾಧನವಲ್ಲ ಎಂಬ ಅರೆನಂಬುಗೆ ಈ ತಿಳಿವಳಿಕೆಗೆ ಕಾರಣ.

ಈಗ ಭಾಷೆಯ ಅವನತಿಗೆ ರಾಜಕೀಯ ಮತ್ತು ಆರ್ಥಿಕ ಕಾರಣಗಳಿವೆಯೆಂಬುದು ಸ್ಪಷ್ಟವಿದೆ. ಅವನತಿಗೆ ಯಾವುದೇ ಒಬ್ಬ ಬರಹಗಾರನ ಪ್ರಭಾವ ಕಾರಣವಲ್ಲವೆಂಬುದು ಸ್ಪಷ್ಟವಿದೆ. ಆದರೆ ಪರಿಣಾಮವೆ ಕಾರಣವಾಗಿ ಮಾರ್ಪಟ್ಟು ಪರಿಣಾಮದ ತೀವ್ರತೆ ಹೆಚ್ಚುವಂತಾಗಬಹುದು. ಭಾಷೆಗೆ ಸಂಭವಿಸುತ್ತಿರುವುದು ಇದೇ. ಆಲೋಚನೆಗಳು ಮೂರ್ಖವಾಗಿದ್ದರೆ ಭಾಷೆ ಅಶುದ್ಧವಾಗಿ ಕೆಡವುದು. ಅದೇ ಕೆಟ್ಟ ಭಾಷೆಯಿಂದ ನಾವು ಮೂರ್ಖ ಆಲೋಚನೆಗಳನ್ನು ಸುಲಭವಾಗಿ ಭರಿಸಿಬಿಡಬಹುದು. ಇದೇ ಪ್ರಕ್ರಿಯೆಯು ವಿಪರ್ಯಾಸ ಹೊಂದಬಹುದೆಂಬುದನ್ನು ಗಮನಿಸಿ ಸ್ಪಷ್ಟವಾಗಿ ಆಲೋಚಿಸುವುದು ಸಾಧ್ಯವಾದರೆ ಭಾಷೆಯ ಅವನತಿಯನ್ನು ತಡೆಯಬಹುದು.

ಉಪಮೆಗಳಲ್ಲಿ ನಾವೀನ್ಯದ ಅಭಾವ ಮತ್ತು ನಿಚಿತತೆಯ ಅಭಾವ ಇವುಗಳು ಸದ್ಯದ ಬರೆಹದಲ್ಲಿ ಕಾಣಬರುವ ಅಂಶಗಳು. ಬರಹಗಾರನಿಗೆ ಏನೊ ಹೇಳುವುದಿದ್ದು ಅಭಿವ್ಯಕ್ತಿ ಸಾಧಿತವಾಗದಿರುತ್ತದೆ ಅಥವಾ ಬೇಜವಾಬ್ದಾರಿಯಿಂದ ಏನಾದರೊಂದು ಬರೆಯುತ್ತಾನೆ ಅಥವಾ ತಾನು ಬಳಸುವ ಶಬ್ದಗಳಿಗೆ ಒಂದು ಅರ್ಥವಿದೆ ಎಂದು ಯೋಚಿಸಲೂ ಬಾರದಷ್ಟು ನಿರಾಸಕ್ತನಾಗಿರುತ್ತಾನೆ. ಇಂದಿನ ಬರಹಗಳಲ್ಲಿ, ಈ ಅಸ್ಪಷ್ಟತೆ ಮತ್ತು ಅಸಾಮರ್ಥ್ಯಗಳ ಮಿಲನವೇ ಎದ್ದು ಕಾಣುವ ವಿಲಕ್ಷಣವಾಗಿವೆ. ರಾಜಕಾರಣಕ್ಕೆ ಸಂಬಂಧಿಸಿದ ಬರೆಹಗಳಲ್ಲಂತೂ ಈ ವಿಲಕ್ಷಣವೇ ತುಂಬಿಕೊಂಡಿದೆ. ಯಾವುದಾದರೊಂದು ವಿಷಯ ಎತ್ತಿದ ಕೂಡಲೆ ಮೂರ್ತವು ಅಮೂರ್ತವಾಗುತ್ತದೆ ; ಹಳಸಲು ಮಾತುಗಳಿಂದ ಭಿನ್ನವಾದ ಶಬ್ದಗಳಲ್ಲಿ ಯಾರು ಯೋಚಿಸುವಂತೆ ತೋರುವುದಿಲ್ಲ. ಪದಗಳನ್ನು ಅವುಗಳ ಅರ್ಥದ ಸಲುವಾಗಿಯೆ ಆಯ್ದು ಬಳಸುವುದು ತೀರ ಕಮ್ಮಿ. ಹೀಗಾಗಿ ಬಹುಪಾಲು ಶಬ್ದಗಳು ತಮ್ಮ ಅರ್ಥದೊಂದಿಗಿನ ಸಂಬಂಧವನ್ನು ಕಳೆದುಕೊಂಡಿರುತ್ತದೆ.

ಜಾಗರೂಕನಾದ ಬರಹಗಾರ ತಾನು ಬರೆಯುವ ಪ್ರತಿ ವಾಕ್ಯದ ಬಗ್ಗೆಯೂ ಕನಿಷ್ಠ ಈ ನಾಲ್ಕು ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಾನೆ: ನಾನು ಹೇಳಲೆತ್ನಿಸುತ್ತಿರುವುದೇನು ? ಯಾವ ಪದಗಳು ಅದನ್ನು ಅಭಿವ್ಯಕ್ತಗೊಳಿಸುತ್ತವೆ ? ಯಾವ ಉಪಮೆ ಅಥವಾ ನುಡಿಗಟ್ಟು ಇದನ್ನು ಹೆಚ್ಚು ಸ್ಪಷ್ಟಗೊಳಿಸುತ್ತದೆ ? ಬಳಸುತ್ತಿರುವ ಪ್ರತಿಮೆ ಪರಿಣಾಮಕಾರಿಯಾಗುವಷ್ಟು ನವೀನವೆ? ಜೊತೆಗೆ ಅವನು ಇನ್ನೂ ಎರಡು ಪ್ರಶ್ನೆಗಳನ್ನು ಕೇಳಿಕೊಂಡಾನು : ಇದನ್ನು ಇನ್ನಷ್ಟು ಸಂಕ್ಷಿಪ್ತಗೊಳಿಸಬಹುದೆ ? ನಿವಾರಿಸಬಹುದಾಗಿರುವಷ್ಟು ಕೆಡುಕಾಗಿ ಏನಾದರೂ ಹೇಳಿರುವೆನೆ ?

ಆದರೆ ಇಷ್ಟು ತೊಂದರೆ ವಹಿಸಲು ಯಾರೂ ತಯಾರಿಲ್ಲ. ರೂಢಿಯಲ್ಲಿರುವ ವಾಕ್ಸರಣಿಯನ್ನು ಬಳಸುವುದರ ಮೂಲಕ ಈ ತೊಂದರೆಯನ್ನು ನಿವಾರಿಸಿಕೊಂಡು ಬಿಡುತ್ತಾರೆ. ಹೀಗಾಗಿ ಬರೆಯಹೊರಟ ಕೂಡಲೇ ತಂತಾನೇ ವಾಕ್ಯಗಳು ರಚನೆಯಾಗುತ್ತ ಸ್ವತಃ ಬರಹಗಾರನಿಗೂ ದುರವಗ್ರಾಹ್ಯವಾಗುವಂತೆ ಬರೆಹ ರೂಪಗೊಳ್ಳುತ್ತದೆ. ಭಾಷೆಯ ಅವನತಿ ಮತ್ತು ರಾಜಕಾರಣ ಇವುಗಳ ನಡುವಿನ ಸಂಬಂಧ ಸ್ಪಷ್ಟಗೊಳ್ಳುವುದು ಇಲ್ಲಿಯೇ.

ಸದ್ಯದ ರಾಜಕಾರಣದ ಬರೆಹಗಳು ಕೆಟ್ಟುದಾಗಿವೆ. ಎಲ್ಲಿ ಕೆಟ್ಟಿಲ್ಲವೋ ಅಂಥ ಬರೆಹಗಳಲ್ಲೆಲ್ಲ ಒಬ್ಬ ಬಂಡಾಯಗಾರನು ಒಂದು ಪಕ್ಷನೀತಿಯನ್ನಲ್ಲದೇ ತನ್ನ ವೈಯುಕ್ತಿಕ ಅಭಿಪ್ರಾಯವನ್ನು ಅಭಿವ್ಯಕ್ತಗೊಳಿಸುತ್ತಿರುತ್ತಾನೆ. ಯಾವುದೇ ಬಣಕ್ಕೆ ಸೇರಿರಲಿ, ಸಂಪ್ರದಾಯ ಶರಣತೆ, ನಿರ್ಜೀವ, ಅನುಕರಣಶೀಲ ಶೈಲಿಯಲ್ಲೆ ವ್ಯಕ್ತಗೊಳ್ಳುತ್ತದೆ. ಆಗಾಗ ಹೊರಬೀಳುವ ರಾಜಕೀಯ ಜಿಜ್ಞಾಸೆ, ಲೇಖನಗಳು, ಪತ್ರಿಕಾಳಿಕೆಗಳು ಇತ್ಯಾದಿಗಳಲ್ಲಿ ಪಕ್ಷದಿಂದ ಪಕ್ಷಕ್ಕೆ ವ್ಯತ್ಯಾಸವಿರುವುದಾದರೂ ಒಟ್ಟಿನಲ್ಲಿ ನಾವೀನ್ಯ, ಸಜೀವತೆ, ಸ್ವಂತಿಕೆಗಳಿಂದ ಬಾಹಿರವಾಗಿ ಅವುಗಳಲ್ಲಿ ಏಕತಾನತೆ ಇರುವಂತೆ ಕಾಣಬರುತ್ತದೆ.

ಬಹುಪಾಲು ರಾಜಕೀಯ ಬರೆಹಗಳಲ್ಲಿ ಯಾವುದು ಅಸಮರ್ಥನೀಯವೊ ಅದರ ಸಮರ್ಥನೆ ನಡೆದಿರುತ್ತದೆ. ಅಲ್ಲಿ ಪ್ರತಿಪಾದಿಸಲಾಗುವ ಅಂಶಗಳು ಅನೇಕ ವೇಳೆ ಪಕ್ಷದ ಘೋಷಿತ ಉದ್ದೇಶಗಳಿಗೆ ಹೊಂದಿಕೊಳ್ಳುವುದಿಲ್ಲ. ಇಂಥ ರಾಜಿಯ ಸಂದರ್ಭಗಳಲ್ಲೆಲ್ಲ ಭಾಷೆ ಕೃತಕವಾದ ನಯನಾಜೂಕುಗಳಿಂದ, ಅಸ್ಪಷ್ಟತೆಯಿಂದ, ಅನೇಕ ಅರ್ಥವಿಲ್ಲದ ಪ್ರಶ್ನೆಗಳಿಂದ ತುಂಬಿರುತ್ತದೆ. ಇಂಥ ಬರೆಹಗಳಲ್ಲಿ ಚಿತ್ರಗಳನ್ನು ನೆನಪಿಗೇ ಬಾರದಂತೆ ವಿಷಯವನ್ನು ಮುಂದಿಡುವುದು ಒಂದು ವಿಧಾನ. ರಷ್ಯಾದ ಸರ್ವಾಧಿಕಾರವನ್ನು ಸಮರ್ಥಿಸುವ ಒಂದು ರೀತಿಯನ್ನು ಉದಾಹರಿಸಬಹುದು. ಅವನು ಒಮ್ಮಿಂದೊಮ್ಮೆ ಸರಳವಾಗಿ "ಉತ್ತಮ ಫಲಿತಾಂಶಗಳು ದೊರಕುವುದಾದರೆ ನಿಮ್ಮ ಶತ್ರುಗಳನ್ನು ಕೊಂದುಬಿಡುವುದರಲ್ಲಿ ನನ್ನ ನಂಬುಗೆಯಿದೆ" ಎಂದು ಹೇಳುವುದಿಲ್ಲ. ಬದಲಾಗಿ, ಸ್ವಲ್ಪಮಟ್ಟಿಗೆ ಹೀಗೆ ಹೇಳುತ್ತಾನೆ :

ಮಾನವೀಯತೆಯಿಂದ ದೂರಾದ ಕೆಲವೊಂದು ಲಕ್ಷಣಗಳು ಸೋವಿಯತ್ ಆಳ್ವಿಕೆಯಲ್ಲಿದೆಯೆಂದು ಧಾರಾಳವಾಗಿ ಒಪ್ಪಬಹುದಾದರೂ, ರಾಜಕೀಯ ವಿರೋಧದ ಹಕ್ಕಿಗೆ ಒಂದಲ್ಲ ಒಂದು ನಿರ್ಬಂಧ ಹಾಕಬೇಕಾಗುವುದು ಸಂಧಿಕಾಲದ ಅನಿವಾರ್ಯತೆಯೆಂದು ನಾವು ಒಪ್ಪಬೇಕಲ್ಲದೇ ಪ್ರಕೃತ ರಷ್ಯಾದ ಜನತೆ ಭರಿಸಬೇಕೆಂದು ನಿರೀಕ್ಷಿಸಲಾಗಿರುವ ಕಷ್ಟನಿಷ್ಠುರಗಳನ್ನು, ಮೂರ್ತವಾಗಿ ಸಾಧಿಸುವುದರೊಂದಿಗೆ ಹೋಲಿಸಿದಾಗ ಬಹಳಷ್ಟು ನ್ಯಾಯವಿದೆಯೆಂದು ನಾನು ಬಗೆಯುತ್ತೇನೆ.

ಈ ಸುತ್ತು ಬಳಸಿನ ಧಾಟಿಯೇ ಒಂದು ವಿಧದ ಕೃತಕವಾದ ನಾಜೂಕಿನಿಂದ ಕೂಡಿದ್ದು. ಸುಸಂಸ್ಕೃತ ಶಬ್ದಗಳು ವಿಷಯದ ವಿವರಗಳನ್ನು ಮುಖ್ಯ ಅಂಶಗಳನ್ನು ಮಂಜಿನಂತೆ ಮುಸುಕಿಬಿಡುತ್ತವೆ. ಅಪ್ರಾಮಾಣಿಕತೆ ಭಾಷೆಯ ದೊಡ್ಡ ವೈರಿ. ಒಬ್ಬನ ನಿಜವಾದ ಮತ್ತು ಹೇಳುವ ಆಶಯಗಳ, ಗುರಿಗಳ ನಡುವೆ ಕಂದರವಿದ್ದ ಪಕ್ಷಕ್ಕೆ ಸ್ವಾಭಾವಿಕವಾಗಿ ಆತ ದೊಡ್ಡ ದೊಡ್ಡ ಶಬ್ದಗಳಿಗೆ, ಸವಕಲು ನುಡಿಗಟ್ಟುಗಳಿಗೆ ಶರಣಾಗುತ್ತಾನೆ. ಸದ್ಯದ ಯುಗದಲ್ಲಿ ರಾಜಕಾರಣದಿಂದ ಮುಕ್ತವಾದ ಕ್ಷೇತ್ರವಿಲ್ಲ. ರಾಜಕಾರಣವು ಸುಳ್ಳು, ಕಪಟ, ದ್ವೇಷಗಳಿಂದ ಕೂಡಿದೆ. ಹದಗೆಟ್ಟ ವಾತಾವರಣದ ಪರಿಣಾಮ ಭಾಷೆಯ ಮೇಲೆ ಆಗೇ ಆಗುತ್ತದೆ.

ಆಲೋಚನೆಗಳು ಭಾಷೆಯನ್ನು ದೋಷಗೊಳಿಸುವುದಾದರೆ ಭಾಷೆಯೂ ಆಲೋಚನೆಗಳನ್ನು

ದೋಷಪೂರ್ಣವಾಗಿಸಬಹುದು. ಸಂಪ್ರದಾಯ ಶರಣತೆ ಮತ್ತು ಅನುಕರಣದಿಂದ ಕೆಟ್ಟ ರೀತಿಯು ಬಳಕೆ ಪ್ರಚುರವಾಗಬಹುದು. ಒಂದು ರೀತಿಯಲ್ಲಿ ಇದು ಅನುಕೂಲವೇ. ಏಕೆಂದರೆ ಯಾವಾಗೆಂದರೆ ಆಗ ನುಡಿಗಟ್ಟುಗಳನ್ನು ಕಿಸೆಯಲ್ಲಿರುವ ಆಸ್ಪಿರಿನ್ ಗುಳಿಗೆಗಳಂತೆ ಬಳಸಲು ಬರುತ್ತದೆ. ಈ ಪೂರ್ವ ಸಿದ್ಧ ನುಡಿಗಟ್ಟುಗಳು ಮನಸ್ಸನ್ನು ಥಾಳಿಮಾಡು ವುದರ ವಿರುದ್ಧ ನಿರಂತರ ಎಚ್ಚರವಿದ್ದರೇನೆ ಅವು ನಮ್ಮ ವಿಚಾರಶಕ್ತಿಯು ಒಂದಿಲ್ಲೊಂದು ಅಂಶ ವನ್ನು ತಟಸ್ಥಗೊಳಿಸುವುದನ್ನು ನಿವಾರಿಸಲು ಸಾಧ್ಯ.

ಭಾಷೆಯ ಅವನತಿಯನ್ನು ಚಿಕಿತ್ಸೆಯ ಮೂಲಕ ಪ್ರಾಯಶಃ ಸರಿಪಡಿಸಬಹುದೆಂದು ಮೊದಲೇ ಹೇಳಿದೆ. ಇದರ ವಿರುದ್ಧ ಹೇಳುವವರು ಇದ್ದಾರು ಅವರು, ಪದಗಳು ಅವುಗಳ ರಚನೆ ಇವುಗಳೊಂ ದಿಗೆ ಹೊಡೆದಾಡುವುದರಿಂದ ಭಾಷೆಯ ಪ್ರಗತಿ ಯಾಗುವುದಿಲ್ಲವೆಂದೂ, ಏನಿದ್ದರೂ ಭಾಷೆ ಪ್ರಕೃತದ ಸಾಮಾಜಿಕ ಸ್ಥಿತಿಯನ್ನು ಕನ್ನಡಿಸುವು ದೆಂದೂ ಹೇಳಿಯಾರು. ಭಾಷೆಯ ಒಟ್ಟು ಧ್ವನಿ ಶಕ್ತಿ ಇತ್ಯಾದಿಗಳಲ್ಲಿ ಈ ಮಾತು ನಿಜವಿರಬಹುದು; ಆದರೆ ವಿವರದಲ್ಲಿ ಅಲ್ಲ. ಎಷ್ಟೋ ಕೆಟ್ಟ ಶಬ್ದಗಳ ಅಭಿವ್ಯಕ್ತಿಗಳು ವಿಧಾನಕಳು ಸಹಜ ವಿಕಸನ ಮಾರ್ಗದಲ್ಲಿ ಅವಸಾನ ಹೊಂದದೆ ಕೆಲವೆ ಮಂದಿ ಯ ಪ್ರಜ್ಞಾಪೂರ್ವಕ ಚಲಾವಣೆ ಕಳೆದುಕೊಂಡಿವೆ.

ಚಿಕಿತ್ಸೆ ಎಂದರೆ, ಬಳಕೆಯಲ್ಲಿರದ ಪದಗಳನ್ನು ವಾಕ್ಸರಣಿಗಳನ್ನು ತ್ಯಜಿಸಬೇಕೆಂದಾಗಲೀ ಅಥವಾ ಸರ್ವತ್ರ ಸಾರ್ವಕಾಲಿಕವಾಗಿ ಅನುಸರಿಸಬೇಕೆಂದು ಒಂದು 'ಭಾಷೆಯ ಮಟ್ಟ' ವನ್ನು ರೂಪಿಸಬೇಕೆಂ ದಾಗಲಿ ಅಲ್ಲ. ಪ್ರತಿಯಾಗಿ, ಉಪಯುಕ್ತತೆಯನ್ನು ಕಳೆದುಕೊಂಡ ಪ್ರತಿಯೊಂದು ಪದ ಮತ್ತು ನುಡಿ ಗಟ್ಟನ್ನು ಒರೆಸಿಹಾಕುವುದು. ಅರ್ಥ ಸ್ಪಷ್ಟವಾಗು ವುದೊಂದು ತೀರಿದರೆ ವ್ಯಾಕರಣ ಮತ್ತು ವಾಕ್ಯ ರಚನೆಯ ನಿಯಮಗಳೂ ಮುಖ್ಯವಲ್ಲ; ಕಪಟ, ಸರಳತೆ ಅಥವಾ ಬರಹದ ಭಾಷೆಯನ್ನು ಆಡು ಭಾಷೆಯನ್ನಾಗಿಸಬೇಕೆಂಬ ಕಾಳಜಿಯೂ ಅಲ್ಲ, ಮತ್ತು ಕೆಲವೇ ಆದರೂ ಸಂಸ್ಕೃತ ಅಥವಾ ಇನ್ನಾ ವುದೇ ಶಿಷ್ಟಭಾಷೆಯ ಶಬ್ದಗಳು ಅರ್ಥ ಪ್ರಸಾದನ ಗೊಳಿಸುತ್ತವೆಂದು ಅವುಗಳನ್ನು ಬಳಸುವುದೂ ಅಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಅರ್ಥವೇ ಶಬ್ದ ಗಳನ್ನು ಆಯ್ದುಕೊಳ್ಳಲು ಬಿಡುವುದು. ಬರಹ ದಲ್ಲಿ ಶಬ್ದಗಳಿಗೆ ಶರಣಾಗುವುದು ಬರಹಗಾರ ನೊಬ್ಬನ ಅತ್ಯಂತ ಕೀಳುನಡೆ. ಒಂದು ಮೂರ್ತ ವಸ್ತುವನ್ನು ಕುರಿತ ಚಿಂತನೆಯಲ್ಲಿ ಪದಗಳಿರುವು ದಿಲ್ಲ ಮತ್ತು ಏನನ್ನು ನೀವು ಕಾಣುತ್ತೀರೋ ಅದರ ವಿವರಣೆಗೆ ಸರಿಯಾಗಿ ಹೊಂದುವಂತಹ ಶಬ್ದಗಳಿಗಾಗಿ ಅರಸುತ್ತೀರಿ. ಆದರೆ ಅಮೂರ್ತ ವಾದುದನ್ನು ಕುರಿತು ಚಿಂತಿಸುವಾಗ ಪ್ರಾರಂಭ ದಿಂದಲೆ ಶಬ್ದಗಳನ್ನು ಬಳಸುವ ಬಲವನ್ನು ಪ್ರಜ್ಞಾ ಪೂರ್ವಕವಾಗಿ ತಡೆಯದಿದ್ದರೆ ರೂಢಭಾಷೆಯು ಮುನ್ನುಗ್ಗಿ ಬಂದು ಅರ್ಥವನ್ನು ಅಸ್ಪಷ್ಟಗೊಳಿಸುವ ಮತ್ತು ಬದಲಾಯಿಸುವ ಸಾಧ್ಯತೆ ಇರುತ್ತದೆ. ಚಿತ್ರಗಳ ಅಥವಾ ಸಂವೇದನೆಗಳ ಮೂಲಕ ಖಚಿತವಾಗಿ ತಿಳಿಯುವಂತೆ ಅರ್ಥವನ್ನು ಖಚಿತವಾಗಿ ತಿಳಿಯುವವರೆಗೂ ಪದಗಳನ್ನು ಬಳಸದಿರುವುದೇ ಒಳ್ಳೆಯದು. ಅನಂತರ ಶಬ್ದಗಳನ್ನು ಸುಮ್ಮನೆ ಒಪ್ಪಿಕೊಳ್ಳದೆ ಅರ್ಥಸಲುವಾಗಿ ಆಯ್ಕೆ ಮಾಡ ಬಹುದು. ಇಷ್ಟಾದಮೇಲೆ ಬಳಸಿದ ಶಬ್ದಗಳು ಇತರರ ಮೇಲೆ ಬೀರುವ ಪ್ರಭಾವ ವನ್ನು ಗಮನಿಸಬಹುದು. ಈ ಕೊನೆಯ ಕ್ರಿಯೆ ಯಿಂದ ಹಳಸು ಅಥವಾ ಮಿಶ್ರಪ್ರತಿಮೆಗಳು, ನುಡಿಗಟ್ಟುಗಳು, ಅನಗತ್ಯ ಪುನರುಕ್ತಿಗಳು ಮತ್ತು ಅಸ್ಪಷ್ಟತೆ ಮಾಯವಾಗುತ್ತದೆ. ಮುಂದೆ ಕೊಟ್ಟಿ ರುವ ನಿಯಮಗಳಿಂದ ಒಂದು ಶಬ್ದ ಅಥವಾ ನುಡಿಗಟ್ಟು ಪರಿಣಾಮಕಾರಿಯೋ ಅಲ್ಲವೋ ತಿಳಿಯಬಹುದು. ೧) ಬರಹದಲ್ಲಿ ಬಳಕೆಯಲ್ಲಿ ರುವ ಉಪಮೆ, ರೂಪಕ ಮುಂತಾದ ಅಲಂಕಾರ ಗಳನ್ನು ಬಳಸಬಾರದು. ೨) ಸಣ್ಣ ಶಬ್ದಗಳ ಬಳಕೆ ಸಾಧ್ಯವಿದ್ದೆಡೆ ದೊಡ್ಡ ಶಬ್ದಗಳನ್ನು ಬಳಸ ಬಾರದು. ೩) ಒಂದು ಶಬ್ದವನ್ನು ತೆಗೆಯುವ ಸಾಧ್ಯತೆಯಿದ್ದರೆ ಬಿಡದೆ ಅದನ್ನು ತೆಗೆದು ಹಾಕು ವುದು. ೪) ಕರ್ತರಿ ಪ್ರಯೋಗ ಸಾಧ್ಯವಿದ್ದೆಡೆ ಕರ್ಮಣಿಪ್ರಯೋಗ ಮಾಡಬಾರದು. ೫) ದಿನನಿತ್ಯ ಬಳಕೆಯಾಗುತ್ತಿರುವ ಶಬ್ದವೊಂದನ್ನು ಬಳಸಬಹು ದಾದೆಡೆ ಯಾವುದೇ ಅಪರಿಚಿತ ನುಡಿಗಟ್ಟನ್ನೊ ವೈಜ್ಞಾನಿಕ ಶಬ್ದವನ್ನೋ ಅಥವಾ ದುರವಗ್ರಾಹ್ಯ ಪದಗಳನ್ನೋ ಬಳಸಬಾರದು. ೬) ಭಾಷೆ ಅಸಹಜಗೊಳ್ಳುವುದಾದರೆ ಮೇಲಿನ ಯಾವ ನಿಯಮವನ್ನಾದರೂ ಮುರಿಯುವುದು.

ಈ ನಿಯಮಗಳು ತೀರ ಪ್ರಾಥಮಿಕ, ಸಾಧಾ ರಣ ಎನಿಸಿದರೂ, ಪ್ರಕೃತ ಚಾಲ್ತಿಯಲ್ಲಿರುವ ಶೈಲಿಯಲ್ಲಿ ಬರೆಯಲು ತೊಡಗಿಬಿಟ್ಟಿರುವವರಿಂದ ಮನೋಧರ್ಮದ ಆಳವಾದ ಬದಲಾವಣೆಯನ್ನು ನಿರೀಕ್ಷಿಸುತ್ತದೆ. —ಸೂ ರಮಾಕಾಂತ ಸೌಜನ್ಯ : ಮಾನವ

ಹೊಸ ಭರವಸೆಗಳೊಂದಿಗೆ ಹುಟ್ಟಿರುವ ದಲಿತ ವೈದ್ಯರ ಸಂಘ

70 ರ ದಶಕದಲ್ಲಿ ಕರ್ನಾಟಕದ ಅಸ್ಪೃಶ್ಯರ ನಡುವೆ ಮೂಡಿದ ಎಚ್ಚರ ಇಂದು ವ್ಯವಸ್ಥಿತ ಸಂಘಟನಾ ಸ್ವರೂಪದೊಂದಿಗೆ ಕಾಣಿಸಿಕೊಳ್ಳ ತೊಡಗಿದೆ. ದಲಿತ ಸಂಘರ್ಷ ಸಮಿತಿ ದಲಿತರೆಲ್ಲರ ಮುಂಚೂಣಿ ಸಂಘಟನೆಯಾದರೆ ಅದರ ಸೈದ್ಧಾಂ ತಿಕ ಅಂಗದಂತೆ ಇತ್ತೀಚೆಗೆ ಹುಟ್ಟಿಕೊಂಡಿರುವ "ಕರ್ನಾಟಕ ಪರಿಶಿಷ್ಟ ಜಾತಿ/ಬುಡಕಟ್ಟು ವೈದ್ಯರ ಸಂಘ" ದಲಿತ ಚಳುವಳಿಗೆ ಹೊಸ ಆಯಾಮ ವನ್ನು ತಂದುಕೊಡುವ ಭರವಸೆಯನ್ನು ಮೂಡಿ ಸಿದೆ.

ಇತ್ತೀಚೆಗೆ ಮೈಸೂರು ಮತ್ತು ಬೆಂಗಳೂರು ಗಳ ನರಕದಂತೆ ಇರುವ ಕೆಲವು ಕೊಳಚೆ ಕೇರಿ ಗಳಲ್ಲಿ ಈ ದಲಿತ ಡಾಕ್ಟರುಗಳು ನಡೆಸಿದ ಉಚಿತ ಸೇವಾ ಶಿಬಿರ ಮತ್ತು ಮಾನವೀಯ ಒಡನಾಟ ಇಂಥ ಭರವಸೆಯನ್ನು ಮೂಡಿಸಿದೆ.

ಅಸ್ಪೃಶ್ಯ ಕೇರಿಗಳಲ್ಲಿ ಹುಟ್ಟಿ ಬೆಳೆದು ಆಕಸ್ಮಿಕ ವಾಗಿ ವಿದ್ಯಾವಂತರಾದವರೂ, ಅವರು ಪಡೆದ ಶೋಷಕ ಅಥವಾ ಪುರೋಹಿತಶಾಹಿ ವಿದ್ಯಾಭ್ಯಾಸ ದಿಂದಾಗಿ ತಮ್ಮ ಅಸ್ಪೃಶ್ಯ ಜನಾಂಗದಿಂದಲೇ ಬೇರ್ಪಟ್ಟು ಹತಾಶೆ ಕೀಳರಿಮೆಗಳಿಂದ ನರಳು ತ್ತಿದ್ದಾರೆ. ಇಂಥ ಇಡೀ ದಲಿತ ವಿದ್ಯಾವಂತ ವರ್ಗ ವನ್ನೇ ಬಿಡುಗಡೆಗೊಳಿಸುವ ಚಳುವಳಿಗೆ ಪ್ರೇರಕ ವಾಗಿ ಈ ವೈದ್ಯರ ಸಂಘ ಬೆಳೆಯಬೇಕಾಗಿದೆ.

ತಾವು ಈಗ ಹಾಕಿಕೊಂಡಿರುವ ಸೇವಾ ಕಾರ್ಯ ಕ್ರಮವನ್ನು ಇಡೀ ಕರ್ನಾಟಕಕ್ಕೆ ನಂತರ ಇಡೀ ಇಂಡಿಯಾಕ್ಕೆ ವಿಸ್ತರಿಸುವುದರ ಮೂಲಕ, ಅಸ್ಪೃಶ್ಯ ಅಸಹಾಯಕ ಮತ್ತು ರೋಗಿಷ್ಟ ಜನ ರೊಂದಿಗೆ ಪ್ರೀತಿಯ ಸಂವಾದವನ್ನು ನಡೆಸುವುದರ ಮೂಲಕ ಈ ರೋಗಿಷ್ಟ ದೇಶಕ್ಕೆ ಚಿಕಿತ್ಸೆ ನೀಡ ಬೇಕಾಗಿದೆ.

ಈ ವೈದ್ಯರ ಸಂಘದ ಪದಾಧಿಕಾರಿಗಳು :
ಅಧ್ಯಕ್ಷ : ಡಾ॥ ಎಂ. ಮುನಿರಾಜು.
ಕಾರ್ಯದರ್ಶಿ : ಡಾ॥ ಎಚ್. ಆರ್ ಸುರೇಂದ್ರ.
ಖಜಾಂಚಿ : ಡಾ॥ ಎ. ಸಿದ್ಧರಾಜು.
ಕಾರ್ಯಕಾರಿ ಮಂಡಳಿ ಸದಸ್ಯರು : ಡಾ॥ ಟಿ. ಮಂಜು ನಾಥ್, ಡಾ॥ ಎಂ. ದೇವಸಿಗಮಣಿ, ಡಾ॥ ಬಿ. ಪಿ. ಶ್ರೀಕಾಂತ್, ಡಾ॥ ಎಚ್. ಎಸ್. ಶ್ರೀನಿವಾಸ್, ಡಾ॥ ಸಿ. ಕೆ. ಅಜಿತ್‌ಕುಮಾರ್, ಡಾ॥ ಎಚ್. ಜಗ ನ್ನಾಥ್, ಡಾ॥ ಕೆ. ದೇವೇಂದ್ರಪ್ಪ, ಡಾ॥ ಎನ್. ಮಹಾಲಿಂಗಪ್ಪ, ಡಾ॥ ಬಿ. ಬಸವೇಂದ್ರ ಮತ್ತು ಡಾ॥ ಎಂ. ನಾರಾಯಣ.
ಕಾನೂನು ಸಲಹೆಗಾರರು : ಓ. ಶ್ರೀಧರನ್

ಕತ್ತಲೊಡನೆ ಮಾತುಕತೆ

ಚೆಲುವಯ್ಯ ಹೇಳಿದ ಕಥೆ

● ಕೆ. ಬಿ. ಸಿದ್ದಯ್ಯ

ರಾಗಿ ಹುಲ್ಲಿನೊಳಗೆ ಮಲಗುವುದೆಂದರೆ ನನಗೆ ಇಷ್ಟ. ಎಷ್ಟು ಇಷ್ಟವೆಂದರೆ ಅವ್ವನ ಹೊಟ್ಟೇಲಿ ಮಲಗಿದಂಗೆ. ಕಣಗಾಲದಲ್ಲಿ ಮನೆಯ ಗಂಡಸು ಮನೆಯಲ್ಲಿ ಮಲಗುತ್ತಿರಲಿಲ್ಲ. ರಾಗಿ, ಭತ್ತ, ಮುಂತಾದ ಧಾನ್ಯ ರಾಶಿ ಕಾಯಲು ಕಾವಲು ಹೋಗುತ್ತಿದ್ದರು. ನಮ್ಮ ಮನೆಯ ಗಂಡಸಿನ ಜತೆ ನಾನು ಹೋಗುತ್ತಿದ್ದೆ. 'ಇವನು ಪುಕ್ಕಲ ಚಡ್ಡೀಲಿ ಉಚ್ಚೆ ಹುಯ್ಕಂತನೆ ಇವ್ನ ಕರ್ಕೊಂಡೋಗಬ್ಯಾಡ' ಎಂದು ಮುಖ ಸಿಂಡ್ರಿಸಿಕೊಂಡು ಅವ್ವ ಗಂಡಸಿನ ಕಿವಿ ಊದುತ್ತಿದ್ದಳು. ಗಂಡಸು ಉಣ್ಣುವುದಕ್ಕೆ ಮೊದಲು ನಾನು ಉಂಡು 'ಯವ್ವ ಯಲ್ಡಕೋತಿನಿ' ಅಂತ ಬಂದು ಅಲ್ಲಿ ಗುಂಪಗೆ ಬೆಳೆದಿದ್ದ ಕಳ್ಳಿಯಲ್ಲಿ ಚಡ್ಡಿ ಬಿಚ್ಚಿ ಕುಂತುಕೊಂಡೆ. ನಮ್ಮ ಮನೆ ನಾಯಿ ನನ್ನ ತಿಗ ನೋಡ್ತ ನಿರೀಕ್ಷಣೆಯಲ್ಲಿ ಬಾಲ ಅಲ್ಲಾಡಿಸಿತು. ಅದು ಹಟ್ಟಿಯ ಹುಡುಗ್ರು ವತಾರೆ ಎದ್ರೆ ಯಲ್ಡಕ್ಕೆ ಹೋಗುತ್ತಿದ್ದ ಜಾಗ. ದಾರಿಯ ಪಕ್ಕದಲ್ಲಿದ್ದು ನಮ್ಮನ್ನು ಮರೆಮಾಡಿಕೊಳ್ಳಲು ಎಣಗುತ್ತಿತ್ತು. ಆ ಗಂಡಸು ದುಪ್ಪಟಿ ಹೊದ್ದು ಒಂದು ಕೈಲಿ ದೊಣ್ಣೆ ಅಥವ ಮಚ್ಚು ಹಿಡಿದು ಇನ್ನೊಂದು ಕೈಲಿ ಲಾಟೀನು ಹಿಡಿದು ಹೊಸಲು ದಾಟಿ ಭೂಮಿಗಿಳಿಯುತ್ತ ಬರುವುದನ್ನು ಕಣ್ಣಲ್ಲಿ ಕಣ್ಣಿಕ್ಕಿ ಹೊಂಚಿ ಹಾಕುತ್ತಿದ್ದೆ. ಗಂಡಸು ಬಂತು. ಕಳ್ಳಿ ಬಿಟ್ಟು ಎರಡು ಮೂರು ದಾಪು ಹೋಯ್ತು. ನಾಯಿ ಗಂಡಸಿನ ಹಿಂದೆ ಗೇಣಿಕ್ಕುವುದನ್ನು ತಿರಸ್ಕರಿಸಿ ನನ್ನ ಕಾವಲಿಗೆ ನಿಂತಿತು. ತಟಕ್ಕನೆದ್ದು ಚಡ್ಡಿ ಲಾಡಿ ಕಟ್ಟಿ ಗಂಡಸಿನ ಹೆಜ್ಜೆಯ ಮೇಲೆ ಹೆಜ್ಜೆ ಹಾಕಿ ಬೆಕ್ಕಿನಂಗೆ ನಡೆದೆ. ನಾಯಿ ನಾನು ಎದ್ದ ಜಾಗ ಮೂಸಿನೋಡಿ ಉಸೂರಂತ ಹಿಂಬಾಲಿಸಿತು. ಆ ಗಂಡಸು ಶ್ರೀ ರಾಮಾಯಣದಲ್ಲಿ ಆಂಜನೇಯನ ಪಾರ್ಟು ಮಾಡಿತ್ತು. ನಿಂತಾಗ, ಕೂತಾಗ, ನಡಿವಾಗಲೂ ಆಂಜನಯ್ಯನ ಕಂದವೇ ತಾನಾಗಿ ಗುನುಗುತ್ತಿತ್ತು. ಅವತ್ತುನೆ 'ಚಂಡದಾನವ ಮಂಡಲೇಂದ್ರನ, ಚಂಡದಾನವ ಮಂಡಲೇಂದ್ರನ ಕಂಡು ಹಿಡಿದೇನಾ ಭಲಾ ! ಕಂಡೇನಾ ಲಂಕಾನಗರವ... ....' ಕಂದ ಇಳಿದನಿ ಕಂಡಿತು. ಉಗುಳು ನುಂಗುತ್ತ 'ನಾನು ಕಣತ್ತಕ ಬತ್ತೀನಿ' ಅಂದೆ. ಮೆಟ್ಟು ಬಿದ್ದಂತೆ, ಗಂಡಸು ಗರ್ರನೆ ತಿರುಗಿದ ರಭಸಕ್ಕೆ ಲಾಟೀನ ಜೀವ ಅರೆಜೀವ ಆದಂಗಾಯ್ತು. 'ಥೂ ನನ್ನ ಮಗ್ನೆ ನಾನು ಅಂತ ಹೇಳದಲ್ವ ? ನಿಮ್ಮವ್ವಂಗೇಳ್ದೋ ಕದ್ದು ಬಂದೋ' ಕಳ್ಳ ನನ್ಮಗಂದೇ ಅಂದು ನನ್ನೊಳಗೆ ರಕ್ತಸಂಚಯವಾಗುವಂತೆ ಮಾಡಿತು. ಆ ಹೊತ್ತಿಗೆ, ಚಂದಮಾಮ ರಾಗಿ ಹುಲ್ಲಿನ ಗರಿ ಗರಿಯ ಮೇಲೂ ನಗುತ್ತಿದ್ದನು. ಕಣದ ಹತ್ತಿರಕ್ಕೆ ಬಂದೊ. ಲಾಟೀನ ಬೆಳಕ ನೋಡಿತೋ ಏನೋ ಕಣವು ಕೆಮ್ಮಿದಂತಾಯ್ತು. ಕಣದೊಳಗೆ ಕಾಲಿಡಲು ಕೆಮ್ಮೇ ರೂಪಾಗಿ ಚೆಲುವಯ್ಯ ಮಾತಾಡಿದನು. ಗಂಡಸಿನ ಕಡೆ ತಿರುಗಿ 'ಇವ್ನನ್ಯಾಕೆ ಕರ್ಕಂಬ್ಬಂದೆ ? ಅಂದನು. ಮೂವರ ನಡುವೆ ನಿಂತಿದ್ದ ನಾಯಿ ಬಾಲ ಅಲ್ಲಾಡಿಸಿತು. ಗಂಡಸು ಚೆಲುವಯ್ಯನ ಕೈಗೆ ಲಾಟೀನು ಕೊಟ್ಟು ದುಪ್ಪಟಿಯೊಳಗಿಂದ ತೆಂಗಿನ ನಾರಿನ ಹಗ್ಗ ತಗಿದು ನಾಯಿಯ ಕತ್ತಿಗೆ ಬಿಗಿಯಿತು. ಹಗ್ಗದ ಇನ್ನೊಂದು ತುದಿಯನ್ನು ಮೇಟಿಗೆ ಕಟ್ಟಿ ಮೇಟಿಗೂ ನಾಯಿಗೂ ಜಂಟಿ ಮಾಡಿತು. ಚೆಲುವಯ್ಯ ಲಾಟೀನು ಹಿಡಿದು ಬಂದು ಹುಲ್ಲಿನ ರಾಶಿಯೊಳಗೆ ಮಲಗಲು ಇಬ್ಬರಿಗೂ ಜಾಗ ಮಾಡಿದನು. ಗಂಡಸು ಬೀಡಿ ಸೇದುತ್ತ, ಕ್ಯಾಕರಿಸುತ್ತ ಕಣದ ಸುತ್ತ ಉಸ್ತುವಾರಿ ನೋಡಿ ಬಂದು ಹುಲ್ಲಿಗೆ ತೂರಿತು. ಚೆಲುವಯ್ಯನು ನಾನು ನಮ್ಮ ನಮ್ಮ ಜಾಗ ಹಿಡಿದೆವು. ಬತ್ತಿ ಕಮ್ಮಿ ಮಾಡಿ ಮೇಟಿಯ ತುದಿಗೆ ನೇತಾಕಿದ್ದ ಲಾಟೀನು ಮಕಮಕ ಅನ್ನುತ್ತಿತ್ತು. ಚೆಲುವಯ್ಯ ಕತೆ ಹೇಳುವುದರಲ್ಲಿ ನಿಸ್ಸೀಮನು. 'ಚೆಲ್ವಣ್ಣ, ಚೆಲ್ವಣ್ಣ ಕತೆ ಹೇಳು' ಎಂದು ಜೀವಕ್ಕೆ ಜೀರಿಗೆ ಅರೆದೆ. ನಿಮ್ಮನೆ ಗಂಡಸು ಬೈತದೆ ಬಿದ್ಕೊ ಮಗ' ಅಂದನು. ನಾನು ನನ್ನ ಜಾಗದಿಂದ ಹುಲ್ಲಿನ ಸಂದೀಲಿ ಕೈ ತೂರಿಸಿ ಚೆಲುವಯ್ಯನ ಅಂಗಾಲ ಪರಪರನೆ ಕೆರೆದು 'ಕತೆ ಹೇಳಣ್ಣ' ಎಂದು ಪೀಡಿಸಿದೆ. ಕತೆ ಮುಗ್ಯೋಗಂಡ 'ಊ' ಗುಟ್ಟಬೇಕು ಅನ್ನೊ ಷರತ್ತಿನ ಮೇಲೆ ಚೆಲುವಯ್ಯ ಕತೆಗಾರನಾದ. ಅವನು ಹೇಳಿದ ಕತೆಯ ಸಾರಾಂಶ ಹೀಗಿದೆ :

ಸುಗ್ಗನ ಹಳ್ಳಿ ದನಿನ ಜಾತ್ರೆ ಅಂದ್ರೆ ಇಡೀ ಜಿಲ್ಲೆಗೆ ದೊಡ್ಡ ಜಾತ್ರೆ. ಏನಿಲ್ಲ ಅಂದ್ರು ನಾಲ್ಕೈದು ಸಾವಿರ ಜತೆ ಎತ್ತು ಕಟ್ತಿತ್ತಾರೆ ತೇರಿನ ದಿನ ಅಮುಲ್ದಾರ್ರು ಬತ್ತಾರೆಂಬುದು ಸುತ್ತೇಳು ಹಳ್ಳಿಗಳಿಗೂ ಸಂಭ್ರಮದ ಸುದ್ದಿ. ಸುಂಕದ ಕಟ್ಟೇಲಿ ಸುಂಕ ಕಟ್ಟದೆ ಕದ್ದು ಬಂದಿರೊ ರಾಸುಗಳ ವಾರಸುದಾರರಿಗೆ ಅಂಗಡಿ ಮುಂಗಟ್ಟು ಇಟ್ಟವರಿಗೆ ಸಂಕಟದ ಸುದ್ದಿ. ಆ ಕಾಲದಲ್ಲಿ ಅಮುಲ್ದಾರ್ರು ಕುದುರೆ ಮ್ಯಾಲೆ ಬತ್ತಾ ಇದ್ರು. ಅವರ ಕಾವಲಿಗೆ ಬರುತ್ತಿದ್ದವರು ಎರಡು ಮೂರು ದಿನ ಮುಂಚಿತವಾಗಿ ಬಂದು ಅಮಲ್ದಾರರ ಸ್ವಾಗತಕ್ಕೆ ಸಿದ್ಧತೆ ಮಾಡುತ್ತಿದ್ದರು. ಕಂಬಿ ಪೇಟ, ಸಿಲ್ಕಿನ ಜುಬ್ಬ, ಕೊಕ್ಕರೆ ಗರಿಯಂತ ಕಚ್ಚೆ ಪಂಚೆ ಉಟ್ಟು ಕುದ್ರೆ ಮ್ಯಾಲೆ ಬತ್ತಾ ಇದ್ರೆ ಊರ್ಗೆ ಊರೇ ಕಣ್ಣಾಗುತ್ತಿತ್ತು. ಊರಾಚೆ ದ್ವಾರ ಬಾಗಲಲ್ಲಿ ಪಟೇಲರು, ಶಾನುಭೋಗರು, ತೋಟಿ, ತಳವಾರರಾದಿಯಾಗಿ ನಿಂತ ನೆಲವ ಜಗ್ಗಿಸಿ ಕಂಕಣಬದ್ಧರಾಗಿದ್ದರು. ಬಂದಂತವರಿಗೆ ಹಾರ ಹಾಕಿ, ತುರಾಯಿ ಕೊಟ್ಟು ಪಟೇಲರು ಅಮಲ್ದಾರರ ಕೈಯಿಡಿದು ಕುದುರೆಯಿಂದ ಕೆಳಗಿಳಿಸುತ್ತಿದ್ದರು. ತೋಟಿ 'ಕೊಂಬು' ಊದುತ್ತಿದ್ದ, ತಳವಾರ ನಗಾರಿ ಭಾರಿಸುತ್ತಿದ್ದನು. ಶಾನುಭೋಗರ ಮನೇಲಿ ಭೋಜನ ನಡೆಯುತ್ತಿತ್ತು. ಅಮಲ್ದಾರ್ರ ಕುದುರೆಗೆ ತಳವಾರ ಹುಳ್ಳಿ ತಿನ್ನಿಸಿದರೆ, ತೋಟಿ ಬಿಸಿನೀರಿನಲ್ಲಿ ಮೈ ತೊಳೆಯುತ್ತಿದ್ದನು. ತೋಟಿ ಕುದುರೆ ಮೈ ತೊಳೆದು ಚೆನ್ನಾಗಿ ಮಾಲಿಷ್ ಮಾಡುತ್ತಾನೆಂದು ಒಪ್ಪಿ ಇನಾಮು ಕೊಟ್ಟಿದ್ದರು. ಇನಾಮು ಏನೆಂದರೆ ಕಂಚಿನ ತಟ್ಟೆ, ಕಂಚಿನ ಲೋಟ. ತೋಟಿಯು ಇನಾಮನ್ನು ಪಟೇಲರ ಹೆಂಡ್ತಿರ ಹತ್ತಿರ ಗಿರವಿ ಇಟ್ಟು ಹೆಂಡ ಕುಡಿದು ಬುಲ್ಡೆ ಬಿಸಾಕಿದನು. ಕಾಲಕ್ರಮೇಣ ಈ ಸುದ್ದಿ ಅಮಲ್ದಾರ್ರಿಗೆ ಮುಟ್ಟಿತು. ಕೂಡಲೆ ಅಮಲ್ದಾರಿಂದ ಪಟೇಲರಿಗೆ ಓಲೆ ಬಂತು. ಆ ಓಲೆಯಲ್ಲಿ ಏನಿತ್ತೆಂದರೆ ; ನಾವು ದಯಪಾಲಿಸಿದ ಇನಾಮನ್ನು ಚೆಲುವಯ್ಯನೆಂಬ ತೋಟಿಯು ಮಾರಿಕೊಂಡು ತಿಂದಿರುತ್ತಾನೆ. ಅವನಿಗೆ ಕೊಟ್ಟಿರುವ 'ಕೊಂಬು' ಕಂಚಿನದೇ ಆಗಿರುವುದರಿಂದ ಒಂದಲ್ಲ ಒಂದುದಿನ ಅದನ್ನು ಮಾರಿಕೊಂಡು ತಿನ್ನುತ್ತಾನೆ, ಆದ್ದರಿಂದ ಗ್ರಾಮದ ಪಟೇಲರು ಸದರಿ ಕೊಂಬನ್ನು ತೋಟಿಯಿಂದ ವಶಪಡಿಸಿಕೊಂಡು ಸದರಿ ಗ್ರಾಮದ ತಳವಾರನಿಗೆ ವರ್ಗಾಹಿಸಬೇಕೆಂದು ಆಜ್ಞೆ ಇತ್ತು. ಪಟೇಲರು ಈ ಆಜ್ಞೆಯನ್ನು ಕಾರ್ಯಗತ ಮಾಡಿದರು. ಇತ್ತ ಇನಾಮು, ಜಮೀ

(13ನೇ ಪುಟಕ್ಕೆ)


ನನ್ನ ನೋವಿನ ಸಂಪುಟದಿಂದ - ೪

ನಾವು ಎಂದೂ ರಂಗು-ರಂಗಿನ ಯುಗವೊಂದರ ಮೂಲಕ ಹಾಯ್ದು ಬಂದವರಲ್ಲವಾದರೂ ಇಂಥ ಒಂದು ಯುಗದ ಬಗೆಗೆ ಸಣ್ಣ-ಪುಟ್ಟ ಕನಸುಗಳನ್ನು ಖಂಡಿತ ಕಾಣುತ್ತಿದ್ದೆವು. ಈಗ ಅವನ್ನೂ ಕಳೆದುಕೊಂಡಿದ್ದೇವೆ.

ಇಂದು ಬದುಕೆಂಬ ಬಂಜರು ಭೂಮಿಯಲ್ಲಿ ಅಂಡಲೆಯುತ್ತಿದ್ದೇವೆ. ಇಂದು ಬದುಕು ತನ್ನ ಸಂಕುಚಿತ ಹಾಗೂ ವ್ಯಾಪಕ ಅರ್ಥಗಳಲ್ಲಿ ಮೈಮುರಿದು ಪಡುವ ಪರಿಪಾಟಲೆಯಾಗಿದೆ. ನಮಗರಿವಿಲ್ಲದಂತೆಯೇ ಹುರುಳಿ ಬೀಜದ ಮೊಳಕೆಗಳಂತೆ ನಮ್ಮಿಚ್ಛೆ ಮತ್ತು ಪ್ರವೃತ್ತಿಗಳು ಕುಡಿಯೊಡೆದು ಬೆಳೆಯುವ ಬದಲು ಒಳಗೊಳಗೆ ಕಮರಿ ಹೋಗುತ್ತಿವೆ—ಎಂದು ಬದುಕಿನ ಕಠೋರ ವಾಸ್ತವಗಳ ಬಗ್ಗೆ ಬರೆದಿರುವ ಕೇರಳದ ಪ್ರಖ್ಯಾತ ಸಾಹಿತಿ ಎಂ. ಟಿ. ವಾಸುದೇವನ್‌ನಾಯರ್‌ರವರು ಇಂಥ ವಾಸ್ತವಗಳೇ ಬೇರೆ ರೂಪಗಳಲ್ಲಿ ಸಾಹಿತ್ಯ ಲೋಕದಲ್ಲಿ ಕಾಣಿಸಿಕೊಳ್ಳುವ ಬಗೆಯನ್ನು ತಮ್ಮ ಅನುಭವಗಳೊಂದಿಗೆ ಇಲ್ಲಿ ವಿವರಿಸಿದ್ದಾರೆ.

"ಒಬ್ಬ ಪುಟ್ಟ ಹುಡುಗಿ ಬರೆದ ಪತ್ರದಿಂದಾಗಿ ಅಬ್ರಹಂಲಿಂಕನ್ ಗಡ್ಡ ಬಿಟ್ಟರಂತೆ ಎಂದು ನಾನು ಕೇಳಿದ್ದೇನೆ. ಯಥಾವತ್ ಅದೇ ರೀತಿಯಲ್ಲದಿದ್ದರೂ ನಾನೂಸಹ ಈ ಪತ್ರ ಬರೆಯುತ್ತಿದ್ದೇನೆ. ನೀವು ಯಾವಾಗಲೂ ದುಃಖ ಹಾಗೂ ವಿಚ್ಛಿದ್ರತೆಯ ಕತೆಗಳನ್ನೇ ಬರೆಯುತ್ತೀರಿ. ನೀವು ಬರೆದ ಕತೆಗಳನ್ನು ಓದದಿರಲು ನನ್ನಿಂದ ಸಾಧ್ಯವಾಗುವುದಿಲ್ಲ. ಆದರೆ ಅವನ್ನು ಓದಿ ಮುಗಿಸಿದ ಮೇಲೆ ಮನಸ್ಸು ಉದಾಸವಾಗುತ್ತದೆ. ಮುಂದೆ ನೀವು ಬರೆಯುವಾಗ ಈ ಅಂಶವನ್ನೂ ನೆನಪಿನಲ್ಲಿಟ್ಟುಕೊಂಡು ಈ ಬಗೆಗೆ ಗಮನಹರಿಸುವಿರೇನು ?" ಈ ಪತ್ರ ಕೇರಳದ ರಾಜಧಾನಿ ತಿರುವನಂತಪುರದ ಒಬ್ಬ ಓದುಗಳು ಬರೆದದ್ದು. ಈ ದೀರ್ಘ ಪತ್ರದಲ್ಲಿ ಮೊದಲಿಂದ ಕೊನೆಯವರೆಗೂ ಎಂಥ ಒಂದು ಗಂಭೀರ ಧ್ವನಿ ಇತ್ತೆಂದರೆ ಅದನ್ನು 'ಫ್ಯಾನ್-ಮೇಲ್ (Fan-mail) ಎಂದು ಹಗುರಾಗಿ ಪರಿಗಣಿಸಿ ಅಲಕ್ಷಿಸುವಂತಿರಲಿಲ್ಲ.

ನಾನು ದುಃಖ ಮತ್ತು ವಿಚ್ಛಿದ್ರತೆಯ ಕತೆಗಳನ್ನೇ ಏಕೆ ಬರೆಯುತ್ತೇನೆ ? (ನಾನು ದುಃಖ ಎಂದು ಹೇಳಿದರೆ, ವಿಫಲ ಪ್ರೇಮದಿಂದ ಉಂಟಾಗುವ ದುಃಖವನ್ನು ಇಡೀ ಪ್ರಪಂಚದ ದುಃಖವೆಂದು ಪರಿಭಾವಿಸುವುದು ಎಂದು ನನ್ನ ಅರ್ಥವಲ್ಲ.) ಇದು ನನ್ನೊಬ್ಬನ ಸಮಸ್ಯೆಯಲ್ಲ. ಈ ಯುಗದ ಪ್ರತಿಯೊಬ್ಬ ಲೇಖಕನ ಸಮಸ್ಯೆ. ಇಂದು ನಮ್ಮಲ್ಲಿರುವ ಒಂದೇ ಒಂದು ಸಂವೇದನೆ ಎಂದರೆ-ತಿರಸ್ಕಾರ. ಅಂತೆಯೇ ನಮ್ಮನ್ನು ತೀವ್ರವಾಗಿ ಕಾಡಿ ಘಾಸಿಗೊಳಿಸುವ ಒಂದೇ ಒಂದು ಮಾನಸಿಕ ಸ್ಥಿತಿ ಎಂದರೆ- ಕುದಿಯುವುದು.



ಎಂ.ಟಿ.ವಾಸುದೇವನ್ ನಾಯರ್

ಎಂ. ಟಿ. ವಾಸುದೇವನ್ ನಾಯರ್ (ಜನನ 1934) ಮಲೆಯಾಳಿಯ ಪ್ರಖ್ಯಾತ ಕತೆಗಾರ, ಕಾದಂಬರಿಕಾರ, ಚಿಂತಕ. ಈವರೆಗೆ 15ಕ್ಕೂ ಮಿಕ್ಕಿ ಕಥಾ ಸಂಕಲನಗಳನ್ನು ಆರೇಳು ಕಾದಂಬರಿಗಳನ್ನು ಪ್ರಕಟಿಸಿರುವ ಇವರ 'ನಾಲುಕಟ್ಟು' ಕಾದಂಬರಿ ಕೇರಳ ಸಾಹಿತ್ಯ ಅಕಾಡೆಮಿಯ ಬಹುಮಾನ ಹಾಗು ಇವರ 'ಮಂಜು' 'ಅಸುರವಿತ್ತು' ಮತ್ತು 'ಕಾಲಂ' ಕಾದಂಬರಿಗಳಿಗೆ 1970 ರ ಕೇಂದ್ರಸಾಹಿತ್ಯ ಅಕಾಡೆಮಿಯ ಬಹುಮಾನ ದೊರೆತಿದೆ. ಇವರ ಎರಡು ಚಲನಚಿತ್ರಗಳು- 'ಇರುಟಿಂಟೆ' ಮತ್ತು 'ನಿರ್ಮಾಲ್ಯಂ' ರಾಷ್ಟ್ರೀಯ ಪುರಸ್ಕಾರಗಳಿಂದ ಅಲಂಕೃತಗೊಂಡಿವೆ.

ಅನುವಾದ : ತಿಪ್ಪೇಸ್ವಾಮಿ

ನಾವು ಎಂದೂ ರಂಗು-ರಂಗಿನ ಯುಗವೊಂದರ ಮೂಲಕ ಹಾಯ್ದು ಬಂದವರಲ್ಲವಾದರೂ ಇಂಥ ಒಂದು ಯುಗದ ಬಗೆಗೆ ಸಣ್ಣ-ಪುಟ್ಟ ಕನಸುಗಳನ್ನು ಖಂಡಿತ ಕಾಣುತ್ತಿದ್ದೆವು. ಈಗ ಅವನ್ನೂ ಕಳೆದುಕೊಂಡಿದ್ದೇವೆ. ನಾವು ಇಂದು ಬದುಕೆಂಬ ಬಂಜರು ಭೂಮಿಯಲ್ಲಿ ಅಂಡಲೆಯುತ್ತಿದ್ದೇವೆ. ಇಂದು ಬದುಕು ತನ್ನ ಸಂಕುಚಿತ ಹಾಗೂ ವ್ಯಾಪಕ ಅರ್ಥಗಳಲ್ಲಿ ಮೈ ಮುರಿದು ಪಡುವ ಪರಿಪಾಟಲೆಯಾಗಿದೆ. ನಮಗರಿವಿಲ್ಲದಂತೆಯೇ ಹುರುಳಿಬೀಜದ ಮೊಳಕೆಗಳಂತೆ ನಮ್ಮಿಚ್ಛೆ ಮತ್ತು ಪ್ರವೃತ್ತಿ ಕುಡಿಯೊಡೆದು ಬೆಳೆಯುವ ಬದಲು ಒಳಗೊಳಗೆ ಕಮರಿಹೋಗುತ್ತಿವೆ.

ಸಮಕಾಲೀನ ಕಾದಂಬರಿಗಳನ್ನೇ ತೆಗೆದುಕೊಳ್ಳಿ. ಈ ಕಾದಂಬರಿಗಳಲ್ಲಿನ ಬಹಳಷ್ಟು ಜನ ನಾಯಕರು ಬದುಕಿನ ಚೌಕಟ್ಟಿನ ಹೊರಗೆ ಗುರಿಹೀನರಾಗಿ ಅಲೆಯುವ ಮತ್ತು ದುಃಖವನ್ನನುಭವಿಸುವ ಜೋಲು ಮುಖದವರಾಗಿದ್ದಾರೆ (ಫ್ರೀಕ್ಸ್) ಶಾರೀರಿಕ-ಮಾನಸಿಕ ವಿಕೃತಿಗಳ ಒಡೆಯರು ಇವರು. ಗುಂತರ್ ಗ್ರಾಸ್‌ನ 'ಟಿನ್ ಡ್ರಮ್', 'ಕ್ಯಾಟ್ ಅಂಡ್ ದಿ ಮೌಸ್', ಜಾನ್ ಫೌಲ್ಸ್‌ನ 'ಕಲೆಕ್ಟರ್', ಕಾರ್ಸನ್ ಮ್ಯಕಿ ಕ್ಯಾಲ್ಲೆರ್ಸ್‌ನ 'ಮಾರ್ನಿಂಗ್ ಅಂಡ್ ಈವನಿಂಗ್' ಮುಂತಾದ ಕೃತಿಗಳನ್ನು ಕೊಂಚ ನೆನಪು ಮಾಡಿಕೊಳ್ಳಿ. ಈ ಕಾದಂಬರಿಗಳಲ್ಲಿ ನಾವು ಭೇಟಿಮಾಡುವ ಪಾತ್ರಗಳಲ್ಲಿ ಶೇಕಡ ತೊಂಬತ್ತು ಪಾತ್ರಗಳು ಫ್ರೀಕ್ಸ್‌ಗಳಾಗಿರುತ್ತಾರೆ, ಇಲ್ಲ ಆತ್ಮವೆಂಬ ಒಂಟಿತನದಲ್ಲಿ ಬಂಧಿಗಳಾಗಿದ್ದಾರೆ.

ಈ ಅಶಾಂತತೆ ತನ್ನ ಉತ್ತುಂಗ ಸ್ಥಿತಿಗೆ ತಲುಪುತ್ತದೆ. ಕತೆ ಕೊನೆಗೊಂಡಾಗ ಆಹ್ಲಾದದ ಅನುಭವವಾಗುತ್ತದೆ ; ಆಗ ಪ್ರಪಂಚ ಅಷ್ಟು ಕೆಟ್ಟದ್ದೇನಲ್ಲ ಅಂದೆನ್ನಿಸುತ್ತದೆ. ಕತೆ ಬರೆದಾದ ನಂತರ, ಲಭ್ಯವಾದುದಕ್ಕೆ ಏಕೆ ಖುಷಿಯನ್ನಾಚರಿಸಬಾರದು ಎಂದು ಒಮ್ಮೊಮ್ಮೆ ಅನ್ನಿಸುವುದೂ ಉಂಟು. ಆ ದಿನ ಸಂಜೆ ಗಾಳಿಯಲ್ಲಿ ಹಾರುವ ಹತ್ತಿಯಂತೆ ಅಲ್ಲಿ–ಇಲ್ಲಿ ಸುತ್ತಬಹುದು, ಸ್ನೇಹಿತರೊಡನೆ ಸೇರಿ ಚೆನ್ನಾಗಿ ನಗಬಹುದು, ಯಾವುದಾದರೂ ಪ್ರಸಂಗವನ್ನು ತೆಗೆದುಕೊಂಡು ಗಂಟೆಗಟ್ಟಲೆ ಮಾತನಾಡಬಹುದು.

ಚಿಕ್ಕಂದಿನಿಂದಲೂ ನಾನು ಒಬ್ಬೊಂಟಿಯೇ. ನಾಲ್ವರು ಅಣ್ಣತಮ್ಮಂದಿರಲ್ಲಿ ನಾನು ಎಲ್ಲರಿಗಿಂತ ಕಿರಿಯವ, ತಂದೆ ದೂರದ ಶ್ರೀಲಂಕಾದಲ್ಲಿ ಸೌಕರಿ ಮಾಡುತ್ತಿದ್ದರು. ತಾಯಿ ನಮ್ಮ ದೊಡ್ಡ ಕುಟುಂಬದ ಭಾರವನ್ನು ತನ್ನ ಹೆಗಲಮೇಲೊತ್ತಿಕೊಂಡು ನಗುವನ್ನು, ಸಂತೋಷವನ್ನು ಮರೆತೇ ಬಿಟ್ಟಿದ್ದರು. ಆಡುತ್ತ, ನಗುತ್ತ ಕುಣಿದಾಡುವ ಯಾವುದಾದರೊಂದು ಮನೆಗೆ ಹೋಗಿ ನಾನು ಹಿಂತಿರುಗಿ ಬಂದಾಗ ಮನಸ್ಸು ತುಂಬಾ ಭಾರವಾಗಿರುತ್ತಿತ್ತು. ನನ್ನ ಮನೆಯ ವಾತಾವರಣ ಯಾತನಾಮಯವಾಗಿತ್ತು: ಖಾಲಿ ಉಗ್ರಾಣ, ಸಾಲ ಪತ್ರಗಳು ಸಾಹುಕಾರರು ಇವೆಲ್ಲದರ ಮಧ್ಯೆ ನಾನು. ನನ್ನಂತ ಚಿಕ್ಕ ಹುಡುಗನ ಕಣ್ಣಿಂದಲೂ ಮನೆಯ ಪರಿಸ್ಥಿತಿ ಮುಚ್ಚಿಟ್ಟಿದ್ದೇನಾಗಿರಲಿಲ್ಲ.

ಜೀವನದಲ್ಲಿ ಎಂದೂ ನಾನು ಹುಟ್ಟಿದ ಹಬ್ಬವನ್ನು ಆಚರಿಸಿಲ್ಲ. ಏಕೆಂದರ ನಾನು ಕರ್ಕಟಕ ತಿಂಗಳಲ್ಲಿ ಹುಟ್ಟಿದ್ದೆ. (ಕೇರಳಿಯರ ಪ್ರಕಾರ ಈ ತಿಂಗಳು ತುಂಬ ಅಶುಭದಾಯಕವಾದದ್ದು. ಹೀಗಾಗಿ ಖಾದ್ಯಾನ್ನಗಳ ವಿಚಾರದಲ್ಲಿ ಕೇರಳ ಸ್ವಾವಲಂಬಿಯಲ್ಲ. ಇಲ್ಲಿನ ವ್ಯವಸಾಯದಿಂದ ಎಂಟು–ಒಂಬತ್ತು ತಿಂಗಳ ಕಾಲವನ್ನು ಬಹಳ ಕಷ್ಟದಿಂದ ಕಳೆಯಬಹುದು, ಅಷ್ಟೆ.) ಸಮಾರಂಭಗಳ ಬಗೆಗೆ ಆಕರ್ಷಣೆ ಇದ್ದಿರಬಹುದಾದ ವಯಸ್ಸಿನಲ್ಲಿ ಮನೆಯಲ್ಲಿ ಔಷಧಿಗೆ ಬೇಕೆಂದರೆ ಅಕ್ಕಿಕಾಳು ಇರುತ್ತಿರಲಿಲ್ಲ. ಕುಯಿಲಿನ ಮಹಾಸುದಿನ ಬರುವುದನ್ನೇ ಕಾಯುತ್ತ ಒಂದೊಂದು ದಿನ ಕಳೆಯುವುದೂ ಅತ್ಯಂತ ದುಸ್ತರವಾಗಿತ್ತು. ನನ್ನ ಒಂದು ಹುಟ್ಟಿದ ಹಬ್ಬ ಈಗಲೂ ನನ್ನ ನೆನಪಿನಲ್ಲಿ ಹಸಿರಾಗಿ ಉಳಿದಿದೆ. ಮೂರು ರೂಪಾಯಿಕೊಟ್ಟು ಯಾರಿಂದಲೊ ಭತ್ತ ತೆಗೆದುಕೊಂಡು ಬಂದು, ಕುಟ್ಟಿ ಅನ್ನ ಮಾಡಿದ್ದಳು ಅಮ್ಮ. ಅನ್ನ ಸಿದ್ಧಪಡಿಸುವ ಹೊತ್ತಿಗೆ ಮಧ್ಯಾನ್ಹ 3 ಗಂಟೆಯಾಗಿತ್ತು. ಅಷ್ಟುಹೊತ್ತಿಗೆ ನನ್ನ ಹಸಿವು ತನಗೆ ತಾನೇ ಹಿಂಗಿ ಹೋಗಿತ್ತು. ದೊಡ್ಡವನಾದ ಮೇಲೆ ಬಹಳ ವೈಭವದಿಂದಲೇ ನಾನು ಹುಟ್ಟಿದ ಹಬ್ಬವನ್ನು ಆಚರಿಸಿಕೊಳ್ಳಬಹುದಿತ್ತು. ಆದರೆ ಈಗ ಆ ಬಗೆಗಿನ ಎಲ್ಲ ಆಸೆ–ಆಕಾಂಕ್ಷೆಗಳು ತಣ್ಣಗಾಗಿವೆ.

• • •

ಆ ದಿನಗಳಲ್ಲಿ ಸಾಹಿತ್ಯ—ಸೃಷ್ಟಿ ಎಂದರೆ ಬದುಕಿನಿಂದ ಪಲಾಯನವೆಂದು ಭಾವಿಸಿದ್ದೆ. ರಾತ್ರಿ ಹೊತ್ತು ಮಂಕು ದೀಪದ ಮುಂದೆ ಕುಳಿತು ಏನಾದರೂ ಬರೆಯುತ್ತಿರುವಾಗ, ಹಗಲು ಹೊತ್ತಿನಲ್ಲಿ ಬೆಟ್ಟಗಳ ಇಳಿಜಾರುಗಳಲ್ಲಿ ಹಾಗೂ ಮೈದಾನದಲ್ಲಿ ಸುತ್ತುತ್ತ ಮನಸ್ಸಿನಲ್ಲೇ ಕತೆ–ಕವಿತೆಗಳನ್ನು ರಚಿಸಿಕೊಳ್ಳುತ್ತಿರುವಾಗ ಬದುಕಿನಿಂದ ದೂರ ಹೋಗುತ್ತಿರುವುದರ ಬಗ್ಗೆ ಒಂದು ಬಗೆಯ ತೃಪ್ತಿ ಸಿಗುತ್ತಿತ್ತು. ನಾನು ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೂ ಸಾಹಿತ್ಯ ಇಂಥಾದ್ದೇ ಒಂದು ರಹಸ್ಯ ಲೋಕವಾಗಿತ್ತು. ಈ ಗುಹೆಯಲ್ಲಿ ಯಾವಾಗೆಂದರೆ ಆವಾಗ ಹೋಗಿ ಬಚ್ಚಿಟ್ಟುಕೊಳ್ಳಬಹುದೇನೋ ಎಂದನ್ನಿಸುತ್ತಿತ್ತು.

ಕತೆಗಳನ್ನು, ಕವಿತೆಗಳನ್ನು ಪತ್ರಿಕೆಗಳಿಗೆ ಕಳಿಸುತ್ತಿದ್ದೆ. ಅವುಗಳಲ್ಲಿ ಎಷ್ಟೋ ವಾಪಸ್ಸು ಬರುತ್ತಿದ್ದವು. ವಾಪಸ್ಸು ಬಾರದಿದ್ದ ರಚನೆಗಳನ್ನು ಸಂಪಾದಕರು ಪ್ರಕಟಣೆಗೆಂದು ತಮ್ಮಲ್ಲೇ ಇಟ್ಟುಕೊಂಡಿರಬಹುದೆಂದು ಭಾವಿಸಿ ಬುಕ್-ಸ್ಟಾಲ್‌ಗಳ ಬಳಿ ಹೋಗಿ ಪತ್ರಿಕೆಗಳ ಪುಟಗಳನ್ನು ತಿರುವಿ ಹಾಕುತ್ತಿದ್ದೆ. ಎಷ್ಟೇ ವಾರಗಳು ಕಳೆದರೂ ನನ್ನ ಬರಹಗಳು ಮಾತ್ರ ಎಲ್ಲೂ ಗೋಚರಿಸುತ್ತಿರಲಿಲ್ಲ.

ರಜೆ ದಿನಗಳಲ್ಲಿ ನನ್ನ ಕಷ್ಟ ಇನ್ನೂ ಹೆಚ್ಚಾಗುತ್ತಿತು. ಮೂರು ಮೈಲಿಗಳ ದೂರದಲ್ಲಿದ್ದ ಅಂಚೆ ಕಛೇರಿಗೆ ದಿನವೂ ಹೋಗಬೇಕಾಗುತ್ತಿತ್ತು-ವಾಪಸ್ ಆಗುತ್ತಿದ್ದ ಬರಹಗಳು ಬೇರೆಯವರ ಕೈಗೆ ಸಿಗದಿದ್ದಂತೆ ನೋಡಿಕೊಳ್ಳಲು. ಹೀಗೆ ನಿತ್ಯವೂ ಅಂಚೆ ಕಛೇರಿಗೆ ಹೋಗುವುದು, ಬರಿ ವಾಪಸ್ ಬರುವುದು–ಇದು ನನಗೆ ನಾಚಿಕೆ ಎನ್ನಿಸತೊಡಗಿತು, ಹೀಗಾಗಿ ಉಚಿತವಾಗಿ ಪುಸ್ತಕ–ಸೂಚಿಯನ್ನು ಕಳುಹಿಸುತ್ತಿದ್ದ ಪುಸ್ತಕ ಪ್ರಕಾಶಕರಿಗೆ ಕಾರ್ಡ್ ಬರೆಯುತ್ತಿದ್ದೆ. ಮೊದಮೊದಲು ಪ್ರತಿ ಭಾನುವಾರ ಹನ್ನೆರಡು ಮೈಲಿ ದೂರ ನಡೆದು ಹೋಗಿ ಓದಲು ಪುಸ್ತಕಗಳನ್ನು ಕೊಂಡು ತರುತ್ತಿದ್ದೆ.

ಯಾವಾಗಲಾದರೂ ಅಲ್ಲೊಂದು ಇಲ್ಲೊಂದು ಬರಹ ಪ್ರಕಟವಾದರೂ ಯಾವುದೇ ಸಂಭಾವನೆ ಇಲ್ಲ, ಆ ಸಂಚಿಕೆಯ ಒಂದು ಪ್ರತಿಯೂ ಬರುತ್ತಿರಲಿಲ್ಲ. ಆದರೂ ಮುದ್ರಿತ ಅಕ್ಷರಗಳಲ್ಲಿ ನನ್ನ ಬರಹಗಳನ್ನು ಕಂಡಾಗ ಒಂದು ಬಗೆಯ ಪ್ರೇರಣೆ ಪಡೆದುಕೊಳ್ಳುತ್ತಿದ್ದೆ. ಆದರೆ ಮನೆಯ ಮಂದಿಗೆ ನನ್ನ ಬರವಣಿಗೆಯ ಬಗೆಗೆ ಯಾವುದೇ ಆಸಕ್ತಿ ಇರಲಿಲ್ಲ.

ಬಿ. ಎಸ್. ಸಿ. ಪಾಸ್ ಮಾಡಿ ನಿರುದ್ಯೋಗಿಯಾಗಿ ಖಾಲಿ ಜೇಬಿನಲ್ಲಿ ಮನೆಯಿಂದ ಹೊರಬಿದ್ದೆ. ಒಂದು ದಿನ ಮನೆಯವರೆಲ್ಲರ ಮುಂದೆ ತಂದೆ ಏನೆಂದು ಹೇಳಿದರು ಗೊತ್ತೆ–'ಇವನು ನನ್ನ ಚಿಕ್ಕಮಗ, ಶ್ರದ್ಧೆ–ಭಕ್ತಿ ಏನೊಂದೂ ಇಲ್ಲ. ಯಾವುದೇ ಕೆಲಸಕ್ಕೂ ಇಲ್ಲ. ಒಂದು ಕೆಲಸ ಇವನು ಮಾಡ್ತಾನೆ-ಹಾದಿ ಬೀದಿಯಲ್ಲಿ ತಿರುಗಾಡುವವರ ತಲೆ–ಬುಡವಿಲ್ಲದ ಕತೆಗಳನ್ನು ಬರೆಯುವುದು, ಬಿಳಿ ಕಾಗದವನ್ನು ಕಪ್ಪು ಮಾಡುವುದು'. ಹೊರಗಿನಿಂದ ಬಂದ ಕೆಲವು ನೆಂಟರು ಸಹ ಅಲ್ಲಿದ್ದರು. ತಟ್ಟೆಗೆ ಬಡಿಸಿದ್ದ ಊಟವನ್ನು ಅರ್ಧದಲ್ಲೇ ಬಿಟ್ಟು ಎದ್ದಿದ್ದೆ ಅಂದು. ಮಾರನೆ ದಿನ ಅರ್ದಂಬರ್ಧ ಬಣ್ಣ ಎದ್ದಿದ್ದ ಟ್ರಂಕ್ ಅನ್ನು ತೆಗೆದುಕೊಂಡು ಬಸ್ ಸ್ಟಾಂಡ್ ಕಡೆ ಹೊರಟಿದ್ದೆ. ಬಸ್ ಸ್ಟಾಂಡ್‌ನಲ್ಲಿ ನನಗೆ ಪರಿಚಿತನಾಗಿದ್ದ ಕೂಲಿಯೊಬ್ಬನಿಂದ ಎರಡು ರೂಪಾಯಿ ಸಾಲ ತೆಗೆದುಕೊಂಡು ನನ್ನ ಯಾತ್ರೆಯನ್ನಾರಂಭಿಸಿದ್ದೆ....

ಯಾವುದೇ ಖಾಯಂ ನೌಕರಿ ಇಲ್ಲ. ಯಾವುದೋ ಒಂದು ಟ್ಯುಟೋರಿಯಲ್ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದೆ, ಮೂರು ದಿನ ಗ್ರಾಮ ಸೇವಕನ ಕೆಲಸವನ್ನೂ ನಿರ್ವಹಿಸಿದೆ. ಕೆಲವು ತಿಂಗಳುಗಳಿಗಷ್ಟೇ ಸೀಮಿತವಾಗಿದ್ದ ಈ ಕೆಲಸಗಳನ್ನು ಮಾಡುತ್ತಲೇ ಬರವಣಿಗೆಯನ್ನೂ ಮುಂದುವರಿಸಿದೆ. ಇದರಿಂದ ಸ್ವಲ್ಪ ಸಮಯಕ್ಕಾದರೂ ಸರಿ, ಬದುಕಿನ ಕಹಿಯಿಂದ ಬಿಡುಗಡೆ ಪಡೆಯುತ್ತಿದ್ದೆ,

ಇಂದು ಪುಸ್ತಕಗಳಿಂದ ಹಣ ಬರುತ್ತಿದೆ. ನಾನು ಇಷ್ಟಪಟ್ಟಂಥ ಕೆಲಸ ಸಿಕ್ಕಿದೆ. ಆದರೂ ನಾನು ಸಂತೋಷದಿಂದ ಇದ್ದೀನೇನು ? ಇಲ್ಲ. ನನ್ನ ಅಂತರ್ಯದಲ್ಲಿ ಸಾವಿರಾರು ಕಹಿಗಳಿವೆ. ಪ್ರಪಂಚದ ಕಹಿಗಳು, ನೋವುಗಳು ನನ್ನ ಮನಸ್ಸಿನಲ್ಲಿ ಹೆಪ್ಪುಗಟ್ಟಿವೆ. ನನ್ನ ಕೋಪ-ತಾಪ, ವಿರೋಧದಿಂದ ಏನೂ ಆಗುವುದಿಲ್ಲ ಎಂಬುದು ನನಗೆ ಗೊತ್ತಿದೆ. ನನ್ನ ಪೀಳಿಗೆಯವರಿಗೂ ಇದು ಗೊತ್ತಿದೆ. ಅಲ್ಸರ್‌ನಿಂದ, ಲಿವರ್ ಡಿಸೀಸ್‌ನಿಂದ ಕೆಲವು ಜನ ಆತ್ಮಾಹುತಿ ಮಾಡಿಕೊಳ್ಳುತ್ತಾರೆ. ಬದುಕಬೇಕೆಂಬ ಆಸೆ ಹೊತ್ತಿರುವ ನಾನು ಆತ್ಮಹತ್ಯೆ ಮಾಡಿಕೊಳ್ಳಲಾರೆ. ನನ್ನ ಕಹಿ ಮತ್ತು ಅಲ್ಸರ್ ಅನ್ನು ಹೊತ್ತು ಸಾಹಿತ

ಗತಿಸಿಹೋದ ಯಾವುದೋ ಒಂದು ಸುಂದರ ಗತಕಾಲದ ಒಡೆಯರಲ್ಲ ನಾವು. ಆ ಕಾಲದ ಸುಂದರವಾದ ಅಂಶಗಳನ್ನು ಮೆಲುಕು ಹಾಕುತ್ತ ನಿಟ್ಟುಸಿರು ಬಿಡುವಂತಿಲ್ಲ. ಆಗಿ ಹೋಗಿರುವ (The Lost generation) ಪೀಳಿಗೆಯ ಭಗ್ನ ಆಸೆ-ಆಕಾಂಕ್ಷೆಗಳು ಸಮಕಾಲೀನ ಕೃತಿಗಳಲ್ಲಿ ಲಭ್ಯವಾಗುತ್ತಿವೆ. ಮುಂಬರುವ ಯಾವುದೇ ಸ್ವರ್ಣಯುಗದ ರೂಪರೇಷೆಗಳ ಕನಸು ಕಾಣಲು ಸಹ ನಮ್ಮಲ್ಲಿ ಯಾವುದೇ ಆಧಾರವಿಲ್ಲ. ನೆನಪಿನಲ್ಲಿಟ್ಟುಕೊಳ್ಳಲು ನಮ್ಮ ಬಳಿ ವೈಯುಕ್ತಿಕ ಬದುಕಿನ ಪ್ರಭಾವದಿಂದ ಮೂಡಿರುವ ಅಲ್ಪ ಸ್ವಲ್ಪ ಸುಖ ಹಾಗೂ ಪುಟಾಣಿಗಳಂಥ ಕೆಲವು ಆಹ್ಲಾದಕರ ಪ್ರಸಂಗಗಳು ಮಾತ್ರ ಉಳಿದಿವೆ.

ನನ್ನ ಮೊಟ್ಟಮೊದಲ ಕತೆ (ದೇವರ ದಯೆಯಿಂದ ಅದು ಬೆಳಕು ಕಾಣಲಿಲ್ಲ) ಓರ್ವ ಅಂಗವಿಕಲ ಭಿಕ್ಷುಕನಿಂದ ಪ್ರೇರಿತಗೊಂಡು ಬರೆದುದಾಗಿತ್ತು. ಆ ಅಂಗಹೀನ ವ್ಯಕ್ತಿಯನ್ನು ಹಲಗೆಯ ಮೇಲೆ ಕೂಡಿಸಿ ಹೆಗಲ ಮೇಲೆ ಇಬ್ಬರು ಹೊತ್ತುಹೋಗುತ್ತಿದ್ದರು. ರಸ್ತೆಯಲ್ಲಿ ಕಂಡ ಆ ದೃಶ್ಯ ನನ್ನಲ್ಲಿ ಕ್ರೋದವನ್ನುಂಟುಮಾಡಿದ್ದಿರಬಹುದು. ಈ ಸಮಾಜದಲ್ಲಿನ ಶ್ರೀಮಂತರು ಸುಖ-ಸೌಲಭ್ಯ ಅನುಭವಿಸುತ್ತ ಬದುಕುತ್ತಿದ್ದಾರಲ್ಲ ಎಂದು ನಾನು ಯೋಚಿಸಿರಬಹುದು.

ಈಗಂತೂ ಭಿಕ್ಷುಕರು, ಕುರುಡರು, ಕುಂಟರು, ಯಾವ ಆಸರೆಯೂ ಇಲ್ಲದ ಅನಾಥರು ಪ್ರತಿ ಗಲ್ಲಿ-ಗುಂಡಿಗಳಲ್ಲಿ ಕಾಣಬರುತ್ತಿದ್ದಾರೆ. ನಾನು ಅವರನ್ನು ನೋಡುತ್ತಿದ್ದೇನೆ. ನನ್ನಲ್ಲಿರುವ ಕಥೆಗಾರನಲ್ಲ. ಅವರಿಗೆ ಜನ್ಮ ಕೊಡುವ ಸಾಮಾಜಿಕ ವ್ಯವಸ್ಥೆಯನ್ನು ನಾನು ಖಂಡಿತ ಎಂದೂ ನೆನಪು ಮಾಡಿಕೊಳ್ಳುವುದಿಲ್ಲ. ಏಕೆಂದರೆ ನಗರದ ಬೀದಿಗಳ ಜನಜಂಗುಳಿಯ ಗುಂಪುಗಳನ್ನು ಸೀಳಿಕೊಂಡು ತಲುಪಬೇಕೆಂದಿರುವಸ್ಥಳಕ್ಕೆ ತಲುಪಬೇಕೆಂದಿರುವಾಗ ನನ್ನ ಮನಸ್ಸಿನಲ್ಲಿರುವುದು ಸಾವನ್ನು; ತನ್ನ ಜತೆಯಲ್ಲಿ ಹೊತ್ತು ಓಡಾಡುವ ಬಸ್ಸುಗಳ ಕೆಳಗೆ ಸಿಕ್ಕಿ ಬಜ್ಜಿಯಾದೇನು, ಬೆವರಿನಿಂದ ತೊಯ್ದು ಏದುಸಿರು ಬಿಡುತ್ತ ಮುಂದೆ ಮುಂದೆ ಸರಿಯಲು ಆತುರದಿಂದಿರುವ ಮಂದಿಯ ಕಾಲುಗಳ ಕೆಳಗೆ ಸಿಕ್ಕಿ ಅಪ್ಪಚಿಯಾದೇನು, ಮೋರಿಗಳಲ್ಲಿ ಹರಿಯುವ ನೀರಿನಿಂದ ಅಭಿಷಿಕ್ತನಾದೇನು ಎಂಬ ಅತಂಕವೇ ಕಾರಣ. ಹೀಗಾಗಿ ಇಷ್ಟರಲ್ಲಿ ಯಾವುದಾದರೊಂದು ಕಥೆಯ ಪಾತ್ರವಾಗಲಾರದೇನು ? ಖಂಡಿತ ಆಗಬಲ್ಲದು. ಈಗಲೂ ಒಂದು ಕಥಾವಸ್ತು ನನ್ನ ಮನಸ್ಸಿನಲ್ಲಿದೆ. ಆ ಕಥಾ ಪಾತ್ರ ನಗರದ ವಿಭಿನ್ನ ಭಾಗಗಳಿಗೆ ಜೀವಂತ ವ್ಯಕ್ತಿಗಳನ್ನು ಹಂಚುತ್ತದೆ. ಸಂಜೆ ಅವರನ್ನೆಲ್ಲ ಒಗ್ಗೂಡಿಸಿ ಅವರು ದಿನವಿಡಿ ಮಾಡಿದ ದುಡಿಮೆಯನ್ನೂ ಕಸಿದುಕೊಳ್ಳುತ್ತದೆ ಹಾಗೂ ಅವರನ್ನು ಚಾಟಿಏಟಿನಿಂದ ನಿಯಂತ್ರಿಸುತ್ತದೆ. ಆದರೆ ಈಗ ಎಲ್ಲರೂ ಸಮಾಜದ ಬಗ್ಗೆ ಯೋಚಿಸುವುದನ್ನು ನಿಲ್ಲಿಸಿಬಿಟ್ಟಿದ್ದಾರೆ.

1947ರಲ್ಲಿ ನಾನು ಮೊದಲಬಾರಿ ಕಲ್ಲಿಕೋಟೆ, ನಗರಕ್ಕೆ ಬಂದೆ. ಆಗ ನಾನು ಆರನೆಯ ತರಗತಿಯ ವಿದ್ಯಾರ್ಥಿ. ತಂದೆಯ ಹಿಂದೆ ಹಿಂದೆ ಸುತ್ತುತ್ತ ನಗರವೆಂಬ ಆ ಮಹಾದ್ಭುತ ವಸ್ತುವನ್ನು ನೋಡಿ ನಾನ ದಂಗಾಗಿದ್ದೆ. ಈಗಾದರೊ ನಗರಗಳು ಯಾತನಾಮಯ ಅಸ್ತಿತ್ವದ ಕಪ್ಪ ಕೋಟಲೆಗಳನ್ನು ನೆನಪಿಸುವ ಕಹಿ ಸತ್ಯಗಳಾಗಿವೆ.

ಈ ನಗರದ ಭಾಗ ಈಗ ಜಗತ್ತಿನ ಅಥವಾ ಸಮಾಜದ ಭಾಗವಾಗಿದೆ. ಆದರ ಒಂದು ದಡದಲ್ಲಿ ನಿಂತಿರುವ ಲೇಖಕ ಇಲ್ಲಿ ತಾನೆಲ್ಲಿ ಅಪ್ಪಚ್ಚಿಯಾಗಿ ಬಿಡುವೆನೋ, ಹಾದಿಯ ಲದ್ದಿ ತನ್ನ ಮೇಲೆಲ್ಲಿ ಎಗರಿಬಿಡುವುದೋ, ತಾನೆಲ್ಲಿ ಅಸ್ತಿತ್ವಹೀನನಾಗಿ ಬಿಡುವೆನೋ ಹಾಗೂ ತನ್ನ ಗೂಡಿಗೆ ತಾನೂ ಸುರಕ್ಷಿತನಾಗಿ ಸೇರಬೇಕೆಂಬುದರ ಬಗೆಗೆ ಜಾಗರೂಕನಾಗಿರುತ್ತಾನೆ. ಲೇಖಕ ಸದಾ ದುಃಖಿತನಾಗಿ ಅಳುತ್ತ-ಬಿಕ್ಕಳಿಸುತ್ತ ಇರಬೇಕೇನು ? ನಗುವ ಹಕ್ಕು ಅವನಿಗಿಲ್ಲವೇನು ? ಖಂಡಿತ ನಗುವ ಹಕ್ಕು ಆತನಿಗಿದೆ. ಎಷ್ಟೋ ಜನ ನಕ್ಕೂ ನಗುತ್ತಾರೆ. ಸಾಲ್‌ಬೆಲ್ಲೋನ ನಗು ನಮ್ಮನ್ನು ಘಾಸಿಗೊಳಿಸುತ್ತದೆ. ಗುಂತರ್‌ಗ್ರಾಸ್‌ನ ನಗು ನಮ್ಮ ನರನಾಡಿಗಳನ್ನು ಜುಂ ಅನ್ನುವಂತೆ ಮಾಡುತ್ತದೆ. ಅಂತೆಯೇ ಎಷ್ಟೋ ಜನರು ನಗು ಎಂಬುದಿದೆ ಎಂಬುದನ್ನೇ ಮರೆತಿದ್ದಾರೆ.

ನಾನು ಹೇಳುವುದು ಇತ್ತು, ಆದ್ದರಿಂದ ನಾನು ಕತೆ ಬರೆಯಲಾರಂಭಿಸಿದೆ ಎಂದು ಎಷ್ಟೋ ಜನ ಹೇಳುವುದನ್ನು ನಾನು ಕೇಳಿದ್ದೇನೆ. ಆದರೆ ನನ್ನ ಮಟ್ಟಿಗೆ ಹೀಗಾಗಿಲ್ಲ. ಹಾರೂನ್ ಅಲ್ ರಶೀದ್‌ರ ಅರಮನೆಯಲ್ಲಿ ಕತೆಗಾರರು ನೇಮಕಗೊಳ್ಳುತ್ತಿದ್ದರು. ರಾಜದರ್ಬಾರಿನಲ್ಲಿ ಕತೆಗಳನ್ನು ಹೇಳಿ ಅವರ ಮನಸ್ಸನ್ನು ಸಂತೋಷಪಡಿಸುವುದು ಅವರ ಕೆಲಸವಾಗಿತ್ತು. ಆ ಖಲೀಫ್‌ರು ಕೊನೆಗೊಳ್ಳುತ್ತಿದ್ದಂತೆ ಈ ಕತೆಗಾರರ ಸುವರ್ಣಯುಗವೂ ಸಂದುಹೋಯಿತು. ನಮ್ಮಲ್ಲಿ ಮನೋರಂಜಕ ಕತೆಗಳ ಭಂಡಾರವಿದ್ದು ಅವುಗಳನ್ನು ಜನರಿಗೆ ಕೇಳಿಸಬೇಕು ಎಂಬ ಉದ್ದೇಶದಿಂದ ಇಂದು ನಾವು ಕತೆಗಳನ್ನು ಬರೆಯುತ್ತಿಲ್ಲ ಹಾಗೂ ಕತೆಗಳನ್ನು ಬರೆಯುವುದು ಒಂದು ಲಾಭದಾಯಕ ದಂಧೆ ಎಂದು ಭಾವಿಸಿಯೂ ನಾವು ಕತೆಗಳನ್ನು ಬರೆಯುತ್ತಿಲ್ಲ. ಹಾಗೆ ನೋಡಿದರೆ ಮಲೆಯಾಳಂ ಲೇಖಕರಿಗೆ ಸಿಗುವ ಸಂಭಾವನೆಯೂ ನಗಣ್ಯವಾದುದೇ. ಲೈಬ್ರರಿ ಸೀಸನ್‌ನಲ್ಲಿ ಲೇಖಕರು ಪ್ರತಿವರ್ಷ ಹೇಗಾದರೂ ಮಾಡಿ ನಾಲ್ಕಾರು ಪುಸ್ತಕಗಳನ್ನು ಪ್ರಕಟಿಸಿದ್ದಾದರೆ ಮಾತ್ರ ಇಲ್ಲಿನ ಲೇಖಕ ಬದುಕಬಲ್ಲ. ಲೇಖಕ ಹುದ್ದೆಗೆ ಯಾವ ಗ್ಲಾಮರ್ ಸಹ ಇಲ್ಲ. ಹಾಗೆ ನೋಡಿದರೆ ನಗರದ ಅತಿದೊಡ್ಡ ಕಾದಂಬರಿಕಾರನಿಗಿಂತ ಇಲ್ಲಿನ ಯಾವನೋ ಒಬ್ಬ ಉದ್ಯಮಿ ಅಥವಾ ಫುಟ್‌ಬಾಲ್ ಆಟಗಾರನನ್ನು ಜನ ಹೆಚ್ಚು ಅರಿತಿರುತ್ತಾರೆ.

• •

ಆದರೆ ಲೇಖಕ ತನ್ನನ್ನು ತಾನು ಪ್ರಶ್ನಿಸಿಕೊಂಡಾಗ ಇವೆಲ್ಲ ಅತ್ಯಾವಶ್ಯಕವೇನಲ್ಲ ಎಂದೇ ಅವನಿಗನ್ನಿಸುತ್ತದೆ. ಬದುಕಿನ ಗಲಾಟೆಗಳಿಂದ ದೂರವಾಗಿ ಯಾವುದೋ ಒಂದು ನದಿ ದಡದಲ್ಲಿ ಗುಡಿಸಲು ಕಟ್ಟಿಕೊಂಡು ಅವನು ವಾಸಿಸುತ್ತಿದ್ದಾನೆ. ಗುಂಪಿನಲ್ಲಿ ಅವನು ಒಂಟಿಯಾಗಿದ್ದಾನೆ. ತನ್ನ ಕಿಟಕಿಯಿಂದ ಹೊರಗೆ ನೋಡಿದರೆ ಅವನಿಗೆ ಯುಗದ ಅನಂತಪಥದಲ್ಲಿ ಒಂದು ಮಾರ್ಗದೀಪದಿಂದ ಇನ್ನೊಂದು ಮಾರ್ಗದೀಪದವರೆಗಿನ ಒಂದು ಕಾಲು ಹಾದಿ ಕಂಡುಬರುತ್ತದೆ. ಅದೆಷ್ಟೋ ಯುಗಗಳಿಂದ ಅದೆಷ್ಟು ಸಹಸ್ರಾರು ದೀರ್ಘರಾತ್ರಿಗಳಲ್ಲಿ ಅವನು ಆ ಕಡೆ ಕಿವಿಗೊಟ್ಟು ಮಲಗಿರುತ್ತಾನೆ. ಮಲಗಿ ಆ ಕಡೆಯಿಂದ ಹಾದುಹೋಗುವ ಪುರುಷರ, ಸ್ತ್ರೀಯರ ಧ್ವನಿಗಳನ್ನು, ನಗುವನ್ನು ಮತ್ತು ನಿಟ್ಟುಸಿರನ್ನು ಕೇಳಿಸಿಕೊಳ್ಳುತ್ತಿರುತ್ತಾನೆ. ಅವರ ಕಾಲುಸಪ್ಪಳಗಳನ್ನು, ನೋವು-ವೇದನೆಯನ್ನು, ಅವರು ಬಿಕ್ಕಳಿಸಿ ಅಳುವುದನ್ನು ಅವನು ತನ್ನ ಹೃದಯಬಟ್ಟಲುಗಳಲ್ಲಿ ಗ್ರಹಿಸಿಟ್ಟುಕೊಳ್ಳುತ್ತಾನೆ.

ಮೊದಲು ಕತೆ ಬರೆಯಲಾರಂಭಿಸಿದಾಗ, ಜನಗಳು ಇಷ್ಟಪಡುವ, ಬಯಸುವ ಕತೆಗಳು ನನ್ನ ಮೂಸೆಯಲ್ಲಿವೆಯೋ, ಇಲ್ಲವೋ ಎಂಬುದರ ಬಗ್ಗೆ ನಾನು ಯೋಚಿಸಿರಲಿಲ್ಲ. ನನ್ನ ಮನಸ್ಸು ಸದಾ ಅಶಾಂತವಾಗಿರುತ್ತಿತ್ತು. ಆ ಅಶಾಂತತೆಯನ್ನು ಅದೆಷ್ಟೋ ವರ್ಷಗಳಿಂದ ಹೊರುತ್ತಲೇ ಬಂದಿದ್ದೇನೆ. ಅದಕ್ಕೊಂದು ಮೂರ್ತ ರೂಪ ಕೊಡುವುದು ಸಾಧ್ಯವೆ ಎಂಬುದರ ಬಗ್ಗೆ ವಿಶ್ಲೇಷಿಸುವುದು ಅಥವಾ ಅದನ್ನು ವ್ಯಾಖ್ಯಾಸುವುದು ಕಷ್ಟ. ಬೂದಿಯಿಂದಾವೃತ್ತವಾದ ಕೆಂಡದಂತೆ ಒಳಗೊಳಗೇ ಉರಿಯುತ್ತಿರುವ ಈ ತೀವ್ರ ಅಶಾಂತತೆಯ ಮಧ್ಯೆ ಬರೆಯುವ ಸಿದ್ಧತೆ ನಡೆಸುತ್ತೇನೆ. ಬದಕು ಈ ಅಶಾಂತತೆಯಿಂದ ಮುಖ ತಿರುಗಿಸಿಕೊಂಡು ಹೋಗುವ ಪ್ರಯತ್ನ. ಕತೆ ಬರೆಯುವಾಗ

ವೆಂಬ ನನ್ನ ಚಿಕ್ಕ ಪ್ರಪಂಚದಲ್ಲಿ ನಾನು ಕಾಲದ ಕೈದಿಯಂತೆ ಬದುಕುತ್ತಿದ್ದೇನೆ.

ಸಂಕ್ಷೇಪವಾಗಿ ಹೇಳುವುದಾದರೆ ನನ್ನ ಅಂತರ್ಲೋಕವನ್ನು ರೂಪಿಸಿಕೊಳ್ಳುವ ಕೆಲಸವನ್ನು ನನ್ನ ಕಥಾಲೇಖನದಿಂದ ಮಾಡುತ್ತ ಬಂದಿದ್ದೇನೆ. ಅವಿತುಕೊಳ್ಳಲು, ಅಳಲು, ನಗಲು ಹಾಗೂ ಕನಸು ಕಾಣಲು ಈ ಬಗೆಯ ಒಂದು ಪುಟ್ಟ ಲೋಕದ ತೀವ್ರ ಅಗತ್ಯವಿದೆ. ಬದುಕಿನಲ್ಲಿ ಆಘಾತಗಳಾದಾಗಲೆಲ್ಲ ಅವನ್ನ ಸಹಿಸಿಕೊಳ್ಳುವ ಶಕ್ತಿ ಇಲ್ಲದಂತಾದಾಗ ಇಂಥ ಒಂದು ಗುಹೆಯು ಆವಶ್ಯಕತೆ ಬೀಳುತ್ತದೆ. ಇಲ್ಲಿ ನಾವು ಸುಲಭವಾಗಿ ತೂರಿಕೊಳ್ಳಬಹುದು. ಫುಟ್‌ಪಾತ್ ಮೇಲೆ, ಇಲ್ಲ, ರೈಲ್ವೇ ಸ್ಟೇಷನ್‌ನಲ್ಲಿ ಜನ ಆಟೋಗ್ರಾಫ್‌ಗಾಗಿ ಲೇಖಕನ ಸುತ್ತಲೂ ಘೇರಾಯಿಸುವುದಿಲ್ಲ. ಲೇಖಕ ಇದನ್ನೆಲ್ಲ ಇಷ್ಟ ಪಡುವುದಿಲ್ಲ ಕೂಡ. ಅವನು ತನಗಾಗಿ ಬರೆದುಕೊಳ್ಳುತ್ತಾನೆ, ತನ್ನ ಚಿಕ್ಕ ಪ್ರಪಂಚವನ್ನು ಸಮೃದ್ಧಗೊಳಿಸಿಕೊಳ್ಳಲು. ಬದುಕಿನ ದಾಸ್ಯತೆಯಿಂದ ಮುಕ್ತನಾಗಿ ತಾನು ಕಟ್ಟಿದ ರಾಜ್ಯದ ಸ್ವಾಮಿಯಾಗಿರಲು ಅವನು ಬರೆಯುತ್ತಾನೆ.

ರಾಷ್ಟ್ರಕ್ಕೆ ಮಾಡಬಹುದಾದ ಎಲ್ಲಕ್ಕಿಂತ ಮಿಗಿಲಾದ ಸೇವೆ.

ನನಗನ್ನಿಸುವಂತೆ ತನ್ನ ಬಗ್ಗೆ ಮಾಡಲಾಗುವ ಯಾವುದೇ ವಿಮರ್ಶೆ ಅಥವಾ ವಿವಾದಗಳಿಗೆ ಉತ್ತರ ಕೊಡುವುದರಲ್ಲಿ ಲೇಖಕ ತನ್ನ ಸಮಯವನ್ನೂ ಹಾಳುಮಾಡಿಕೊಳ್ಳಬಾರದು. ಆದರೆ ನಮ್ಮಲ್ಲಿ ಈ ರೀತಿ ಇರುವುದು ಅಸಂಭವವೇದು ತೋರುತ್ತದೆ. ಆದರೂ ಸಾಹಿತ್ಯಿಕ ಸಿದ್ಧಾಂತಗಳಿಗೆ ಸಂಬಂಧಿಸಿದ ಚರ್ಚೆಗಳಲ್ಲಿ ಭಾಗವಹಿಸದಿರುವುದೇ ಒಳ್ಳೆಯದು ಎಂದನ್ನಿಸುತ್ತಿದೆ. ಸೃಜನಶೀಲ ಲೇಖಕ ತನ್ನ ಹೃದಯದಲ್ಲಿನ ಬೆಂಕಿಯನ್ನು ಪ್ರಜ್ವಲಿಸಿಟ್ಟುಕೊಂಡಿರಬೇಕು. ಚರ್ಚೆ–ಹರಟೆಗಳಿಂದ ಈ ಬೆಂಕಿಯ ಕಾವು ಕಮ್ಮಿಯಾಗುತ್ತದೆ.

ಸಮಾಜದ ಬಗೆಗೆ ಲೇಖಕನ ಜವಾಬ್ದಾರಿ ಪ್ರತ್ಯಕ್ಷವಾದುದಲ್ಲ, ಪರೋಕ್ಷವಾದದ್ದು ಎಂದು ನಾನು ನಂಬಿದ್ದೇನೆ. ಏಕೆಂದರೆ ಸಮಾಜದಲ್ಲಿ ಲೇಖಕನ ಅಸ್ತಿತ್ವವೇನು ಎಂಬುದನ್ನು ನಮ್ಮ ಸಮಾಜ ತಿಳಿದುಕೊಂಡೇ ಇಲ್ಲ. ಚಿಕ್ಕ ತರಗತಿಗಳಲ್ಲಿ ಪ್ರಬಂಧಗಳನ್ನು ಬರೆಸುವಾಗ ಮಾತ್ರ ಹಳೆಯ ಸವೆದ

ನನ್ನಾಗಿ ಮಾಡಿ ನನ್ನಿಂದ ಕಾದಂಬರಿ ಬರೆಯಲಾಗುವುದಿಲ್ಲ. ಏಕೆಂದರೆ ನನಗೆ ಅದು ಮೆಟೀರಿಯಲ್ ಆಗುವುದಿಲ್ಲ. ಯಾವುದು ನನ್ನನ್ನು ತೀವ್ರವಾಗಿ ಆಘಾತಗೊಳಿಸಿದೆಯೋ ಅದನ್ನು ಮಾತ್ರ ನಾನು ಕಥಾವಸ್ತುವನ್ನಾಗಿ ಸ್ವೀಕರಿಸಬಲ್ಲೆ. ಭಾರತ-ಚೀನಾ, ಭಾರತ–ಪಾಕಿಸ್ತಾನ, ಪಂಚವಾರ್ಷಿಕ ಯೋಜನೆಗಳು, ಅಣುಬಾಂಬು— ಇವುಗಳಲ್ಲಿ ಯಾವುದೂ ಸಹ ನನ್ನಲ್ಲಿನ ಕಥೆಗಾರನ ಮೇಲೆ ಯಾವುದೇ ಬಗೆಯ ಪ್ರಭಾವ ಬೀರುವಲ್ಲಿ ಯಶಸ್ವಿಯಾಗಿಲ್ಲ.

ಮಾನವ ಮನಸ್ಸಿನ ಎಷ್ಟೋ ಪದರಗಳಲ್ಲಿ ಉಂಟಾಗುವ ಕ್ರಿಯೆ-ಪ್ರತಿಕ್ರಿಯೆಗಳಿಂದ ಲೇಖಕ ತನ್ನ ಸೃಷ್ಟಿ–ಕ್ರಿಯೆಯನ್ನು ಆರಂಭಿಸುತ್ತಾನೆ. ಕತೆಗಳಲ್ಲಿ ಮನೋವಿಶ್ಲೇಷಣಾತ್ಮಕತೆ ಇದ್ದಾಕ್ಷಣಕ್ಕೆ ಕತೆಗಾರನಲ್ಲಿ ಸಾಮಾಜಿಕ ಪ್ರಜ್ಞೆಯೇ ಇಲ್ಲ ಎಂದು ಭಾವಿಸುವುದು ಮೂರ್ಖತನವಾಗುತ್ತದೆ. ಆತ ವೈಯಕ್ತಿಕ ಅನುಭೂತಿಗಳನ್ನು ತನ್ನ ಕತೆಗಳಿಗೆ ಗ್ರಾಸವನ್ನಾಗಿ ಮಾಡಿಕೊಳ್ಳುತ್ತಾನೆ. ಹೀಗೆ ಗ್ರಾಸವಾದ ವ್ಯಕ್ತಿಗಳ ಅಸ್ತಿತ್ವ ಸಮಾಜದಲ್ಲಿದೆ. ಸಮಾಜ

ಮಾನವ ಮನಸ್ಸಿನ ಎಷ್ಟೋ ಪದರಗಳಲ್ಲಿ ಉಂಟಾಗುವ ಕ್ರಿಯೆ-ಪ್ರತಿಕ್ರಿಯೆಗಳಿಂದ ಲೇಖಕ ತನ್ನ ಸೃಷ್ಟಿ-ಕ್ರಿಯೆಯನ್ನು ಆರಂಭಿಸುತ್ತಾನೆ. ಕತೆಗಳಲ್ಲಿ ಮನೋವಿಶ್ಲೇಷಣಾತ್ಮಕತೆ ಇದ್ದಾಕ್ಷಣಕ್ಕೆ ಕತೆಗಾರನಲ್ಲಿ ಸಾಮಾಜಿಕ ಪ್ರಜ್ಞೆಯೇ ಇಲ್ಲ ಎಂದು ಭಾವಿಸುವುದು ಮೂರ್ಖತನವಾಗುತ್ತದೆ.

ಇತ್ತೀಚೆಗೆ ಒಂದಷ್ಟು ಜನ ಪಂಡಿತರು ಇಂದಿನ ಪರಿಸ್ಥಿತಿಯಲ್ಲಿ ಲೇಖಕರ ಕರ್ತವ್ಯವೇನು ಎಂಬುದರ ಬಗೆಗೆ ಚರ್ಚಿಸಿದ್ದರು. ಸಮಾಜದ ಬಗೆಗೆ ಲೇಖಕರ ಜವಾಬ್ದಾರಿಯನ್ನು ಕುರಿತು ಗಹನವಾದ ವಿಶ್ಲೇಷಣೆ ನಡೆಸಲಾಗಿತ್ತು. ನಾಲ್ಕು ಔನ್ಸ್ ಅಕ್ಕಿ, ನೌಕರಶಾಹಿ, ಕೆಂಪು ಪಟ್ಟಿ–ಇವೆಲ್ಲ ಇಂದಿನ ಸಮಾಜದ ಸಮಸ್ಯೆಗಳು. ಸಮಾಜದಲ್ಲಿ ಬದುಕುತ್ತಿರುವ ಲೇಖಕ ಎಂಬ ಮನುಷ್ಯನೊಂದಿಗೆ ಮೇಲೆ ಹೇಳಿದ ಯಾವ ಅಂಶಗಳ ಸಂಬಂಧಗಳಿಲ್ಲವೇನು ? ಖಂಡಿತ ಇದೆ. ಹಸಿದ ಮಕ್ಕಳನ್ನು ನೆನಪು ಮಾಡಿಕೊಂಡು ಹಣ ಸಾಲ ತೆಗೆದುಕೊಂಡು ಕಳ್ಳಸಂತೆಯಲ್ಲಿ ಅವನು ಸಹ ಅಕ್ಕಿಯನ್ನು ಹುಡುಕಿಕೊಂಡು ಪರದಾಡುತ್ತಿದ್ದಾನೆ. ಅವನೂ ಸಹ ಸರ್ಕಾರಿ ಕಚೇರಿಗಳಲ್ಲಿರುವ ದೇವತೆಗಳಿಂದ ನಿಂದೆ ಮತ್ತು ಕಿರುಕುಳಗಳಿಗೆ ಗುರಿಯಾಗುತ್ತಿದ್ದಾನೆ. ಈ ಎಲ್ಲದರಿಂದ ರೂಪುಗೊಂಡ ಅವನ ಮನಸ್ಸು ಒಂದಲ್ಲ ಒಂದು ದಿನ ಅವನ್ನೆಲ್ಲ ತನ್ನ ಬರವಣಿಗೆಯಲ್ಲಿ ತಂದರೂ ತರಬಹುದು. ಲೇಖಕನಾಗಿರುವುದೇ ಲೇಖಕನ ಕರ್ತವ್ಯ ಎಂಬುದು ನನ್ನ ಅನಿಸಿಕೆ. ಇದೇ ಅವನು ಸಮಾಜ ಹಾಗೂ

ಖಡ್ಗಕ್ಕಿಂತ ಲೇಖನಿ ಶಕ್ತಿಶಾಲಿಯಾದುದು, ಫ್ರಾನ್ಸ್ ಕ್ರಾಂತಿಗೆ ಮೂಲ ಕಾರಣ ಪುರುಷರು ವಾಲ್ಟೇರ್ ಮತ್ತು ರೂಸೋ, ಇತ್ಯಾದಿ ವಾಕ್ಯಗಳನ್ನು ಬರೆಸುತ್ತೇವೆ. ಆದರೆ ಇಂದು ಸತ್ಯಸ್ಥಿತಿ ಏನು ಎಂಬುದರ ಬಗ್ಗೆ ತೀವ್ರ ಪರಿಶೋಧನೆ ನಡೆಸಬೇಕಾಗಿದೆ. ಸಮಾಜ ಹಾಗೂ ರಾಷ್ಟ್ರವನ್ನು ನಿಯಂತ್ರಿಸುವ ಜವಾಬ್ದಾರಿಯನ್ನೂ ಹೊತ್ತಿರುವ ಶಾಸಕವರ್ಗ ಹಾಗೂ ನಾಯಕರು ಸಾಹಿತ್ಯವೆಂಬ ಚಿಕ್ಕ ಲೋಕದ ಗಡಿಗಳಿಂದ ಎಷ್ಟು ದೂರ ನಿಂತಿದ್ದಾರೆ ಅಂದರೆ ಸಾಹಿತ್ಯ ಅವರ ಅಂತರಾತ್ಮದಲ್ಲಿ ಯಾವುದೇ ಬಗೆಯ ಆಂದೋಲನವನ್ನೂ ಉಂಟುಮಾಡುತ್ತಿಲ್ಲ. ಸಮಾಜದ ಬಹಳ ಕಡಿಮೆ ಜನ ಈ ಚಿಕ್ಕ ಪ್ರಪಂಚದ ಚಟುವಟಿಕೆಗಳತ್ತ ಗಮನ ಹರಿಸುತ್ತಾರೆ.

ಚೀನಾ ಭಾರತದ ಮೇಲೆ ಆಕ್ರಮಣ ನಡೆಸಿದ್ದನ್ನು ಭಾರತದ ಓರ್ವ ನಾಗರೀಕನಾಗಿ ನಾನು ವಿರೋಧಿಸುತ್ತೇನೆ. ಆದರೆ ಅದರ ಬಗ್ಗೆ ಯಾವನೋ ಒಬ್ಬ ವೀರಸೈನಿಕನನ್ನು ನಾಯಕ

ಲೇಖಕನಿಂದ ಇದನ್ನು ಅಪೇಕ್ಷಿಸದಿದ್ದರೂ ವ್ಯಕ್ತಿಯ ಅಸ್ತಿತ್ವ ಸಮಾಜವೇ ಆಗಿರುವುದರಿಂದ, ಆದರಿಂದ ತಪ್ಪಿಸಿಕೊಳ್ಳುವ ಪ್ರಶ್ನೆಯೇ ಏಳುವುದಿಲ್ಲ.

ತಾನು ಬರೆಯುವ ಸಾಹಿತ್ಯದಿಂದ ಸಮಾಜ ಮತ್ತು ರಾಷ್ಟ್ರವನ್ನು ಸರಿಯಾದ ಹಾದಿಯಲ್ಲಿ ನಡೆಸಬಲ್ಲೆ ಎಂಬ ನಂಬಿಕೆಯಿಂದ ಇಂದು ನಮ್ಮ ಲೇಖಕರು ಬರೆಯುತ್ತಿದ್ದಾರೆ ಎಂಬುದರ ಬಗ್ಗೆ ನನಗೆ ದೊಡ್ಡ ಅನುಮಾನವಿದೆ, ಆದರೆ ಒಮ್ಮೊಮ್ಮೆ ತನ್ನ ಹಾಗೂ ತನ್ನ ನೆರೆಹೊರೆಯವರ, ಅಂತೆಯೇ ಸಮಾಜದಿಂದ ತಾನು ಅನುಭವಿಸಿದ ಸತ್ಯಗಳನ್ನು ಅಭಿವ್ಯಕ್ತಿಸುತ್ತಾನೆ. ಈ ಸತ್ಯಗಳು ಬದುಕಿನೊಡಲಿನಿಂದ ಆತನ ಅಂತರ್ಯದಲ್ಲಿ ಪ್ರವೇಶಿಸಿರುತ್ತವೆ. ಅವನ್ನು ಅಭಿವ್ಯಕ್ತಿಸಿರುವುದರಿಂದ ಎಂಥ ಪರಿಣಾಮವಾಗುತ್ತದೆ ಅಂದರೆ ಬದುಕಿನ ಅನೇಕ ತಿರುವುಗಳಲ್ಲಿ ಆತನ ಓದುಗರು ವೈವಿಧ್ಯತೆಗಳ ಹಾಗೂ ವಿರೋಧಗಳ ಸಂಪೂರ್ಣ ಅನುಭೂತಿಗಳನ್ನು ಪಡೆದಾಗ, ದುಃಖ ಕೇವಲ ತನಗಷ್ಟೇ ಅಲ್ಲ, ಪಾಶವೀಯತೆ ಇರುವುದು ತನ್ನ ಮಟ್ಟಿಗಷ್ಟೇ

ಸಂತಾನ ನಿರೋಧ ಶಸ್ತ್ರಚಿಕಿತ್ಸೆಗೆ ಈಗ ಹೊಸ ವಿಧಾನ

- ಉದರ ದರ್ಶಕ ವಿಧಾನ (ಲ್ಯಾಪರ್‌ಸ್ಕೋಪಿಕ್) ಇದು ಅತ್ಯಂತ ಸುಲಭ ಮತ್ತು ಸರಳ.

- ಈಗ ನಮ್ಮ ರಾಜ್ಯದಲ್ಲಿ ಎಲ್ಲ ಜಿಲ್ಲೆಗಳಲ್ಲೂ ಈ ಸೌಲಭ್ಯ ಕಲ್ಪಿಸಲಾಗಿದೆ. ನಮ್ಮ ರಾಜ್ಯ ಈಗಾಗಲೇ **187893** ಮಹಿಳೆಯರು ಉದರ ದರ್ಶಕ ವಿಧಾನದ ಸಂತಾನ ನಿರೋಧದಲ್ಲಿ ಶಸ್ತ್ರ ಚಿಕಿತ್ಸೆಯ ಪ್ರಯೋಜನ ಪಡೆದಿದ್ದಾರೆ. ಈ ಶಸ್ತ್ರಚಿಕಿತ್ಸೆಯನ್ನು ಮಾಡಲು ವಿಶೇಷವಾಗಿ ತರಬೇತಿ ಪಡೆದ ವೈದ್ಯರು ಮತ್ತು ಸಹಾಯಕ ಸಿಬ್ಬಂದಿಯೇ ಇದೆ.

- ಸಂತಾನ ನಿರೋಧ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವ ಪ್ರತಿ ವ್ಯಕ್ತಿಗೂ **100** ರೂ. ಪರಿಹಾರ ಧನ ನೀಡಲಾಗುತ್ತದೆ. ಊಟ ಮತ್ತು ಪ್ರಯಾಣ ವೆಚ್ಚಕ್ಕಾಗಿ **45** ರೂ. ಕೊಡಲಾಗುತ್ತದೆ.

- ಒಂದು ಅಥವಾ ಎರಡು ಮಕ್ಕಳಾದ ಕೂಡಲೇ ದಂಪತಿಗಳು ಹತ್ತಿರದ ಆರೋಗ್ಯ ಕೇಂದ್ರದಲ್ಲಿ ಅಗತ್ಯ ಸಲಹೆ ಮತ್ತು ಸೇವೆ ಪಡೆದುಕೊಳ್ಳಬಹುದು.

- ಕುಟುಂಬ ಕಲ್ಯಾಣ ವಿಷಯಗಳಿಗೆ ಸಂಬಂಧಿಸಿದ ಮಾಹಿತಿ ನಿರ್ದೇಶನಕ್ಕೆ ಪ್ರಾಥಮಿಕ ಆರೋಗ್ಯ ಅಥವಾ ಸಾರ್ವಜನಿಕ ಆಸ್ಪತ್ರೆಗಳನ್ನು ಸಂದರ್ಶಿಸಿ.

ಕರ್ನಾಟಕ ವಾರ್ತೆ

ಅಲ್ಲ ಎಂಬ ಅನುಭವವಾಗುತ್ತದೆ. ಇದರಿಂದ ಜೀವನದ ಸತ್ಯವನ್ನು ಆದರ. ಎಲ್ಲ ರಂಗುಗಳು ಹಾಗೂ ವಿಕೃತಿಗಳೊಂದಿಗೆ ಸ್ನೇಹ ಅಥವಾ ತಿರಸ್ಕಾರಗಳಿದ್ದಾಗ್ಯೂ–ರಾಜಿ ಮಾಡಿಕೊಳ್ಳುವ ಪ್ರವೃತ್ತಿ ಮೂಡಲು ಸಹಾಯವಾಗುತ್ತದೆ. ವ್ಯಕ್ತಿಗಳ ಅನುಭೂತಿಗಳು ಆಧುನಿಕ ಯುಗದ ಕೊಡುಗೆಗಳಲ್ಲ. ಅದೆಷ್ಟೋ ಕಾಲದಿಂದ ಹರಿದು ಬರುತ್ತಿರುವ ಬದುಕಿನ ಪ್ರವಾಹದ ಒಂದು ಬಿಂದು ಮಾತ್ರ ಎಂಬುದು ಅವನಿಗೆ ಗೊತ್ತಾಗುತ್ತದೆ.

ಕೊನೆಯ ಘಟ್ಟದ ವಿಶ್ಲೇಷಣೆ ಮಾಡಿದಾಗ ನನಗನ್ನಿಸುತ್ತದೆ–ನನ್ನ ಕತೆಗಳ ಬಗೆಗೆ ಏನೇ ಪ್ರತಿಕ್ರಿಯೆಗಳಿರಲಿ, ನಾನು ನನ್ನ ಮಾನಸಿಕ ಸ್ವಚ್ಛಂದಕ್ಕಾಗಿ, ಆದರ್ಶಮೂಲ ಅಸ್ತಿತ್ವಕ್ಕಾಗಿ ಬರೆಯುತ್ತೇನೆ. ನನಗೆ ಮತ್ತು ತಮಗೆಲ್ಲರಿಗೂ ಪರಿಚಿತನಾಗಿರುವ ಈ ಯುಗದ ಮನುಷ್ಯನನ್ನು ಹೆಚ್ಚೆಚ್ಚು ತಿಳಿದುಕೊಳ್ಳಬೇಕೆಂಬ ಇಚ್ಛೆ ನನಗಿದೆ. ತನ್ನ ಕಾಲುಗಳ ಕೆಳಗೇ ಸಿಕ್ಕಿ ತಾನು ನುಚ್ಚುನೂರಾಗುತ್ತಿದ್ದೇನೆ ಎಂಬುದನ್ನು ತಿಳಿದೂ ಆ ಭೀರು, ಅಸಹಾಯಕ ಮನುಷ್ಯ ಬೇರೆಯವರ ಜೊತೆಗೂಡಿ ಕೆಲವು ಮೌಲ್ಯಗಳನ್ನು ತಾನೂ ಆರಾಧಿಸುತ್ತಾನೆ. ತಾನು ಮುಂದುವರಿಯಬೇಕೆಂಬ ಆಸೆಯಿಂದ ಅವನ್ನು ಮತ್ತೆ–ಮತ್ತೆ ಕಾಲುಗಳಿಂದ ಒಸಕುತ್ತಾನೆ. ನಗುವಾಗ ಅವನು ಅಳುತ್ತಾನೆ. ಅಳುವಿನ ಸಮಯದಲ್ಲಿ ಒಳಗೊಳಗೇ ನಗುತ್ತಾನೆ, ಅವನಿಗೆ ಅನೇಕ ಮುಖವಾಡಗಳು, ಅವನ ಒಳಗಿನ ಮುಚ್ಚಿದ ಕೋಣೆಗಳೊಳಗೆ ಹೋಗುವಾಗ ಈವರೆಗೆ ಹೊರಗೆ ಕಾಣಿಸಿಕೊಳ್ಳದಿದ್ದ ಅದು ಕಾಣಿಸಿಕೊಳ್ಳುತ್ತದೆ. ಆದರ ಬದುಕಿನ ಸಾರವನ್ನು ಅನಾವರಣಗೊಳಿಸುವ ಕ್ಷಣಗಳಲ್ಲಿ 'ನಾನು ಸಹ ಬದುಕುತ್ತಿದ್ದೇನೆ' ಎಂಬ ಅನುಭವಾಗುತ್ತದೆ. ಇಂಥ ಅನುಭವವನ್ನು ನೀಡುವ ಕ್ಷಣವನ್ನು ತಾನೂ ಬದುಕಬೇಕೆಂದು ಪ್ರತಿಯೊಬ್ಬನೂ ಬಯಸುತ್ತಾನೆ. ಮರುಭೂಮಿಯ ಮಧ್ಯದ ಮರೀಚಿಕೆಯಂತೆ, ತನ್ನದೇ ರೀತಿಯ ಈ ಮರೀಚಿಕೆಯನ್ನು ರಾಜ,ಮಂತ್ರಿಯಿಂದ ಹಿಡಿದು ಗುಮಾಸ್ತ, ಉದ್ಯಮಪತಿ ಹೀಗೆ ಎಲ್ಲರೂ ನೋಡಿರಬಹುದು.

ಗುಂತರ್‌ಗ್ರಾಸ್‌ನ ಕಾದಂಬರಿಯ ನಾಯಕನ ಶಾರೀರಿಕ ವಿಕಾಸ ಆತನ ಬಾಲ್ಯದಲ್ಲಿಯೇ ಕುಂಠಿತವಾಗಿರುವುದರಿಂದ ಆತನ ಕೊರಳಿಗೆ ಒಂದು ತಗಡಿನ ಡಬ್ಬಿಯನ್ನು ನೇತುಹಾಕಿದೆ. ನೋವಿನ ಅಥವಾ ಸಂತೋಷವಾದಾಗ ಆತ ಅದನ್ನು ಬಾರಿಸುತ್ತಾನೆ. ಬದುಕಿನ ಉಲ್ಲಾಸ ಕಮರಿಹೋದಾಗ ಕ್ಷುಬ್ಧ ಮನಸ್ಸಿನ ಪ್ರತಿಕ್ರಿಯೆಯನ್ನು ಅಭಿವ್ಯಕ್ತಿಸಲು ನಮ್ಮಲ್ಲಿನ ಪ್ರತಿಯೊಬ್ಬನೂ ಒಂದೊಂದು ತಗಡಿನ ಡಬ್ಬಿಯನ್ನು ಹುಡುಕಿಕೊಳ್ಳುತ್ತಾನೆ.

ಕತೆಗಾರನಿಗೆ ಅದು ತನ್ನ ಅಧ್ಯಯನ–ಕೋಣೆಯಲ್ಲೇ ಲಭ್ಯವಾಗುತ್ತದೆ. ●

ಬಂಡೆ ಸೀಳಿ ಬರುವ ತಲೆ

ಭೂ ನಿಧಿಯಲ್ಲಿ ದುಡಿಯುತ್ತಿರುವ
ಮೈ ಬೆವರಿನ ವಾಸನೆಯು
ಭೂತವಾಗಿ ಬೆಳೆದು ವರ್ತಮಾನದ
ಸ್ಥಿತಿಗತಿಯನ್ನು ಕಾಡತೊಡಗಿದೆ.
ಬಡತನ ಕಿತ್ತು ಕಿತ್ತು ತಿನ್ನುತಿರಲು
ಬೆಂದ ಹೃದಯ ನರಳುತಿರಲು
ರಕ್ತನಾಳ ಹೆಪ್ಪುಗಟ್ಟುತಿದೆ.
ಹಸಿದ ಕೈ ಅನ್ನಕ್ಕಾಗಿ ಚಾಚುತಿರಲು
ಉಳ್ಳವರ ಕೈ ಹಣದ ತೊಟ್ಟಿಲ ತೂಗತಲಿದೆ.
ಅಮವಾಸೆಯ ಕತ್ತಲಿನ ಮೌನವು
ಜಾರಿ ಜಾರಿ ಬೆಳಕಿನತ್ತ ಸಾಗುತಿರಲು
ತುಳಿಯುತಲಿದ್ದ ಕಾಲುಗಳು
ಕೆಂಡದಂತಹ ಮೈ ನೋಡಿ ಬೆಚ್ಚುತಲಿವೆ

ಹಾರಾಡುವ ಹಕ್ಕಿಗಳು ಕೂರುತಲಿವೆ
ಈಜಾಡುವ ಮೀನುಗಳು ಕಲಿಸುತಲಿವೆ
ಹುಲಿಯು ಘರ್ಜಿಸಿ ಎಚ್ಚರಿಸುತಿದೆ
ಬೆಟ್ಟಗುಡ್ಡಗಳ ಕಾಡುಮೇಡಿನ ಹಸಿರಿನ ಮಾಲೆ
ಎಣೆಯುತಿರಲು ನಿಮ್ಮ ಕೊರಳಿಗೆ
ರಕ್ತ ತೋರಣದ ಮಾಲೆ.
ಕಪ್ಪು ಮನುಜನ ಕವಿದ ಮಬ್ಬಿನ
ಮಂಜು ಕರಗಿಸಿ ಕೆಂಪು ಸೂರ್ಯ ಮೂಡುತಿರಲು
ದಪ್ಪಚರ್ಮದ ಕೊಬ್ಬು ಕರಗಿ
ಕೊಳಗೇರಿಯಲ್ಲಿ ಹರಿಯುತಿರಲು
ಬಂಡೆ ಸೀಳಿ ಬರುವ ತಲೆ
ಸಿಂಹಾಸನದ ನೋಡುತಲಿದೆ.

● ನಂಜನಹಳ್ಳಿ ನಾರಾಯಣ

ಚೆಲುವಯ್ಯ ಹೇಳಿದ ಕತೆ

(7ನೇ ಪುಟದಿಂದ)

ನನ್ನ ಕಿತ್ತುಕೊಂಡು ಬಿಡುತ್ತಾರೆಂದು ತೋಟಿಗೆ ನಿದ್ದೆ ಬಾರಲಿಲ್ಲ. 'ಜಮೀನು ನನ್ನ ಕೈಬಿಟ್ಟು ಹೋಗುತ್ತದೆ. ನೀವೇ ನನ್ನ ಜಮೀನು ಬರಿಸ್ಕಂಡು, ಜಮೀನು ಉಳ್ಸಿಕಂಡ್ರೆ ನನಗೆ ಕೈಯಿಕಾಲು ಬಂದಂತ ಕಾಲಕ್ಕೆ ನಿಮ್ಮ ಹಣಕೊಟ್ಟು ಜಮೀನು ಸ್ವಾದೀನಪಡೀತಿನಿ' ಅಂತ ಪಟೇಲರ ಕಾಲಿಡಿದು ಕೇಳಿದ್ದ. ಎಂಟು ದುಡ್ಡು ಹೆಂಡವಾಗಿ ಎಂಟುದಿನದೊಳಗೆ ಚೆಲುವನ ಮೈತುಂಬಿತು. ತೋಟಿ ಬರಿಗೈ ಮಾಡಿಕೊಂಡುಊರೂರ ಮೇಲೆ ಚೆಂಗವೆತ್ತಲು ಹೊರಟ.

ಪರಿಶೀಲನೆಗೆಂದು ಒಂದು ಸಲ ಅಮಲ್ದಾರ್ರು ಗ್ರಾಮಕ್ಕೆ ಬಂದರು. ಊರ ದ್ವಾರ ಬಾಗಿಲಲ್ಲಿ ಪಟೇಲರು, ಶಾನುಬೋಗರು, ತಳವಾರ, ತಳವಾರನ ಮಗನಾದಿಯಾಗಿ ನಿಂತಿದ್ದರು. ತೋಟಿ ಇರಲಿಲ್ಲ. ಪಟೇಲರು ಹಾರಹಾಕಿ, ತುರಾಯಿ ಕೊಟ್ಟು ಅಮಲ್ದಾರರನ್ನು ಕೈಯಿಡಿದು ಕುದುರೆಯಿಂದ ಕೆಳಗಿಸಿಕೊಂಡರು. ತಳವಾರನ ಮಗ ನಗಾರಿ ಬಾರಿಸಿದನು. ತಳವಾರನು 'ಕೊಂಬು ಹಿಡಿದು ಕಲ್ಲಿನಲ್ಲಿ ಕೆತ್ತಿದ ಚಿತ್ರದಂತೆ ಮೌನವಾಗಿದ್ದನು. ಶಾನುಬೋಗರು ಮನೆಯಲ್ಲಿ ಬೋಜನದ ವ್ಯವಸ್ಥೆಗೆ ತರಾತುರಿಯಲ್ಲಿದ್ದರು. ಕುದುರೆ ಇಳಿದ ಅಮಲ್ದಾರರು ಒಂದು ಚಣ ಮೌನವಾಗಿ ನಿಂತು. ಗ್ರಾಮಕ್ಕೆ ಬಾರದೆ ಹಿಂತಿರುಗಿದರು. ಕುದುರೆ ನಾಗಲೋಟವನ್ನು ಕಂಡ ಊರು ದಿಕ್ಕೆಟ್ಟಿತು.

ಪಟೇಲರಿಗೆ ಮೇಲಿಂದ ಒಂದು ಓಲೆ ಬಂತು. ಆ ಪ್ರಕಾರ ಚೆಲುವಯ್ಯನಿಗೆ ಕೊಟ್ಟ ಕಂಚಿನ ಲೋಟ, ಕಂಚಿನ ತಟ್ಟೆಯನ್ನು ಅವನು ಮಾರಿಕೊಂಡು ತಿಂದಿದ್ದಕ್ಕೆ ಪಂಚಾಯಿತಿ ದಂಡ ಹಾಕಲಿ ಆ ದಂಡವನ್ನು ನಾನು ವಜ ಮಾಡುತ್ತೇನೆ. ಇನ್ನು ಮುಂದೆ ಚೆಲುವಯ್ಯನ 'ಕೊಂಬ'ನ್ನು ಚೆಲುವಯ್ಯನಿಗೆ ಅವನೇ ಊದುವಂತೆ ಕಟ್ಟಪ್ಪಣೆಯಾಯಿತು. ಪಟೇಲರು ಚೆಲುವಯ್ಯನಿಗಾಗಿ ಊರೂರು ಹುಡುಕಿ ಕರೆಸಿ ಕೇಳಿದರು 'ನನ್ನ ಪ್ರಾಣನೇ ಹೋದ್ರು ತಳವಾರ ಮುಟ್ಟಿದ ಕೊಂಬನ್ನು ನಾನು ಮುಟ್ಟಿ ಊದಿದ್ರೆ ನಮ್ಮಪ್ಪನಿಗೆ ನಾನು ಹುಟ್ಟಿದ್ನಲ್ಲ' ಎಂದು ಚೆಲುವಯ್ಯ ಶಪಥ ಮಾಡಿದನು. ಪಟೇಲರ ಆಜ್ಞೆಯನ್ನೂ ಶಿರಸಾವಹಿಸಿ ನಡೆಸದಿದ್ದ ಚೆಲುವಯ್ಯನನ್ನ ಊರಮುಂದಿನ ಆಂಜನೇಯ ದೇವಾಲಯದ ಮುಂದಿದ್ದ ಗರುಡಗಂಬಕ್ಕೆ ಕಟ್ಟಿಸಿ, ಜೇನುತುಪ್ಪದಲ್ಲಿ ವಿಷ ತಿನ್ನಿಸುವಂತೆ ತಳವಾರನಿಗೆ ಆಜ್ಞೆ ಮಾಡಿದರಂತೆ.

ಹೀಗೆ, ಕೇಳ್ತ ಕೇಳ್ತ 'ಊ' ಗಟ್ಟುವುದ ನಿಲ್ಲಿಸಿದ್ದು ಯಾವಾಗ ಎಂಬುದು ನನಗೆ ಗೊತ್ತಿಲ್ಲ. ●

ಗಾಂಧಿ ಮತ್ತು ಹಿಂದೂ ಧರ್ಮ

ಎನ್. ಎಸ್. ಶಂಕರ್

ದೇವನೂರು ಮಹಾದೇವ ಅವರು ಬರೆದಿದ್ದ 'ಗಾಂಧಿ' ಲೇಖನಕ್ಕೆ ಪ್ರತಿಕ್ರಿಯೆಯಾಗಿ ಬಂದ ಡಾ॥ ಪೋಲಂಕಿ ರಾಮಮೂರ್ತಿಯವರ ಲೇಖನ "ಗಾಂಧಿ, ಅಂಬೇಡ್ಕರ್ ಮತ್ತು ದಲಿತರು" (ಪಂಚಮ ಡಿಸೆಂಬರ್ 1983) ಓದಿದ ಮೇಲೆ ಈ ಪ್ರತಿಕ್ರಿಯೆ ಬರೆಯಲೇಬೇಕು ಅನ್ನಿಸಿದೆ.

ಒಂದಿಲ್ಲೊಂದು ಹಂತದಲ್ಲಿ ನಾವು ಭಾವುಕರಾಗುತ್ತಾ ನಮ್ಮ ಅನಿಸಿಕೆಗಳನ್ನೋ, ನಾವು ಕಂಡ 'ನಿಜ'ಗಳನ್ನೋ ಬಲವಾಗಿ ಅತುಕೊಳ್ಳುವುದು ಸಹಜವಾಗಿ ನಡೆಯುತ್ತಲೇ ಇರುತ್ತದೆ. ಇದು ಸರಿಯೋ ತಪ್ಪೋ ಹೇಳುವುದು ಸ್ವಲ್ಪ ಕಷ್ಟವೇ ಆದರೂ ನಮ್ಮ 'ಕಳಕಳಿ' ಸತ್ಯವನ್ನೇ ಕಾಣದ ಹಾಗೆ ನಮ್ಮನ್ನು ಕುರುಡು ಮಾಡಿಬಿಟ್ಟರೂ ಅಪಾಯವೇ. ಆಗ ನಾವು ಹೇಳುವ ವಿಚಾರಕ್ಕೂ, ಅದನ್ನು ಕೇಳುವವರಿಗೂ ಒಟ್ಟಿಗೇ ಅಪಚಾರವಾಗಿಬಿಡುತ್ತೆ. ಗಾಂಧಿ ವಿಚಾರದಲ್ಲಿ ಡಾ॥ ಪೋಲಂಕಿಯವರು ಇಂಥದೇ ಭಾವುಕತೆಯಿಂದ ತರಾತುರಿಯ ತೀರ್ಮಾನಕ್ಕೆ ಬಂದುಬಿಟ್ಟಿದ್ದಾರೆ, ಸಮಗ್ರ ಸತ್ಯವನ್ನು ಕಾಣದೆ ಹೋಗಿದ್ದಾರೆ ಅನಿಸುತ್ತದೆ ನನಗೆ. ನನ್ನ ಈ ವಾದವನ್ನೇ ಆಧಾರಸಮೇತ ಮಂಡಿಸಲು ಇಲ್ಲಿ ಯತ್ನಿಸುತ್ತೇನೆ.

ವರ್ಣಾಶ್ರಮದ ಪ್ರಶ್ನೆಗೆ ಬರುವ ಮುನ್ನ ಪೋಲಂಕಿಯವರ ಇನ್ನೊಂದು ಹೇಳಿಕೆಯನ್ನು ಮೊದಲು ಎತ್ತಿಕೊಳ್ಳುತ್ತೇನೆ. ಅಸ್ಪೃಶ್ಯನ ಕಕ್ಕಸ್ಸು ಎತ್ತಲು ನಿರಾಕರಿಸಿದ ಕಸ್ತೂರಬಾಳನ್ನು ಗಾಂಧಿ ಆಚೆ ತಳ್ಳುವುದರಲ್ಲಿ ಪೋಲಂಕಿಯವರು Innate Cruelty–ಗುಪ್ತ ಕ್ರೌರ್ಯವನ್ನು ಕಂಡಿದ್ದಾರೆ ಮತ್ತು ಆ ಕ್ರೌರ್ಯದ ಬಗ್ಗೆ 'ಒಂದು ಪುಸ್ತಕವನ್ನೇ ಬರೆಯಬಹುದೇನೋ' ಎಂದೂ ಉದ್ಗರಿಸಿದ್ದಾರೆ.

ಆದರೆ ಅವರು ಮರೆತ ಒಂದು ಅಂಶ–ಕಸ್ತೂರಬಾ ಕಣ್ಣಲ್ಲಿ ನೀರು ತಂದುಕೊಂಡು "ನಾನು ನಿನ್ನ ಪತ್ನಿ, ಎಲ್ಲಿ ಹೋಗಲಿ?" ಎಂದು ಕೇಳಿದಕೂಡಲೆ ಗಾಂಧಿ ಕರಗಿ "ಓಹ್ ! ನನಗೇನಾಗಿದೆ" ಎಂದು ಪಶ್ಚಾತ್ತಾಪ ಪಡುವುದು. ಇದಲ್ಲದೆ, ಗಾಂಧಿಯಿನ್ನೂ ಬೌದ್ಧಿಕವಾಗಿ, ಸಾಮಾಜಿಕವಾಗಿ ಬೆಳೆಯುತ್ತಿದ್ದ, ಬೆಳೆಯಬೇಕಿದ್ದ ಕಾಲವದು. ಇದೊಂದು ನಿದರ್ಶನದಿಂದಲೇ ಗಾಂಧಿ ಕ್ರೂರಿ ಎಂಬ ತೀರ್ಮಾನಕ್ಕೆ ಬಂದುಬಿಟ್ಟರೆ, ಅದು ಕಾಗೆಯ ಮೇಲೆ ಬ್ರಹ್ಮಾಸ್ತ್ರ ಬಿಟ್ಟ ರಾಮನ 'ಅತಿಪೌರುಷ'ದ ಮನೋಧರ್ಮವಾದೀತು ಎಂಬ ಭೀತಿ ನನಗಿದೆ. ಗಾಂಧೀಜಿಯ ಅಹಿಂಸೆ ತಂತ್ರವಷ್ಟೇ ಆಗಿರಲಿಲ್ಲ, ಬದುಕೇ ಆಗಿತ್ತು ಎಂದು ನಿರೂಪಿಸಲು ಎಷ್ಟು ಬೇಕಾದರೂ ಉದಾಹರಣೆಗಳನ್ನು ಕೊಡಬಹುದಾದರೂ, ಆತನ ನೌಖಾಲಿ ಶಾಂತಿಯಾತ್ರೆಯೊಂದರ ವಿವರಗಳನ್ನು ಪೋಲಂಕಿಯವರು ಪರಿಶೀಲಿಸಿದರೆ ಸಾಕು, ಎಂಬ ಸಲಹೆಯನ್ನು ಮಾತ್ರ ಮುಂದಿಡುತ್ತೇನೆ. ಅಹಿಂಸೆಯ ಕ್ರಿಯಾವಮೌಲ್ಯದ ಪ್ರಶ್ನೆಯನ್ನು ಆಮೇಲೆ ಪ್ರಸ್ತಾಪಿಸುತ್ತೇನೆ.

ಗಾಂಧೀಜಿಯನ್ನು, ಅಷ್ಟೇಕೆ ಯಾವುದೇ ವ್ಯಕ್ತಿಯನ್ನು ನಿನ್ನೆ–ಇಂದು–ನಾಳೆಗಳ ಕೂಡಿ ಮರೆಯದೆ—ಮನುಷ್ಯತ್ವದ ಅರಳುವಿಕೆಯನ್ನು ಗುರುತಿಸುವ ವಿಕಾಸವಾದಿ ನೆಲೆಯಲ್ಲೇ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಹಾಗೆ ಅರ್ಥ ಮಾಡಿಕೊಳ್ಳದೆ ಒಮ್ಮಿಂದೊಮ್ಮೆಲೇ ತೀರ್ಪು ಕೊಟ್ಟುಬಿಟ್ಟರೆ, ಯಾವಾಗಲೂ ಜಿದ್ದಿನಿಂದ ಪರ-ವಿರೋಧಿ ದುರಂಧರರೇ ಆಗಿಬಿಡುವ ನಮ್ಮ ಭಾವುಕತೆಯನ್ನು, ಅಸಹನೆಯನ್ನು ಬಯಲು ಮಾಡಿದಂತಾಗುತ್ತದೆ ಅಷ್ಟೆ.

ಆದ್ದರಿಂದಲೇ ಗಾಂಧೀಜಿ ಸಹ ಜಾತಿಪದ್ಧತಿ ಬಗ್ಗೆ ವರ್ಣಾಶ್ರಮದ ಬಗ್ಗೆ ಯಾವ ನಿಲುವು ಇಟ್ಟುಕೊಂಡಿದ್ದರು, ಅದು ಕಾಲಾನುಕ್ರಮದಲ್ಲಿ ಯಾವ ಆಕಾರ-ಬಣ್ಣ ಪಡೆಯತೊಡಗಿತು, ಆ ದಿಕ್ಕಿನಲ್ಲಿ ಕಡೆಗೆ ಗಾಂಧಿ ತಲಪಿದ್ದೆಲ್ಲಿಗೆ—ಗಾಂಧೀಜಿಗೆ ಅನ್ಯಾಯ ಮಾಡಬಾರದೆಂದಿದ್ದರೆ ಈ ಪ್ರಶ್ನೆಗಳನ್ನು ನಾವು ಉತ್ತರಿಸಿಕೊಳ್ಳಬೇಕು.

ದಕ್ಷಿಣಆಫ್ರಿಕಾದಿಂದ ಭಾರತಕ್ಕೆ ಗಾಂಧಿಕಾಲಿಟ್ಟ ವರ್ಷ (1915) ಅವರು ಮಾಯಾವರಂನಲ್ಲಿ ಕೇಳುವ ಪ್ರಶ್ನೆ—"ಇದು (ಅಸ್ಪೃಶ್ಯತೆ) ಏನು

ಪ್ರತಿಕ್ರಿಯೆ


ಹಿಂದೂಧರ್ಮದ ಅಂಗವೇ ? ನನಗೆ ಗೊತ್ತಿಲ್ಲ. ನಿಜಕ್ಕೂ, ಹಿಂದೂಧರ್ಮ ಅಂದರೆ ಏನು ಅಂತ ನಾನೀಗ ತಿಳಿಯಬೇಕಿದೆ. ಹಿಂದೂಧರ್ಮವನ್ನು ಭಾರತದಾಚೆ ನಾನು ಅಭ್ಯಾಸ ಮಾಡಿದ್ದರ ಮೇಲೆ ಹೇಳುವುದಾದರೆ....ಅಸ್ಪೃಶ್ಯತೆ ಖಂಡಿತವಾಗಿಯೂ ಈ ಧರ್ಮದ ಅಂಗವಲ್ಲ......"[1]

ಇಲ್ಲಿ ಭಾರತದಾಚೆ ಮಾಡಿದ ಅಭ್ಯಾಸ ಎನ್ನುವುದು ಬಹಳ ಮಹತ್ವದ್ದು. ಏಕೆಂದರೆ ಬಹುಕಾಲ ಹಿಂದೂಧರ್ಮವನ್ನು ಅಪ್ಪಿಕೊಂಡಿದ್ದ ಗಾಂಧೀಜಿಯ 'ಭೋಳೆತನ'ವನ್ನು ಈ ಸಂಗತಿ ವಿವರಿಸುತ್ತದೆ.

ಇಂಗ್ಲೆಂಡಿಗೆ ಹೋಗುವವರೆಗೆ ಗಾಂಧಿ ಮಟ್ಟಿಗೆ ಧರ್ಮ ಅನ್ನುವುದು "ನೈತಿಕತೆಯೇ ಎಲ್ಲ ಒಳಿತಿನ ಮೂಲ ಮತ್ತು ಸತ್ಯವೇ ನೈತಿಕತೆಯ ಜೀವಾಳ"[2] ಎನ್ನುವುದರ ಹೊರತು, ಯಾವುದೇ 'ಪವಿತ್ರ' ಪುರಾಣಕ್ಕೆ ಹೊಂದಿಕೊಂಡ ಆಸ್ತಿಕತೆಯಾಗಿರಲಿಲ್ಲ. ಇಂಗ್ಲೆಂಡಿನಲ್ಲೂ ಸಹ ಆತನ ಬದುಕಿನಲ್ಲಿ ಹಿಂದೂಧರ್ಮ ಪ್ರವೇಶ ಮಾಡಿದ್ದು ನುಣುಪಾದ ರಮ್ಯವಾದ 'ಥಿಯಾಸಫಿ'ಯ ರೂಪದಲ್ಲಿ. ಇದರ ಜೊತೆಗೆ ಇಂಗ್ಲೆಂಡಿನಲ್ಲಿ ಕೋಟ್ಸ್[3] ಎಂಬುವವರ ಮೂಲಕ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಬೇಕರ್ ಮತ್ತಿತರರ ಮೂಲಕ[4] ಗಾಂಧೀಜಿಯನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಿಸುವ ಅವಿರತ ಪ್ರಯತ್ನಗಳೂ ನಡೆದವು. ಸಹಜವಾಗಿಯೇ ಹೊರನಾಡಿನಲ್ಲಿ ತನ್ನತನ ಹುಡುಕಿಕೊಳ್ಳುವ ವಾಂಛೆಯಿದ್ದ ಗಾಂಧೀಜಿಗೆ, ತನ್ನ ಬಾಲ್ಯದ ಧಾರ್ಮಿಕ ವಾತಾವರಣದ ನೆನಪುಗಳನ್ನು ಹೊತ್ತ ಹಿಂದೂಧರ್ಮ ಅಪ್ಯಾಯಮಾನವಾದದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

(ಇಲ್ಲಿ ಒಂದು ಸ್ಪಷ್ಟನೆ ಅಗತ್ಯವಿದೆ. ನಾನು ಗಾಂಧಿಯನ್ನು ಅರ್ಥೈಸಲು ಯತ್ನಿಸುತ್ತಿದ್ದೇನೆಯೆ ಹೊರತು, 'ಸಮರ್ಥಿಸಲು' ಅಲ್ಲ, ಇರಲಿ)

ಇಂಥ ಕ್ರೈಸ್ತ ಒತ್ತಡವೇ ಗಾಂಧೀಜಿ 'ಹಿಂದೂ' ಆಗಲು ಪ್ರಬಲ ಕಾರಣವಾಯಿತು ಎಂಬುದಕ್ಕೆ ಅವರ ಮಾತಿನಲ್ಲೇ ನಮಗೆ ಸುಳಿವು ಸಿಗುತ್ತದೆ. 1921ರ ಏಪ್ರಿಲ್ 13ರಂದು, ಅಹ್ಮದಾಬಾದಿನ ದಲಿತ ವರ್ಗಗಳ ಸಮ್ಮೇಳನದಲ್ಲಿ ಗಾಂಧಿ—"ನನ್ನ ಪ್ರಕಾರ ಅಸ್ಪೃಶ್ಯತೆ ಹಿಂದೂಧರ್ಮದ ಮೇಲಿನ ಘೋರ ಕಪ್ಪುಕಲೆ" ಎಂದು ಹೇಳುತ್ತಾ "ನನ್ನ ಈ ಅಭಿಪ್ರಾಯವನ್ನು ಕ್ರೈಸ್ತ ಧರ್ಮದ ಮೂಲಗಳಿಂದ ಪಡೆದಿದ್ದೇನೆನ್ನುವುದು ಸುಳ್ಳು"[5] ಅನ್ನುತ್ತಾರೆ.



ಶುರುವಿಗೇ ಹಿಂದೂಧರ್ಮದಲ್ಲಿ ಪ್ರಶ್ನಾತೀತ ಶ್ರದ್ಧೆ ಇಟ್ಟುಕೊಂಡು ಬಂದು ಭಾರತದ ನೆಲದಲ್ಲಿ ಅದರ ಕೊಚ್ಚೆಯನ್ನು ಕಾಣುವ ಗಾಂಧೀಜಿಯು ದ್ವಂದ್ವ—ಕ್ರೈಸ್ತಧರ್ಮದ ಬಗ್ಗೆ 'ಹುಷಾರು' ವಹಿಸಿದ್ದ ಪ್ರಜ್ಞೆಯನ್ನು ಹೀಗೆ ಹೊರಹಾಕಿಸುತ್ತದೆ. ಅದೇ ಸಭೆಯಲ್ಲೇ "ನಾನು ಹಿಂದೂಧರ್ಮ ಮತ್ತು ಕ್ರೈಸ್ತಧರ್ಮಗಳ ನಡುವೆ ತೊಯ್ದಾಡುತ್ತಿದ್ದ ಕಾಲವೂ ಇತ್ತು. ಆದರೆ ನನ್ನ ಮಾನಸಿಕ ಸಮತೋಲ ಮರುಕಳಿಸಿದಾಗ, ಹಿಂದೂಧರ್ಮದ ಮೂಲಕವೇ ನನ್ನ ಮೋಕ್ಷ ಸಾಧ್ಯವೆಂಬ ಭಾವನೆ ಬೆಳೆಯಿತು" ಎಂದ ಅವರ ಮಾತಿನಿಂದ ನನ್ನ ದೃಷ್ಟಿಕೋನ ಇನ್ನಷ್ಟು ಸ್ಪಷ್ಟ.

ಗಾಂಧೀಜಿ ಮೂಲತಃ ಗಾಢ ಮಾನವೀಯ ಅಂತಃಕರಣದ ವ್ಯಕ್ತಿ. ಮನುಷ್ಯರೆಲ್ಲರ ಸಮಾನತೆಯನ್ನು ಹಾರ್ದಿಕವಾಗಿ ಒಪ್ಪಿದ, ತನ್ನಲ್ಲಿ ಎಲ್ಲರನ್ನೂ, ಎಲ್ಲರಲ್ಲಿ ತನ್ನನ್ನೂ ಕಂಡು ಗುರುತಿಸಿಕೊಂಡ ಮಹಾಚೇತನ. ಇನ್ನೆಲ್ಲ ವಿಷಯಗಳಲ್ಲಿ ಈ ಮುಖ ಎದ್ದು ಕಾಣುವ ಹಾಗೆ, ಆತನ ವರ್ಣಾಶ್ರಮ ಕುರಿತ ಧೋರಣೆಯಲ್ಲಿ ಕಾಣುವುದಿಲ್ಲ. ಮೊದಲಿಗೆ ಒಂದು ಕಡೆ ಕುರುಡು ಶ್ರದ್ಧೆಯಿಂದ ಹಿಂದೂಧರ್ಮವನ್ನು ತಬ್ಬಿಕೊಂಡ ಆತನ Identiy, ಮತ್ತೊಂದು ಕಡೆ ಆತನ ಸರ್ವವ್ಯಾಪಿ ಮನುಷ್ಯತ್ವ — ಇವೆರಡರ ನಿರಂತರ ಸಂಘರ್ಷ ಗಾಂಧೀಜಿಯಲ್ಲಿ ನಡೆದದ್ದನ್ನೂ, ಆ ಕುಸ್ತಿಯಲ್ಲಿ ಮಾನವೀಯತೆ ಹಂತಹಂತವಾಗಿ ಗೆಲ್ಲುತ್ತಾ ಬರುವುದನ್ನೂ ಕಾಣಬಹುದು. ಇದನ್ನೇ ಅವರ ಒಲವು-ನಿಲುವುಗಳ ಮೂಲಕವೇ ಪರಿಶೀಲಿಸಬಹುದಾಗಿದೆ.

ಮೊದಲು ಜಾತಿ ಬಗ್ಗೆ—"ಅದು ಕುಟುಂಬ ತತ್ವದ ವಿಸ್ತರಣೆ. ಕುಟುಂಬ–ಜಾತಿಗಳೆರಡೂ ಹುಟ್ಟು ಮತ್ತು ಅನುವಂಶಿಕತೆಗಳ ಅಧೀನಕ್ಕೆ ಒಳಪಟ್ಟಿವೆ. ಪಾಶ್ಚಾತ್ಯ ವಿಜ್ಞಾನಿಗಳೇನೋ–ಅನುವಂಶಿಕತೆ ಸುಳ್ಳು, ಪರಿಸರವೇ ಮೂಲ ಎಂದು ಸಾಧಿಸಲು ಯತ್ನಿಸುತ್ತಿದ್ದಾರೆ. ಆದರೆ ಅವರ ತೀರ್ಮಾನ ಪೊಳ್ಳೆಂದು ಅನೇಕ ನಾಡುಗಳ ಅನುಭವವೇ ತೋರಿಸಿಕೊಟ್ಟಿದೆ. ಅವರ ಪರಿಸರ ತತ್ವವನ್ನು ಒಪ್ಪಿಕೊಂಡರೂ ಅದರ ಸಂರಕ್ಷಣೆ ಮತ್ತು ಬೆಳವಣಿಗೆ ಜಾತಿಯ ಮೂಲಕವೇ ಹೆಚ್ಚು ಸಮ

ಇಂಗ್ಲೆಂಡಿಗೆ ಹೋಗುವವರೆಗೆ ಗಾಂಧಿಮಟ್ಟಿಗೆ ಧರ್ಮ ಅನ್ನುವುದು "ನೈತಿಕತೆಯೇ ಎಲ್ಲ ಒಳಿತಿನ ಮೂಲ ಮತ್ತು ಸತ್ಯವೇ ನೈತಿಕತೆಯ ಜೀವಾಳ" ಎನ್ನುವುದರ ಹೊರತು, ಯಾವುದೇ 'ಪವಿತ್ರ' ಪುರಾಣಕ್ಕೆ ಹೊಂದಿಕೊಂಡ ಆಸ್ತಿಕತೆಯಾಗಿರಲಿಲ್ಲ.

ರ್ಪಕವಾಗಿ ನಡೆಯಲು ಸಾಧ್ಯ" (ಯಂಗ್ ಇಂಡಿಯಾ ಡಿಸೆಂಬರ್ 29. 1920) ಎಂದು ಅತಿವಿಜ್ಞಾನಿಯ ಹಾಗೆ ವಾದಿಸುತ್ತಾರೆ ಗಾಂಧಿ.

ಇದನ್ನೇ ಇನ್ನಷ್ಟು ಬೆಳೆಸಿ, ಡಾ॥ ಅಂಬೇಡ್ಕರ್ ಸವಾಲುಗಳಿಗೆ ಉತ್ತರಿಸುತ್ತಾ (1932) "....ಜಾತಿಪದ್ಧತಿ ಒಂದು ವಿಷವು, ಪ್ರಶ್ನಾತೀತ ಕಲ್ಪನೆಯೆಂದು ನಾನು ಒಪ್ಪುವುದಿಲ್ಲ. ಅದಕ್ಕೆ ತನ್ನದೆ ಮಿತಿ, ದೋಷಗಳಿರಬಹುದು. ಆದರೆ ಅದರಲ್ಲಿ ಪಾಪಮಯವಾದದ್ದೇನೂ ಇಲ್ಲ. ಅಸ್ಪೃಶ್ಯತೆ ಒಂದು ಪಾಪ, ನಿಜ. ಆದರೆ ಅಸ್ಪೃಶ್ಯತೆಯನ್ನು ಜಾತಿವ್ಯವಸ್ಥೆಯ ಫಲವೆನ್ನುವುದಾದರೆ, ಅದೂ ಸಹ ಆಕಸ್ಮಾತ್ತಾದ ದೇಹದ ವಿಕೃತ ಬೆಳವಣಿಗೆಯ ಹಾಗೇ ಎಂದು ತಿಳಿಯಬೇಕು. ಆದರೆ ದೇಹದ ವಿಕೃತಿಯ ದೆಸೆಯಿಂದ ದೇಹವನ್ನೇ ನಾಶ ಮಾಡುವುದು ಹೇಗೆ ತಪ್ಪೋ, ಅಸ್ಪೃಶ್ಯತೆ ಕಾರಣದಿಂದ ಜಾತಿಯನ್ನೇ ನಾಶಮಾಡುವುದೂ ಹಾಗೆಯೇ ತಪ್ಪು... ...." ಅನ್ನುತ್ತಾರೆ![6]

ಅಷ್ಟಾದರೂ ಅಸ್ಪೃಶ್ಯತೆಗೆ ಗಾಂಧೀಜಿ ಪ್ರತಿರೋಧ ಕೌತುಕಮಯವಾಗಿದೆಯೆಂದೇ ಹೇಳಬೇಕು. "... ನನ್ನ ವಾದವನ್ನು ಭಾಗವತ ಅಥವಾ ಮನುಸ್ಮೃತಿಯ ಆಧಾರದ ಮೇಲೆ ಸಾಬೀತು ಮಾಡುವುದು ಕಷ್ಟವೇ ಇರಬಹುದು. ಆದರೆ ನಾನು ಹಿಂದೂಧರ್ಮದ ಮೂಲಸತ್ವವನ್ನು ತಿಳಿದಿದ್ದೇನೆ. ಅಸ್ಪೃಶ್ಯತೆಯನ್ನು ಇಟ್ಟುಕೊಳ್ಳುವ ಮೂಲಕ ಹಿಂದೂಧರ್ಮ ಪಾಪವೆಸಗಿದೆ ಎನ್ನುತ್ತೇನೆ ....ನಾನು... ನಮ್ಮ ಅಣ್ಣತಮ್ಮಂದಿರನ್ನೇ ದಮನ ಮಾಡಿರುವ ಅಪರಾಧ ನಮ್ಮದು. ಅವರನ್ನು ನಾವು ತೆವಳುವಂತೆ ಮಾಡಿದ್ದೇವೆ; ಅವರ ಮೂಗುಗಳನ್ನು ನೆಲಕ್ಕೆ ಉಜ್ಜುವಂತೆ ಮಾಡಿದ್ದೇವೆ ಕೆಂಗಣ್ಣು ಬಿಡುತ್ತಾ ಅವರನ್ನು ರೈಲುಬೋಗಿಗಳಿಂದ ಆಚೆ ದಬ್ಬಿದ್ದೇವೆ. ಬ್ರಿಟಿಷ್ ಸರ್ಕಾರ ಸಹ ಇದಕ್ಕಿಂತ ಹೆಚ್ಚಿನದನ್ನು (ನಮಗೆ) ಏನು ಮಾಡಿದೆ ?" ಎಂದೂ ಕೇಳುತ್ತಾರೆ.[7]

ಮುಂದಕ್ಕೆ ಜಾತಿಪದ್ಧತಿಯ ಮೇಲಿನ ಮೋಹವನ್ನು ತೊರೆದು ಗಾಂಧೀಜಿ ವರ್ಣದ ಮಾತೆತ್ತುತ್ತಾರೆ. ಅಷ್ಟೇ ಅಲ್ಲ, ತಮ್ಮ ಕಾಳಜಿಯಾದ ಸಮಾನತೆಯನ್ನೂ ವರ್ಣಾಶ್ರಮಕ್ಕೆ ಆರೋಪಿಸುತ್ತಾರೆ.

1927 ರಲ್ಲಿ ಅವರು ವರ್ಣಾಶ್ರಮದ "ಬ್ರಾಹ್ಮಣೇತರ ವ್ಯಾಖ್ಯಾನ" ಅವರೇ ಹಾಗೆ ಹೇಳಿಕೊಳ್ಳುವುದು ಮಾಡುವ ಬಗೆ ಹೀಗೆ :– "ಅದು ಆಧ್ಯಾತ್ಮಿಕ ಲೇವಾದೇವಿಯ ನಿಯಮ........ವರ್ಣಕ್ಕೂ ಮೇಲು-ಕೀಳಿಗೂ ಏನೂ ಸಂಬಂಧವಿಲ್ಲ... ಆದ್ದರಿಂದ ನಿಜವಾದ ಬ್ರಾಹ್ಮಣೇತರರು ತಾವು ಕುಳಿತ ಅಡಿಗಲ್ಲನ್ನೆ ನಾಶಮಾಡುವುದರ ಬದಲು ಅದರ ಧೂಳು ಕೊಡವಬೇಕಷ್ಟೆ....ನನ್ನ ವರ್ಣಾಶ್ರಮ

ದಲ್ಲಿ ಯಾರೊಡನೆ ಯೂರು ಬೇಕಾದರೂ ಊಟ ಮಾಡಬಹುದು....ನನ್ನ ವರ್ಣಾಶ್ರಮ ಒಂದು ಅಸ್ಪೃಶ್ಯ ಹುಡುಗಿಯನ್ನು ನನ್ನ ಮಗಳ ಹಾಗೆ ನನ್ನ ಮನೆಯಲ್ಲಿ ನೋಡಿಕೊಳ್ಳುವ ಅವಕಾಶ ಕೊಡುತ್ತದೆ....''[8] ಇದೇ ಬಗೆಯ 'ಅಜ್ಞಾನ'ಅವರ ಗೀತೆಯ ಭಾಷ್ಯದಲ್ಲೂ (1928) ಕಾಣಸಿಗುತ್ತದೆ '....ವರ್ಣಾಶ್ರಮ ತನ್ನ ಹಿಂದಿನ ಪರಿಶುದ್ಧಿಯನ್ನು ಕಳೆದುಕೊಂಡು ಈಗಿರುವಂಥ ತಾರತಮ್ಯದ ಸ್ಥಿತಿ ತಲುಪುವಾಗ ಗೀತೆ ರಚನೆಯಾಯಿತು''...[9]

1935ರ ವೇಳೆಗೆ ಗಾಂಧಿಗೆ ಜಾತಿ ಬಗ್ಗೆ ಪೂರ್ಣ ಭ್ರಮನಿರಸನವಾಗಿದೆ. ಆದರೂ ವರ್ಣದ ಹುಚ್ಚು ಬಿಟ್ಟಿಲ್ಲ. ಹರಿಜನ ಪತ್ರಿಕೆಯಲ್ಲಿ 'Caste has to go' ಎಂಬ 'ಪ್ರಸಿದ್ಧ' ಲೇಖನದಲ್ಲಿ ಅವರು ಹೇಳುವುದು :– ''ಸ್ಮೃತಿ ಮತ್ತಿತರ ಶಾಸ್ತ್ರಗಳಲ್ಲಿ ಏನೇ ಹೇಳಿರಲಿ, ವೇದಕಾಲದ ವರ್ಣಾಶ್ರಮ, ಸಂಪೂರ್ಣ ಸಮಾನತೆಯ ಆಧಾರ ಹೊಂದಿತ್ತು. ಅಂಥ ವರ್ಣಾಶ್ರಮದಲ್ಲಿ ನನಗೆ ನಂಬಿಕೆಯುಂಟು (!)... ಈಗಿನ ಜಾತಿಪದ್ಧತಿ ವರ್ಣಾಶ್ರಮ ತತ್ವಕ್ಕೆ ತದ್ವಿರುದ್ಧವಾದದ್ದು. ಸಾ ಮೂ ಹಿ ಕ ಪ್ರಜ್ಞೆ ಇದನ್ನು ಎಷ್ಟು ಬೇಗ ಹೊರಗಟ್ಟಿದರೆ ಅಷ್ಟೂ ಒಳ್ಳೆಯದು....ಜಾತಿವಿನಾಶದ ಅತ್ಯಂತ ನೇರವಾದ, ಪರಿಣಾಮಕಾರಿಯಾದ ಶೀಘ್ರ ವಿಧಾನ ಎಂದರೆ, ಪ್ರತಿಯೊಬ್ಬ ಸುಧಾರಕರು ಮೊದಲು ತಾವು ಜಾತ್ಯಾತೀತರಾಗುವುದರಿಂದ ಆರಂಭಿಸಬೇಕು. ಅಂಥವರು ಸಾಮಾಜಿಕ ಬಹಿಷ್ಕಾರವನ್ನೂ ಎದುರಿಸಲು ಸಿದ್ಧರಾಗಬೇಕು....''[10]

ಹಿಂದೂಧರ್ಮ, ಜಾತಿವ್ಯವಸ್ಥೆ, ವರ್ಣಾಶ್ರಮ ಇವುಗಳ ವಿಷಯದಲ್ಲಿ ಗಾಂಧಿ ನಿಲವು ಕ್ರಾಂತಿಕಾರಿಯಾಗುತ್ತಾ ಹೋಗುವುದು ಇಲ್ಲಿಂದಾಚೆಗೆ. ವರ್ಣವನ್ನು ಬಿಡದೆ ಹಿಡಿದಿದ್ದ ಮರುವರ್ಷವೇ (1936) ಸೆಗಾಂವ್ ಎಂಬ ಹಳ್ಳಿಯಲ್ಲಿ ಹಳ್ಳಿಗರ ಮುಂದೆ ಗಾಂಧೀಜಿ ಮನಸ್ಸು ಬಿಚ್ಚುತ್ತಾರೆ :–

'ನನ್ನ ದೃಷ್ಟಿಯಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ರಜಪೂತ, ಮಹರ್, ಚಮ್ಮಾರ ಎಲ್ಲಾ ಒಂದೇ ಅಷ್ಟೆ ಅಲ್ಲ ಹುಟ್ಟಿನ ಮೇಲೆ ನಿರ್ಧಾರವಾಗುವ ಇಂಥ ತಾರತಮ್ಯಗಳೆಲ್ಲ ಅನೈತಿಕ ಎಂದು ನಾನು ಭಾವಿಸುತ್ತೇನೆ. ಈ ಮೇಲು ಕೀಳಿನಿಂದಲೇ ನಾವು ಈವರೆಗೆ ಒದ್ದಾಡಿದ್ದೇವೆ. ಇಂಥ ತರ-ತಮ ಪ್ರಜ್ಞೆ ನಮ್ಮ ಬದುಕನ್ನೇ ಕುಲಗೆಡಿಸಿದೆ....''[11] ಹೀಗೆ ಆರಂಭವಾಗುವ ಚಿಂತನೆ, ಮತ್ತೂ ಮುಂದಿನ ವರ್ಷ ಹರಿಜನ ಸೇವಕರ ಸಂಘದ ಸಭೆಯಲ್ಲಿ ಈ ಮಾತುಗಳನ್ನು ಹೊರಹಾಕುತ್ತದೆ:– ''ಇಂದು ನಿಜವಾದ್ದು ಒಂದೇ ವರ್ಣ. ನಾವೆಲ್ಲ ಶೂದ್ರರು, ಅಥವಾ ಇನ್ನೂ ಬೇಡವೆಂದರೆ ಹರಿಜನರು. ನಮ್ಮನ್ನೆಲ್ಲ ನಾವು ಶೂದ್ರರೆಂದೇ ಭಾವಿಸುವಾಗ....ಇಂಥ ವರ್ಗೀಕರಣದ ಮಿಥ್ಯ ಕುಸಿದುಬೀಳುತ್ತದೆ ಮತ್ತು ನಾವು ವಾಸ್ತವಕ್ಕೆ ಹತ್ತಿರ ಆಗುತ್ತೇವೆ. ಕನಿಷ್ಠ ಅಗತ್ಯಗಳಿಗೆ ಮಾತ್ರ ಗಮನ ಕೊಡುತ್ತಾ ಅಧ್ಯಯನ, ವಿದ್ಯಾದಾನಕ್ಕಾಗಿ ತನ್ನ ಸಮಯವನ್ನೆಲ್ಲ ಮುಡಿಪಾಗಿಡುವ ನಿಜವಾದ ಬ್ರಾಹ್ಮಣ ಇಂದು ಎಲ್ಲಿದ್ದಾನೆ ? ತನ್ನ ಸಹಜೀವಿಗಳ ಗೌರವಕ್ಕಾಗಿ ಅಥವಾ ತನ್ನ ದೇಶಕ್ಕಾಗಿ ಜೀವವನ್ನೇ ಕೊಡಬಲ್ಲ ಕ್ಷತ್ರಿಯನೆಲ್ಲಿ ? ದೇಶದ ಸಂಪತ್ತನ್ನು ವೃದ್ಧಿಸುತ್ತಾ, ತನ್ನ ಸಂಪತ್ತನ್ನೆಲ್ಲ ಬಡವರಿಗಾಗಿ ವಿನಿಯೋಗಿಸುವ ವೈಶ್ಯನಾದರೂ ಎಲ್ಲಿದ್ದಾನೆ ? ಅದೇ ಒಬ್ಬ ಶೂದ್ರನನ್ನು ನೋಡಿ ತಾನೊಂದು ಭಾರ ಹೊರುವ ಪ್ರಾಣಿಯೋ ಎನ್ನುವ ಹಾಗೆ ದುಡಿಯುತ್ತಾನೆ, ಗುಲಾಮಗಿರಿ ಅನುಭವಿಸುತ್ತಾನೆ...'' ಇಷ್ಟೆ ಅಲ್ಲ, ತಾನು ಜಾಡಮಾಲಿ

> ಅಸ್ಪೃಶ್ಯತೆಯನ್ನು ಇಟ್ಟುಕೊಳ್ಳುವ ಮೂಲಕ ಹಿಂದೂಧರ್ಮ ಪಾಪ ವೆಸಗಿದೆ ಎನ್ನುತ್ತೇನೆ ನಾನು........ ನಮ್ಮ ಅಣ್ಣತಮ್ಮಂದಿರನ್ನೇ ದಮನ ಮಾಡಿರುವ ಅಪರಾಧ ನಮ್ಮದು. ಅವರನ್ನು ನಾವು ತೆವಳುವಂತೆ ಮಾಡಿದ್ದೇವೆ; ಅವರ ಮೂಗುಗಳನ್ನು ನೆಲಕ್ಕೆ ಉಜ್ಜುವಂತೆ ಮಾಡಿದ್ದೇವೆ; ಕೆಂಗಣ್ಣು ಬಿಡುತ್ತಾ ಅವರನ್ನು ರೈಲುಬೋಗಿಗಳಿಂದ ಆಚೆ ದಬ್ಬಿದ್ದೇವೆ. ಬ್ರಿಟಿಷ್ ಸರ್ಕಾರ ಸಹ ಇದಕ್ಕಿಂತ ಹೆಚ್ಚಿನದನ್ನು (ನಮಗೆ) ಏನು ಮಾಡಿದೆ?''

ಯಾದರೆ ತನ್ನ ಮಗನೂ ಜಾಡಮಾಲಿಯಾಗಬೇಕು' ಎಂದು ಹೇಳಿದ ಗಾಂಧೀಜಿಯೇ ಮುಂದುವರೆದು ''... ನಾವು ಬ್ರಾಹ್ಮಣ, ಕ್ಷತ್ರಿಯ ಇತ್ಯಾದಿ ಹಣೆಪಟ್ಟಿ ಹಚ್ಚಿಕೊಳ್ಳುವುದನ್ನು ಅತ್ತ ಬಿಸಾಕಿ ನಂನಮ್ಮ ಒಲವು-ಮನೋಧರ್ಮಕ್ಕೆ ಅನುಗುಣವಾದ ಕಾಯಕ ಮಾಡೋಣ'' ಎಂದೂ ಹೇಳುತ್ತಾರೆ.[12]

ಈ ಪ್ರಕ್ರಿಯೆ ಈ ಬೆಳವಣಿಗೆ, ಸತ್ಯಗಳನ್ನು ಒಂದೊಂದಾಗಿ ದರ್ಶಿಸುತ್ತಾ ಹೋಗುವ ಗಾಂಧಿಯ ಚೈತನ್ಯ, ಎಲ್ಲವೂ ಕಡೆಗೆ ಅವರನ್ನು ಜಾತಿಪದ್ಧತಿಯ ಕುರಿತು ಸಮಾಜ ವೈಜ್ಞಾನಿಕ ತಿಳಿವಳಿಕೆಯವರೆಗೂ ಒಯ್ಯುತ್ತದೆ.

1934 ರಲ್ಲಿ ಅಲೆಪ್ಪಿಯಲ್ಲಿ ಅಸ್ಪೃಶ್ಯತಾ ನಿವಾರಣೆ ಆಂದೋಳನವನ್ನು ವಿವರಿಸುತ್ತಾ... ''ಇದರಿಂದ ಹಿಂದೂಧರ್ಮ ಸಶಕ್ತವಾಗುತ್ತೋ, ದುಬ[...] ಲವಾಗುತ್ತೋ, ಅಥವಾ ನಾಶವಾಗಿಯೇ ಹೋಗ[...] ತ್ತೋ, ಅದೊಂದೂ ನನಗೆ ಬೇಕಿಲ್ಲ. ನನ್ನ [...] ನಿಲುವು ಹಿಂದೂ ಧರ್ಮದ ಬಲ ಕುಗ್ಗಿಸಿದ[...] ಅದಕ್ಕೆ ನಾನೇನೂ ಮಾಡೋಕಾಗೊಲ್ಲ, ನನ[...] ಚಿಂತೆಯೂ ಇಲ್ಲ....'' ಎಂದು ಸ್ಪಷ್ಟಪಡಿಸುತ್ತಾ[...] ಕಡೆಗೆ ತಾರತಮ್ಯದ ಪ್ರಶ್ನೆ ಒಟ್ಟಾರೆಯಾಗಿ ಹೇ[...] ಅಸ್ಪೃಶ್ಯತೆಯೊಂದರಲ್ಲೇ ಎದ್ದುನಿಂತಿದೆ, ಅಸ್ಪೃ[...] ಶ್ಯತೆ ಹೇಗೆ ಮೇಲುಕೀಳಿನ ಮರ್ಮಸ್ಥಾನವಾಗಿ[...] ಎನ್ನುವುದನ್ನು ಗಾಂಧೀಜಿ ''ಅಸ್ಪೃಶ್ಯತೆ ನಿವಾರಣ[...] ಯಾದರೆ ಸವರ್ಣೀಯರು ಇತರ ಕಡೆಯೆಲ್ಲ ತ[...] ತಮ್ಯ ಪ್ರಜ್ಞೆ ಉಳಿಸಿಕೊಂಡು, ಅಸ್ಪೃಶ್ಯರಿ[...] ಮಾತ್ರ ನ್ಯಾಯವಾಗಿರುತ್ತಾರಾ ? ಹಾಗೆಂದ[...] ನೀವು ಭಾವಿಸುತ್ತೀರಾ'' ಎನ್ನುವ ಪ್ರಶ್ನೆಯ[...] ಮೂಲಕವೇ ಹೊಳೆಯಿಸುತ್ತಾರೆ.

ಹಾಗೆ ನೋಡಿದರೆ ಇದಕ್ಕೂ ಮುಂಚೆಯೆ[...] (1932 ರಲ್ಲೇ) ಹರಿಜನ ಸೇವಕ ಸಂಘದ ಕಾರ್ಯ[...] ಕರ್ತರಿಗೆ ಹೇಳುವ ಮಾತು ನೋಡಿ. ತಮ[...] ಕಾರ್ಯಕ್ರಮಕ್ಕೆ ಬಂದ ಟೀಕೆಗಳ ಹಿನ್ನೆಲೆಯ[...] ''ಹರಿಜನರ ದುಸ್ಥಿತಿಗೆ, ಅವರ ಕೆಟ್ಟ ಹವ್ಯಾಸಗಳ[...] ಸವರ್ಣೀಯರೇ ಕಾರಣ ಎಂಬುದನ್ನು ಈ ಟೀ[...] ಕಾರರು ಮರೆತಿದ್ದಾರೆ. ಪರಿ[...]ನರು ಶುಚಿಯಾ[...] ರಲು ಬೇಕಾದ ಅವಕಾಶವನ್ನು ಸವರ್ಣೀಯ[...] ಕಿತ್ತುಕೊಂಡಿದ್ದಾರೆ.. ಸಾಮಾಜಿಕವಾಗಿ ಅ[...] (ಹರಿಜನರು) ಕುಷ್ಠರು. ಆರ್ಥಿಕವಾಗಿ ಅದಕ್ಕೆ[...] ತಲೂ ಕಡೆ, ದೇವರ ಆಲಯಗಳೆಂದು ನ[...] ತಪ್ಪಾಗಿ ಕರೆಯುವ ಸ್ಥಳಗಳಲ್ಲಿ ಅವರಿಗೆ ಪ್ರವೇ[...] ವಿಲ್ಲ. ಸಾರ್ವಜನಿಕ ರಸ್ತೆ, ಶಾಲೆ, ಆಸ್ಪತ್ರೆ[...] ಬಾವಿ, ನಲ್ಲಿ, ಉದ್ಯಾನಗಳು ಅವರಿಗೆ ದಕ್ಕು[...] ದಿಲ್ಲ. ಕೆಲವು ಸಲ ಒಂದು ನಿರ್ದಿಷ್ಟ ದೂರದ[...] ಒರುವುದೂ ಸಾಮಾಜಿಕ ಅಪರಾಧ. ಇನ[...] ಕೆಲವು ಅಪರೂಪದ ಸನ್ನಿವೇಶಗಳಲ್ಲಿ ಅವ[...] ಕಾಣಿಸಿಕೊಳ್ಳುವುದೇ ಅಪರಾಧ. ನಗರಗಳು ಹ[...] ಗಳಲ್ಲಿ ಯಾವ ಸೌಲಭ್ಯವೂ ಸಿಕ್ಕದಂತ, ದರಿದ್ರತ[...] ಸ್ಥಳಗಳಿಗೆ ಅವರನ್ನು ದಬ್ಬಿದ್ದಾರೆ. ಸವರ್ಣೀ[...] ವಕೀಲರು, ವೈದ್ಯರು–ತಮ್ಮವರನ್ನು ಕಾಣು[...] ಹಾಗೆ ಇವರನ್ನು ಕಾಣುವುದಿಲ್ಲ. ಅವರ ಧಾರ್ಮಿ[...] ಆಚರಣೆಗಳಲ್ಲಿ ಬ್ರಾಹ್ಮಣರು ಪೌರೋಹಿ[...] ವಹಿಸುವುದಿಲ್ಲ. ಅವರಿನ್ನೂ ಹೇಗೋ ಬದು[...] ಸಾಗಿಸುತ್ತಿದ್ದಾರಲ್ಲಾ. ಇನ್ನೂ ಹಿಂದೂಕಕ್ಷೆಯಲ್ಲೆ[...] ಉಳಿದುಕೊಂಡಿದ್ದಾರಲ್ಲಾ ಎಂಬುದೇ ಸೋ[...] ಗದ ಸಂಗತಿ. ತಮ್ಮಶೋಷಕರ ವಿರುದ್ಧ ಬಂಡೇ[...] ದಷ್ಟೂ ನಿತ್ರಾಣರಾಗಿಹೋಗಿದ್ದಾರೆ....'' ಎ[...] ವಿವರಿಸುತ್ತಾರೆ.[24]

1933ರಲ್ಲಿ ಹೇಳಿದ್ದು:– ''ಬ್ರಾಹ್ಮಣ[...]

ಒಂದು ವರ್ಗವಾಗಿ ನೀಚತನಕ್ಕೆ ಇಳಿದುದೇ ಹಿಂದೂ ಧರ್ಮ ಹೀನಾಯಸ್ಥಿತಿ ತಲುಪಲು ಕಾರಣ''।[5]

ಅಥವಾ ಹಿಂದೂ–ಮುಸ್ಲಿಂ ಸಮಸ್ಯೆ ಬಗ್ಗೆ ಅಮೇರಿಕಾದ ಪತ್ರಕರ್ತ ಲೂಯಿಫಿಷರ್ ಜೊತೆ ಮಾತಾಡುತ್ತಾ ಗಾಂಧಿ ತೋರುವ ಆಳವಾದ ಒಳನೋಟವನ್ನು ಗಮನಿಸಿ:– ''ಅಂತಿಮವಾಗಿ ಕೋಮುಸಮಸ್ಯೆ ಕೂಡಾ ಅಸ್ಪೃಶ್ಯತೆಯ ಇನ್ನೊಂದು ಶಾಖೆಯೆ....''।[6]

ಇನ್ನೂ ಮುಂದಕ್ಕೆ 1947ರಲ್ಲಿ ''ಈ ಕ್ಷುದ್ರ ಜಾತಿವ್ಯವಸ್ಥೆ ಯಾವಾಗಲೂ ಶೂದ್ರರನ್ನು ಅತಿಶೂದ್ರರ ಜತೆ ಸೇರಿಸಿಯೇ ಶೋಷಿಸುತ್ತಾ ಬಂದಿದೆ''[17] ಎಂದಿದ್ದನ್ನು ಅಥವಾ ''ಅಸ್ಪೃಶ್ಯತೆ ಇರುವವರೆಗೆ ಭಾರತಕ್ಕೆ ಶಾಂತಿಯೂ ಇಲ್ಲ, ಸ್ವಾತಂತ್ರ್ಯವೂ ಇಲ್ಲ. ಬ್ರಿಟಿಷರು ಹೋಗಬಹುದು. ಆದರೆ ನಿಜವಾದ ಸ್ವಾತಂತ್ರ್ಯ ದಕ್ಕುವುದಿಲ್ಲ''[18] ಎಂದು ಸ್ವಾತಂತ್ರ್ಯದ ತಿರುಳನ್ನೇ ಹೇಳುವ ಮಾತನ್ನು ನೋಡಬಹುದು........

ಗಾಂಧೀಜಿಯ ಅರ್ಥಪೂರ್ಣ ವಿಕಾಸವನ್ನು ಹೀಗೆಯೇ ಅನೇಕ ಉದಾಹರಣೆಗಳ ಮೂಲಕ ಸಾಧಿಸಲು ಶಕ್ಯವಿದೆ. ಆದರೆ ಇಲ್ಲೊಂದು ಸಾಚಾ ಪ್ರಶ್ನೆಯೂ ಏಳಬಹುದು–''ಗಾಂಧಿ ಕಾಲಕಾಲಕ್ಕೆ ಹೀಗೆಲ್ಲ ಹೇಳಿದ, ಖರೆ, ಆದರೆ ಆತನ ಪ್ರಾಮಾಣಿಕತೆಯದೇನು ಖಾತ್ರಿ. ಮೋಸ ಮಾಡಲೆಂದೇ ಹೀಗೆ ಬೊಗಳೆ ಯಾಕೆ ಹೊಡೆದಿರಬಾರದು ?'' ಎಂದೂ ಕೇಳಬಹುದು.

ಇದಕ್ಕೆ ಮೊದಲ ಉತ್ತರ-ಗಾಂಧಿ ಪ್ರಾಮಾಣಿಕವಾಗಿರದಿದ್ದರೆ ಇಂಥ ದೃಷ್ಟಿಪಲ್ಲಟ, evolution ಸಾಧ್ಯವೇ ಇರುತ್ತಿರಲಿಲ್ಲ ಎನ್ನುವುದು. ಇನ್ನೊಂದು ಸಾಕ್ಷ್ಯವನ್ನು ನಮ್ಮ ದೈನಿಕ ಅನುಭವಗಳಿಂದಲೇ ಒದಗಿಸಬಹುದು. ನಾವು ಕಂಡ ಹಾಗೆ ಯಾವ ವ್ಯಕ್ತಿಯೂ ತನ್ನ ಪಾರದರ್ಶಕ ಪ್ರಾಮಾಣಿಕತೆಯನ್ನು ಎಲ್ಲರಿಗೂ ಮನದಟ್ಟಾಗುವ ಹಾಗೆ ಬಿಚ್ಚಿ ತೋರದೆ, ಯಾವುದೇ ಜನಾಂದೋಳನದ ನಾಯಕನಾಗಲು ಸಾಧ್ಯವಿಲ್ಲ. ಬೇಕಾದರೆ ಯಾರೂ ಹಾಗೆ 'ಜನಪ್ರಿಯ' ರಾಜಕಾರಣಿಯಾಗಬಹುದೇ ಹೊರತು 'ನಾಯಕ'ನಲ್ಲ. ಈ ಸತ್ಯ ಈಗ ಮಾತ್ರ ಅನ್ವಯಿಸುತ್ತೆ, ಮುಂಚಿನ ಜನ ಶ್ರೇಷ್ಠರಾಗಿದ್ದರು ಎನ್ನಬೇಕಾದರೂ ಅದಕ್ಕೂ ಯಾವ ಚಾರಿತ್ರಿಕ ಆಧಾರಗಳೂ ಸಿಗುವುದಿಲ್ಲ.

ಇದಕ್ಕೂ ಮಹತ್ವದ್ದೆಂದು ನನಗೆ ಕಾಣುವ ಸಂಗತಿ ಡಾ॥ ರಾಮಮನೋಹರ ಲೋಹಿಯಾ ಗಾಂಧಿ ಅನುಯಾಯಿಯಾದರು ಎನ್ನುವುದು. ಬೇರೆ ವಿಷಯಗಳು ಹಾಗಿರಲಿ, ಜಾತಿ ವಿಚಾರದಲ್ಲಂತೂ ಲೋಹಿಯಾ ಡಾ॥ ಅಂಬೇಡ್ಕರ್‌ರಿಗಿಂತಲೂ ನಿಖರವಾದ, ಗತಿಶೀಲವಾದ ತಿಳಿವಳಿಕೆ ಹೊಂದಿದ್ದವರು. (ಆಸಕ್ತರು ಅವರ wheel of history ಯ Class and Caste ಅಧ್ಯಾಯವನ್ನು ನೋಡಬಹುದು) ಅವರು ಕೂಡಾ ಗಾಂಧಿ ಬಗ್ಗೆ ಬರೆಯುತ್ತಾರೆ:– ''ಗಾಂಧೀಜಿಯ ಬಿಡಿ ಆಲೋಚನೆ, ಕೃತಿಗಳ ಬಗ್ಗೆ ನನ್ನ ಟೀಕೆ ಏನೇ ಇರಲಿ, ನಮ್ಮ ಆದರ್ಶ ಹಾಗೂ ವಾಸ್ತವ ಎರಡೂ ಒಂದೇ ಕಡೆ ಮೇಳೈಸಿದ ವ್ಯಕ್ತಿ ಗಾಂಧಿಯಾಗಿದ್ದರು ಎಂಬುದನ್ನು ಇಲ್ಲಿ ದಾಖಲು ಮಾಡಬೇಕಿದ....''[19]

ಅಂದಹಾಗೆ ಗಾಂಧೀಜಿಯ ವರ್ಣಾಶ್ರಮದ ಕಲ್ಪನೆಯ ವಿಶ್ಲೇಷಣೆಯನ್ನು ಎಲ್ಲರಿಗಿಂತ ಚೆನ್ನಾಗಿ ಲೋಹಿಯಾರೇ ಮಾಡಿದ್ದಾರೆ. ''ತನ್ನ ಸಾವಿನ ಮುಂಚಿನ ಕೆಲವು ವರ್ಷಗಳವರೆಗೆ ಗಾಂಧೀಜಿಗೆ ಜಾತಿವ್ಯವಸ್ಥೆಯ ಎಲ್ಲ ಮುಖಗಳೂ ಸರಿಯಾಗಿ ಅರ್ಥವಾದಂತೆ ತೋರುವುದಿಲ್ಲ. ಅವರು ಜಾತಿಯನ್ನು ರಮ್ಯವಾಗಿ ಉದಾತ್ತೀಕರಿಸುವ ಪ್ರಯತ್ನದಿಂದ ಆರಂಭಿಸುತ್ತಾರೆ. ಆ ಪದ್ಧತಿಯಲ್ಲೇ ಅಂತರ್ಗತ ದೋಷವಿಲ್ಲವೇನೋ ಎನ್ನುವ ಹಾಗೆ, 'ಅದರ ದೋಷ'ಗಳನ್ನು ನಿವಾರಿಸುವ ಯತ್ನವನ್ನು ಮಾಡುತ್ತಾರೆ. ಅಸ್ಪೃಶ್ಯತೆಯನ್ನು ತೊಡೆಯಲು ಆತ ಉದ್ದಕ್ಕೂ ಶ್ರಮಿಸಿದ್ದು ನಿಜ. ಆದರೆ ಅದು ಸುಧಾರಕನ ಕೆಲಸವೇ ವಿನಾ ಕ್ರಾಂತಿಕಾರಿಯದಲ್ಲ. ....ಆತ ತನ್ನ ನಿಲುವನ್ನು ಕಡೆಗೆ ಬದಲಿಸಿಕೊಂಡ ಮೇಲೆಯೇ ಜಾತಿ ವಿಷಯದಲ್ಲೂ ಕ್ರಾಂತಿಕಾರಿಯಾಗಿ ಮಾರ್ಪಟ್ಟಿದ್ದು....''[20] ಇದು ಅವರ ವಿಶ್ಲೇಷಣೆ.

''ವೇದಕಾಲದ ವರ್ಣಾಶ್ರಮ, ಸಂಪೂರ್ಣ ಸಮಾನತೆಯ ಆಧಾರ ಹೊಂದಿತ್ತು. ಅಂಥ ವರ್ಣಾಶ್ರಮದಲ್ಲಿ ನನಗೆ ನಂಬಿಕೆಯುಂಟು (!).... ಈಗಿನ ಜಾತಿಪದ್ಧತಿ ವರ್ಣಾಶ್ರಮ ತತ್ವಕ್ಕೆ ತದ್ವಿರುದ್ಧವಾದದ್ದು. ಸಾಮೂಹಿಕ ಪ್ರಜ್ಞೆ ಇದನ್ನು ಎಷ್ಟು ಬೇಗ ಹೊರಗಟ್ಟಿದರೆ ಅಷ್ಟೂ ಒಳ್ಳೆಯದು....ಜಾತಿವಿನಾಶದ ಅತ್ಯಂತ ನೇರವಾದ, ಪರಿಣಾಮಕಾರಿಯಾದ ಶೀಘ್ರ ವಿಧಾನ ಎಂದರೆ, ಪ್ರತಿಯೊಬ್ಬ ಸುಧಾರಕರು ಮೊದಲು ತಾವು ಜಾತ್ಯತೀತರಾಗುವುದರಿಂದ ಆರಂಭಿಸಬೇಕು....ಅಂಥವರು ಸಾಮಾಜಿಕ ಬಹಿಷ್ಕಾರವನ್ನೂ ಎದುರಿಸಲು ಸಿದ್ಧರಾಗಬೇಕು....''

ಒಟ್ಟಾರೆ ಗಾಂಧೀಜಿಯ ವಿಚಾರವನ್ನು ನಾವು ಒಪ್ಪುವುದು ಬಿಡುವುದು ನಮಗೇ ಸೇರಿದ್ದು. ಆದರೆ ಆತನ ಪ್ರಾಮಾಣಿಕತೆಯನ್ನು ಸಂದೇಹಿಸಲು ಸಾಧ್ಯವಿಲ್ಲವೆಂದು ನನ್ನ ಅನಿಸಿಕೆ.

ಆತನ ಪ್ರಾಮಾಣಿಕತೆ ನಿಜವಾದದ್ದು, ಹೃದಯಾಂತರಾಳದ ಗರಜು ಎಂದು ಒಪ್ಪಿದ ಮೇಲೆ ದಲಿತರ ಬಗ್ಗೆ ಆತನಿಗಿದ್ದ ದೃಷ್ಟಿಕೋನವನ್ನೂ ವಿಮರ್ಶಿಸುವುದು ಅಗತ್ಯವಾಗುತ್ತದೆ. ಅದು ಕೇವಲ ಸೋಗಿನ ಮರುಕವಾಗಿತ್ತೇ, ಅಥವಾ ದೇವನೂರರ ಗ್ರಹಿಕೆಯಂತೆ ನಿಜವಾದ ಅನುಕಂಪವಾಗಿತ್ತೇ ಅಥವಾ ಅದನ್ನೂ ದಾಟಿ ಮುಂದೆ ಹೋದ identification ದಲಿತಮಂತಿಕೆಯನು' ಅಪ್ಪಿಕೊಂಡ ಚಿಂತನ ಕ್ರಮವೆ ಆಗಿತ್ತೇ, ಎಂಬ ಪ್ರಶ್ನೆಗಳನ್ನು ನಾವು ಪರಿಹರಿಸಿಕೊಳ್ಳಬೇಕಾಗಬತ್ತದೆ

ಗಾಂಧಿ ಅಸ್ಪೃಶ್ಯರನ್ನು ಹರಿಜನರೆಂದು ಕರೆದ ಅವರನ್ನು ಮಾನಸಿಕ, ದೈಹಿಕ ಹೇಳವರನ್ನಾಗಿ ಮಾಡಿದರೆಂದು ಪೋಲಂಕಿ ದೂಷಿಸುತ್ತಾರೆ. ಆದರೆ ವಸ್ತುಶಃ 'ಹರಿಜನ' ಎಂಬ ಹೆಸರು ಗಾಂಧೀಜಿ ಕೊಟ್ಟಿದ್ದಲ್ಲ. 1933 ರಲ್ಲಿಯೇ ಆ ಸ್ಪಷ್ಟನೆ ಕೊಟ್ಟಿದ್ದಾರೆ. ''ಹರಿಜನ–ನಾನು ಕೊಟ್ಟ ಹೆಸರಲ್ಲ. ಕೆಲವು ವರ್ಷಗಳ ಹಿಂದೆ ನಾನು 'ನವಜೀವನ' ಪತ್ರಿಕೆಯಲ್ಲಿ 'ಅಸ್ಪೃಶ್ಯ' ಪದ ಉಪಯೋಗಿಸಿದಾಗ, ಕೆಲವು ಅಸ್ಪೃಶ್ಯರೇ ಪತ್ರ ಬರೆದು ತಮ್ಮ ಅಸಮ್ಮತಿ ವ್ಯಕ್ತಮಾಡಿದರು. ನಾನು ಅವರನ್ನೇ ಕರೆದು, ಬೇರೆ ಯಾವುದಾದರೂ ಹೆಸರು ಸೂಚಿಸಿ ಎಂದು ಕೇಳಿದೆ. ಗುಜರಾತಿನ ಕವಿಯೊಬ್ಬರ ಕಾವ್ಯದಲ್ಲಿ ಬಳಕೆಯಾಗಿದ್ದ 'ಹರಿಜನ' ಪದ ಉಪಯೋಗಿಸುವಂತೆ ಅವರು ಸಲಹೆ ಮಾಡಿದರು........''[21]

ಆದ್ದರಿಂದ ಆ ವಿಷಯದಲ್ಲಂತೂ ಗಾಂಧೀಜಿಯನ್ನು ದೂರುವಂತಿಲ್ಲ ಅದು ಒತ್ತಟ್ಟಿಗಿರಲಿ.

ಗಾಂಧೀಜಿ ಮುಂಚೆ ದಲಿತರ ಬಗ್ಗೆ ಒಬ್ಬ ಸುಧಾರಣವಾದಿಯ ಅನುಕಂಪ ಮಾತ್ರ ಇರಿಸಿಕೊಂಡಿದ್ದಂತೆ ನನಗೂ ತೋರುತ್ತದೆ. ಆದರೆ ಮುಂದಕ್ಕೆ ''ಹಿಂದೂ ಸಮಾಜದಲ್ಲಿನ ಪ್ರತಿಗಾಮಿ ಶಕ್ತಿಗಳ ಬಗ್ಗೆ ನನಗೆ ಗೊತ್ತಿದ್ದರೂ ಕೂಡಾ, ಸಂಪೂರ್ಣ ಜಾತಿವಿನಾಶ–ಹಿಂದೂ ಧರ್ಮದಲ್ಲಿ ಈಚೆಗೆ ವ್ಯಕ್ತವಾಗುತ್ತಿರುವ ಬಯಕೆ ಎಂದು ನಾನು ಹೇಳುತ್ತೇನೆ''[22] ಎನ್ನುವ ಹಂತ ತಲುಪುವ ವೇಳೆಗೆ ಗಾಂಧಿ ಸ್ವತಃ ದಲಿತವಂತನಾಗಿ ಮಾರ್ಪಟ್ಟಿದ್ದರು, ಆ ದಿಕ್ಕಿನಲ್ಲಿ ಕೈಲಾದಷ್ಟನ್ನೂ ಮಾಡಿದರು ಅನಿಸುತ್ತದೆ, ಚರಿತ್ರೆ ನೋಡಿದರೆ ವಿವರಣೆಯ ದೃಷ್ಟಿಯಿಂದ ಒಂದೆರಡು ಗಾಂಧಿ ವಿಚಾರಗಳನ್ನೂ ಘಟನೆಗಳನ್ನೂ ನಿರೂಪಿಸುತ್ತೇನೆ.

1936ರಲ್ಲಿ ನಂದಿ ಬೆಟ್ಟದಲ್ಲಿ ದಕ್ಷಿಣ ಭಾರತದ ಹರಿಜನ ಕಾರ್ಯಕರ್ತರ ಸಮ್ಮೇಳನ ನಡೆಯಿತು.

ಅದರಲ್ಲಿ ಗಾಂಧೀಜಿ "ಅಸ್ಪೃಶ್ಯತೆ ಹೋಗದಿದ್ದರೆ, ಹಿಂದೂಧರ್ಮ ನಾಶವಾಗುತ್ತೆ. ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ— 'ಯಾವ ಧರ್ಮ, ಬರೀ ಹುಟ್ಟಿನ ಕಾರಣವಾಗಿ ಒಂದು ಜನಾಂಗವನ್ನೇ ಹತ್ತಿಕ್ಕುವುದೋ, ಆ ಧರ್ಮನಾಶವಾಗಲಿ' ಎಂದೇ ಪ್ರಾರ್ಥಿಸುತ್ತೇನೆ....ನಾವು ಎಲ್ಲ ಅರ್ಥದಲ್ಲೂ ಹರಿಜನರೇ ಆಗಬೇಕಾದ ಅಗತ್ಯವನ್ನು ಇದು ಎತ್ತಿತೋರುತ್ತದೆ... ಅವರು ನೋವು ಅನುಭವಿಸುವಾಗ, ನಾವು ನೋವು ಅನುಭವಿಸಬೇಕು. ಮತ್ತು ಅವರ ಯಾತನೆಗೆ ಕಾರಣವಾದ ದ್ದೆಲ್ಲವನ್ನೂ ತೊಡೆಯಲು ಯತ್ನಿಸಬೇಕು.... ಅವರಿಗಾಗಿ ಮಾಡಬೇಕಾದ ನಮ್ಮ ಕರ್ತವ್ಯದಲ್ಲಿ ಸ್ವಲ್ಪವಾದರೂ ನಿರ್ವಹಿಸುವ ತೀರ್ಮಾನ ಮಾಡೋಣ... ...[23]

ಬ್ರಿಟಿಷರು 1935 ರಲ್ಲಿ ಜಾರಿಮಾಡಿದ ಭಾರತ ಕಾಯ್ದೆಯನ್ನು ಅನುಸರಿಸಿ, 37 ರಲ್ಲಿ ಚುನಾವಣೆಗಳು ನಡೆದವು. ಅದಕ್ಕೆ ಮುಂಚೆ ಎಲ್ಲಕಡೆ ಭರದಿಂದ ಪ್ರಚಾರದ ಕೆಲಸ, ಎಲ್ಲ ಪತ್ರಿಕೆಗಳಲ್ಲಿ ಪ್ರಚಾರದ ಸುದ್ದಿಯೇ ತುಂಬಿಹೋದಾಗ ಗಾಂಧೀಜಿ ಅದ್ಯಾವುದಕ್ಕೂ ಗಮನ ಹರಿಸದೆ, 'ಹರಿಜನ್'ನಲ್ಲಿ ಒಂದೇ ಒಂದು ಲೇಖನ ಬರೆಯುತ್ತಾರೆ :–"ಅಸ್ಪೃಶ್ಯತೆ ಬಗ್ಗೆ ಮತದಾರರನ್ನು ಎಚ್ಚರಿಸಲು, ಮತ್ತು ಚುನಾವಣಾ ಹುರಿಯಾಳು ಆ ಬಗ್ಗೆ ತಮ್ಮ ನಿರ್ದಿಷ್ಟ ನೀತಿಧೋರಣೆ ಹೊರಗೆಡಹುವಂತೆ ಮಾಡಲು ಹರಿಜನ ಕಾರ್ಯಕರ್ತರು ಈಚುನಾವಣಾ ಸಂದರ್ಭವನ್ನು ಬಳಸಿಕೊಳ್ಳಲು ಸಾಧ್ಯ. ಸ್ಪರ್ಧಿಗಳನ್ನು ಹೀಗೆ ಕೇಳಬಹುದು–'ನೀವು ಅಸ್ಪೃಶ್ಯತೆಯ ಸಂಪೂರ್ಣ ನಿರ್ಮೂಲನೆಗೆ ಬದ್ಧರೇ ? ಹರಿಜನರಿಗೆ ದೇವಸ್ಥಾನಗಳಲ್ಲಿ ಪ್ರವೇಶ ದೊರಕಿಸುವುದಕ್ಕೆ ಅಡ್ಡಿಯಾಗಿರುವ ಕಾನೂನು ತೊಂದರೆಗಳನ್ನು ನೀವು ನಿವಾರಿಸುವಿರಾ ? ಹರಿಜನರು ಸಾರ್ವಜನಿಕ ಬಾವಿ, ಶಾಲೆ ಮತ್ತಿತರ ಸೌಲಭ್ಯ ಪಡೆಯಲು ಅನುವಾಗುವಂತೆ ಸಾರ್ವತ್ರಿಕ ಕಾನೂನು ತರುವಿರಾ? ಈ ಸಂಬಂಧದಲ್ಲಿ ಎಲ್ಲರೂ ಸಂಚು ನಡೆಸಿ ಮೌನವಾಗಿದ್ದಾರೆಂದು ಒಬ್ಬರು ನನಗೆ ಪತ್ರ ಬರೆದಿದ್ದಾರೆ. ಅಂಥ ಮೌನಪಿತೂರಿಯೇನಾದರೂ ನಡೆದಿದ್ದರೆ ಉತ್ಸಾಹಿ ಹರಿಜನ ಕಾರ್ಯಕರ್ತರು ಮತದಾರರ ಸಭೆಗಳಲ್ಲಿ ಮೇಲ್ಕಂಡಂಥ ಪ್ರಶ್ನೆಗಳನ್ನು ಕೇಳುವ ಮೂಲಕ ಅದನ್ನು ವಿಫಾರ ಬಹುದು......."[24]

"ನನ್ನ ದೃಷ್ಟಿಯಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ರಜಪೂತ, ಮಹರ್ ಚಮ್ಮಾರ ಎಲ್ಲಾ ಒಂದೇ. ಅಷ್ಟೇ ಅಲ್ಲ ಹುಟ್ಟಿನ ಮೇಲೆ ನಿರ್ಧಾರವಾಗುವ ಇಂಥ ತಾರತಮ್ಯಗಳೆಲ್ಲ ಅನೈತಿಕ ಎಂದು ನಾನು ಭಾವಿಸುತ್ತೇನೆ. ಈ ಮೇಲು-ಕೀಳಿನಿಂದಲೇ ನಾವು ಈವರೆಗೆ ಒದ್ದಾಡಿದ್ದೇವೆ. ಇಂಥ ತರ-ತಮ ಪ್ರಜ್ಞೆ ನಮ್ಮ ಬದುಕನ್ನೇ ಕುಲಗೆಡಿಸಿದೆ....ಇಂದು ನಿಜವಾದ್ದು ಒಂದೇ ವರ್ಣ. ನಾವೆಲ್ಲಾ ಶೂದ್ರರು, ಅಥವಾ ಇನ್ನೂ ಬೇಡವೆಂದರೆ-ಹರಿಜನರು.ನಮ್ಮನ್ನೆಲ್ಲ ನಾವು ಶೂದ್ರರೆಂದೇ ಭಾವಿಸುವಾಗ.... ಇಂಥ ವರ್ಗೀಕರಣದ ಮಿಥ್ಯ ಕುಸಿದು ಬೀಳುತ್ತದೆ ಮತ್ತು ನಾವು ವಾಸ್ತವಕ್ಕೆ ಹತ್ತಿರ ಆಗುತ್ತೇವೆ''

ಪುರಿ ಜಗನ್ನಾಥನ ದೇವಾಲಯದಲ್ಲಿ ಹರಿಜನರಿಗೆ ಬಾಗಿಲು ಮುಚ್ಚಿದ್ದ ಕಾಲವದು. 1938 ರ ಮಾರ್ಚಿಯಲ್ಲಿ ಗಾಂಧೀಜಿ ತಮ್ಮ ಕಾರ್ಯದರ್ಶಿ ಮತ್ತು ಕಾರ್ಯದರ್ಶಿಯವರ ಹೆಂಡತಿಯರೊಡನೆ ಅಲ್ಲಿಗೆ ಹೋದರು. ಇವರಿಗೆ ಗೊತ್ತಾಗದಂತೆ ಕಸ್ತೂರಬಾ ಮತ್ತು ಮಹದೇವ್‌ರ ಪತ್ನಿ ದುರ್ಗಾ ಇಬ್ಬರೂ ದೇವಸ್ಥಾನಕ್ಕೆ ಹೋಗಿ ಬಂದು ಬಿಟ್ಟಿದ್ದಾರೆ. ವಿಷಯ ತಿಳಿದೊಡನೆ ಗಾಂಧಿ ತರಾಟೆಗೆ ತೆಗೆದುಕೊಳ್ಳುತ್ತಾರೆ. ಕಡೆಗೂ ಅವರು ಬೈಯ್ಯುವುದು ಮಹದೇವರನ್ನೆ. 'ನೀನು ಅಸ್ಪೃಶ್ಯತೆ ವಿರುದ್ಧ ಅಷ್ಟೆಲ್ಲ ಲೇಖನ ಬರೆಯುತ್ತಿ, ನಿನ್ನ ಹೆಂಡತಿಗೆ ಅಷ್ಟು ಹೇಳಿಕೊಡುವುದು ಗೊತ್ತಾಗುವುದಿಲ್ಲವೇ ? ಅವರು ಅಷ್ಟೂ ಹೋಗಲೇಬೇಕೆಂದಿದ್ದರೆ, ಹರಿಜನರನ್ನು ಎಲ್ಲಿಯವರೆಗೆ ಬಿಡುತ್ತಾರೋ, ಅಲ್ಲಿಯವರೆಗೆ ಮಾತ್ರ ಹೋಗಿಬರಬೇಕಿತ್ತು. ಆಗ ಅದೊಂದು ಪ್ರತಿಭಟನೆಯಾದರೂ ಆಗುತ್ತಿತ್ತು...." ಎಂದು ಹಲುಬುತ್ತಾರೆ. ಹೆಂಡತಿಗೆ ಬೈದ ವಿಷಯದಲ್ಲಿ ಗುಪ್ತ ಕ್ರೌರ್ಯವನ್ನು ಕಾಣಬಹುದಿತ್ತೇನೊ, ಆದರೆ "ಆತಪ್ಪು ನನ್ನದೇ. ನಾನು ಕಸ್ತೂರ ಬಾ ಶಿಕ್ಷಣಕ್ಕೆ ಕೊಡಬೇಕಾದಷ್ಟು ಗಮನ ಕೊಡಲಿಲ್ಲ"[25] ಎಂದು ಹಳಿದುಕೊಂಡು ಅಂಥ ಅವಕಾಶ ತಪ್ಪಿಸಿಬಿಡುತ್ತಾರೆ !

ಇದರ ನಂತರ ಚರಿತ್ರೆಯಲ್ಲಿ ನಮಗೆ ಕಾಣುವುದು, ತಾವು ಹೋದಲ್ಲೆಲ್ಲ ಹರಿಜನಕೇರಿಯಲ್ಲೇ ಉಳಿಯಬೇಕೆನ್ನುವ ಗಾಂಧೀಜಿ ನಿರ್ಧಾರ. ಅದರ ಸಂಬಂಧ 'ಹರಿಜನ್' ನಲ್ಲಿ ಹೀಗೆ ಬರೆಯುತ್ತಾರೆ:– "ಭಾಂಗಿ ಕಾಲೊನಿಗಳಲ್ಲಿ ಉಳಿಯಬೇಕೆನ್ನುವ ನನ್ನ ತೀವ್ರ ಬಯಕೆಗೆ ಕೆಲವು ಸ್ನೇಹಿತರು ಆಶ್ಚರ್ಯ

"ಈ ಕ್ಷುದ್ರ ಜಾತಿವ್ಯವಸ್ಥೆ ಯಾವಾಗಲೂ ಶೂದ್ರರನ್ನು ಅತಿಶೂದ್ರರ ಜತೆ ಸೇರಿಸಿಯೆ ಶೋಷಿಸುತ್ತಾ ಬಂದಿದೆ"

"ಅಸ್ಪೃಶ್ಯತೆ ಇರುವವರೆಗೆ ಭಾರತಕ್ಕೆ ಶಾಂತಿಯೂಇಲ್ಲಸ್ವಾತಂತ್ರ್ಯವೂ ಇಲ್ಲ. ಬ್ರಿಟಿಷರು ಹೋಗಬಹುದು. ಆದರೆ ನಿಜವಾದ ಸಾತಂತ್ರ್ಯ ದಕ್ಕುವುದಿಲ್ಲ"

ವ್ಯಕ್ತಪಡಿಸಿದ್ದಾರೆ. ಆದರೆ ಇಷ್ಟು ವರ್ಷ ನಾನೇಕೆ ಈ ಕೆಲಸ ಮಾಡಲಿಲ್ಲ ಎಂದು ಕೇಳುವುದೇ ಹೆಚ್ಚು ಸೂಕ್ತವಾದ ಪ್ರಶ್ನೆ....ನಾವೆಲ್ಲರೂ ಭಾಂಗಿಗಳೂ ಅಸ್ಪೃಶ್ಯರೂ ಆಗಬೇಕೆಂದು ಕೆಲಕಾಲದಿಂದ ಹೇಳುತ್ತಾ ಬಂದಿದ್ದೇನೆ. ಆದರೆ ನನ್ನ ಹೇಳಿಕೆಗೆ ತಕ್ಕುದಾದ ಕ್ರಿಯೆಯನ್ನೂ ಮಾಡಿಲ್ಲವಲ್ಲ ಎಂಬ ಚಿಂತೆ ನನಗೆ ಬಂತು. ಆಸೆಯನ್ನು ಪೂರ್ಣ ನೆರವೇರಿಸಿಕೊಳ್ಳಲು ಸಾಧ್ಯವಿಲ್ಲದಿದ್ದರೂ ಸಾಧ್ಯವಾದಷ್ಟನ್ನಾದರೂ ಮಾಡಬೇಕು. ಈ ಮಧ್ಯೆ ಇಡೀ ಗುಜರಾತಿನಲ್ಲಿ ಹರಿಜನರಿಗೆ ಒಂದೇ ಸಾರ್ವಜನಿಕ ಬಾವಿ ಸಿಕ್ಕಿದೆ ಎಂಬ ಸುದ್ದಿ ಕೇಳಿದೆ....ಆ ಸುದ್ದಿ ಕೇಳಿ ಕೋಪಗೊಂಡರೆ ಪ್ರಯೋಜನವೇನೂ ಇಲ್ಲ. ಬದಲಿಗೆ ಅಸ್ಪೃಶ್ಯರ ಕೇರಿಯಲ್ಲೇ ಇರಬೇಕೆಂಬ ನನ್ನ ಆಸೆಯನ್ನು ಇದು ತೀವ್ರಗೊಳಿಸಿತು. ನಾನು ಹೇಳಿಕೊಂಡೆ–'ನಾನೇ ಹರಿಜನರಿಂದ ದೂರ ಉಳಿದರೆ ಬೇರೆಯವರ ಧೋರಣೆ ಪ್ರಶ್ನಿಸಲು ನನಗೇನು ಅಧಿಕಾರ ? ....ಯಾರು ಏನೇ ಹೇಳಲಿ ಹರಿಜನ ಕೇರಿಯಲ್ಲಿರುವುದು ನನ್ನ ಕರ್ತವ್ಯ..."[62]

ಮುಂಬೈ ಮತ್ತು ದಿಲ್ಲಿಗಳಲ್ಲಿ ದಲಿತಕೇರಿಗಳಲ್ಲಿ ಮಾತನಾಡುತ್ತಾ ಗಾಂಧೀಜಿ ದಲಿತರಿಗೆ ತಮ್ಮ ಮೇಲೆ ಕೋಪಗೊಳ್ಳಲು ಎಲ್ಲ ಅಧಿಕಾರವು ಇದೆ ಅನ್ನುತ್ತಾರೆ. ಇಷ್ಟೆಲ್ಲ ಮಾಡಿದರೂ ಅವರ ಸಂಕಟ ನಿವಾರಣೆಯಾಗಲಿಲ್ಲವೆಂಬ ಕಾರಣಕ್ಕೆ ಅವರು ಬೇಕಾದರೆ ಸೇಡು ತೀರಿಸಿಕೊಳ್ಳಲು ಇಳಿಯಬಹುದು ಎಂದೂ ಹೇಳುತ್ತಾರೆ. "... ...ಆದರೆ ಈ ನಡುವೆ, ನಾವು ಮಾಡಬಹುದಾದ ಕನಿಷ್ಟ ಕಾರ್ಯವೆಂದರೆ ಹರಿಜನರ ದುಸ್ಥಿತಿಯನ್ನು ಹಂಚಿಕೊಳ್ಳುವುದು ಮತ್ತು ಅವರಿಗೆ ಸಿಕ್ಕದ ಅವಕಾಶವನ್ನು ನಾವೂ ನಿರಾಕರಿಸುವುದು... ...."[illegible] ಎಂದು ಸೂಚಿಸುತ್ತಾರೆ ಕೂಡಾ.

ಉದಕ್ಕೂ ಕಾಂಗ್ರೆಸ್ಸನ್ನು ತಮ್ಮದೇ ಅನ್ನುವಂತೆ ಸಮರ್ಥಿಸಿಕೊಳ್ಳುತ್ತಾ ಬಂದ ಗಾಂಧೀಜಿಯಲ್ಲಿ 1946ರ ವೇಳೆಗೆ ಒಂದು ಆಶ್ಚರ್ಯಕರ

ಬೆಳವಣಿಗೆ ಕಾಣುತ್ತೇವೆ. ಸರ್ದಾರ್ ವಲ್ಲಭಭಾಯಿ ಪಟೇಲ್‌ಗೆ ಬರೆದ ಪತ್ರದಲ್ಲಿ ಗಾಂಧಿ "ಹರಿಜನರನ್ನು ಹೊಡೆಯುತ್ತಿರುವವರು, ಕೊಲೆ ಮಾಡುತ್ತಿರುವವರು, ಸಾರ್ವಜನಿಕ ಬಾವಿಗಳಿಂದ ದೂರ ವಿಟ್ಟವರು, ಶಾಲೆಗಳಿಂದ ಆಚೆ ದಬ್ಬಿದವರು ತಮ್ಮ ಮನೆಗೆ ಸೇರಿಸಿಕೊಳ್ಳದವರು ಕಾಂಗ್ರೆಸ್ಸಿಗರೇ ಅಲ್ಲವೇನು ?'[28] ಎಂದು ಕಿಡಿಕಾರುತ್ತಾರೆ.

ಜಾತಿ ಒಂದು ಸಾಮಾಜಿಕ ವಾಸ್ತವ, ಕ್ರಮಬದ್ಧ ಅನಿಷ್ಟ ಎಂದು ಒಪ್ಪುವವರೆಲ್ಲರೂ ಮೀಸಲಾತಿಯನ್ನು ಸಮರ್ಥಿಸುತ್ತಾರೆ. ಅದು ಈಗಿನ ವಿದ್ಯಮಾನ. ಆದರೆ ಗಾಂಧಿ ಆಗಲೇ ಮೀಸಲಾತಿ ಕಲ್ಪನೆಯನ್ನು ಬೀಜರೂಪದಲ್ಲಿ ವ್ಯಕ್ತಮಾಡಿ, ಆ ಮೂಲಕ ಜಾತಿವಾದಕ್ಕೆ ಪೆಟ್ಟು ಕೊಟ್ಟಿದ್ದೂ ಉಂಟು.

ಸ್ವಾತಂತ್ರ್ಯ ಬಂದ ಸುಮಾರು ಒಂದೂವರೆ ತಿಂಗಳ ಹಿಂದೆ ಅವರಿಗೊಂದು ಪತ್ರ ಬಂತು. ಆಗ ಪ್ರಬಲವಾಗುತ್ತಿದ್ದ ಬ್ರಾಹ್ಮಣವಿರೋಧಿ ಚಳವಳಿಯನ್ನು ಆ ಪತ್ರ ಪ್ರಸ್ತಾಪಿಸಿ ಚಳವಳಿಯಿಂದಾಗಿ ಶಾಲಾಕಾಲೇಜುಗಳಲ್ಲಿ ಬ್ರಾಹ್ಮಣ ಹುಡುಗಹುಡುಗಿಯರಿಗೆ ಪ್ರವೇಶ ಸಿಕ್ಕುತ್ತಿಲ್ಲ ಎಂಬ ಅಳಲು ಹೊರಹಾಕಿತ್ತು. ಅದಕ್ಕೆ ಗಾಂಧೀಜಿ ಪ್ರತಿಕ್ರಿಯೆಯೇನು? 'ಈ ಬ್ರಾಹ್ಮಣರಿಗೆ ನನ್ನ ಸಹಾನುಭೂತಿಯದ್ದರೂ, ಅವರ ಅತ್ಮಪ್ರಿಯನ್ನು ನಾನು ಹಂಚಿಕೊಳ್ಳಲಾರೆ. ಇದುವರೆಗೆ ಅವರು ಜ್ಞಾನದ ಗುತ್ತಿಗೆ ಹಿಡಿದುಕೊಂಡಿದ್ದರು ಅನಿಸುತ್ತದೆ. ನಮ್ಮ ಜವಾಬ್ದಾರಿ ನಿರ್ವಹಿಸಿದ ಮೇಲೆಯೇ ನಮ್ಮ ಹಕ್ಕು ನಮಗೆ ಸಿಕ್ಕುವುದೆಂದು ನಾನು ಮೊದಲೇ ಹೇಳಿದ್ದೆ. ಅದನ್ನು ಅವರು ಅರಿತುಕೊಂಡರೆ, ತಮಗೆ ಬೇರೆಯವರಿಗಿಂತಲೂ ಮಿಗಿಲಾವ ಯಾವ ಹಕ್ಕೂ ಇಲ್ಲ ಎಂದು ಅವರಿಗೆ ಮನವರಿಕೆಯಾದೀತು. ಅಂಥ ವಿಶೇಷ ಹಕ್ಕು ಯಾರಿಗಾದರೂ ಇರುವುದಾದರೆ, ಅದು ಈವರೆಗೆ ಕ್ರೂರ ನಿರ್ಲಕ್ಷ್ಯಕ್ಕೆ ಒಳಗಾದವರಿಗೆ ಮಾತ್ರ......."[29]

ಅದೇ ಅವಧಿಯಲ್ಲೇ ಗಾಂಧೀಜಿ ನೂತನ ಭಾರತದ ತಮ್ಮ ಕಲ್ಪನೆಯಲ್ಲಿ ದೀನರು, ದುರ್ಬಲರು, ಬಡವರು, ದಲಿತರಿಗೆ ವಿಶೇಷ ಸವಲತ್ತು ಕೊಡಬೇಕೆಂದು ವಾದಿಸುತ್ತಾ "ಹರಿಜನರ ಏಳಿಗೆಗೆ ಹೆಚ್ಚು ಹಣ ಖರ್ಚು ಮಾಡಿದರೆ, ಬ್ರಾಹ್ಮಣರು ಉರಿದುಕೊಳ್ಳಕೂಡದು" ಎಂದೂವಿಧಿಸುತ್ತಾರೆ.[30]

ಇವೆಲ್ಲವನ್ನೂ ನೋಡಿದರೆ, ನನ್ನ ಪ್ರಕಾರ ಗಾಂಧೀಜಿ ಕಡೆಯಲ್ಲಿ ದಲಿತನೇ ಆಗಿಹೋದರೇನೋ ಎನ್ನುವ ಭಾವನೆ ಮೂಡುತ್ತೆ. ಅಂಥ ಭಾವನೆಗೆ ಎಷ್ಟು ನೆಲೆಗಟ್ಟು ಒದಗಿಸಲು ಇಲ್ಲಿ ಸಾಧ್ಯವಾದೆ ಎಂದೂ ಭಾವಿಸಿದ್ದೇನೆ.

> "ಹರಿಜನ—ನಾನು ಕೊಟ್ಟ ಹೆಸರಲ್ಲ. ಕೆಲವು ವರ್ಷಗಳ ಹಿಂದೆ ನಾನು 'ನವಜೀವನ' ಪತ್ರಿಕೆಯಲ್ಲಿ 'ಅಸ್ಪೃಶ್ಯ' ಪದ ಉಪಯೋಗಿಸಿದಾಗ, ಕೆಲವು ಅಸ್ಪೃಶ್ಯರೇ ಪತ್ರ ಬರೆದು ತಮ್ಮ ಅಸಮ್ಮತಿ ವ್ಯಕ್ತಮಾಡಿದರು. ನಾನು ಅವರನ್ನೇ ಕರೆದು, ಬೇರೆ ಯಾವುದಾದರೂ ಹೆಸರು ಸೂಚಿಸಿ ಎಂದು ಕೇಳಿದೆ. ಗುಜರಾತಿನ ಕವಿಯೊಬ್ಬರ ಕಾವ್ಯದಲ್ಲಿ ಬಳಕೆಯಾಗಿದ್ದ 'ಹರಿಜನ' ಪದ ಉಪಯೋಗಿಸುವಂತೆ ಅವರು ಸಲಹೆ ಮಾಡಿದರು........"

ಕಡೆಗೂ ಒಂದು ಕೊರಗು ಉಳಿದೇ ಉಳಿಯುತ್ತೆ. ಶುರುವಿನಿಂದಲೇ ಗಾಂಧೀಜಿಗೆ ಹಿಂದೂ ಭ್ರಮೆಗಳಿಲ್ಲದೆ ಹೋಗಿದ್ದಿದ್ದರೆ ?........ಆದರೆ ಚರಿತ್ರೆಯ ಸತ್ಯಗಳು ಸತ್ಯಗಳೇ. ಅದು ಗಾಂಧಿ ದುರಂತ. ನಮ್ಮೆಲ್ಲರ ದುರಂತ.

ಯಾಕೆಂದರೆ ಗಾಂಧೀ ತನ್ನ ಮಿತಿಗಳನ್ನು ಮೀರುವ ವೇಳೆಗೆ, ಕಾಲ ಮೀರಿತ್ತು. ಸ್ವಾತಂತ್ರ್ಯ ಹೋರಾಟದಲ್ಲಿ ಹಿಂದೂರಕ್ತ ಸೇರಿಹೋಗಿತ್ತು. ಆತನ ಅಹಿಂಸೆ ಕೂಡಾ ಭಾರತದ ಹಿಂದೂ ಮನಸ್ಸಿಗೆ ಅನುಗುಣವಾದದ್ದಾಗಿತ್ತೇ ? ಅಥವಾ ದೇಶ ವಿಭಜನೆಯ ಕಾಲದ ಭೀಕರ ನರಮೇಧ, ಮನುಷ್ಯ ರಾಕ್ಷಸನಾಗಬಲ್ಲನೆಂದು ತೋರಿದ ಯಾತನಾಮಯ ಗಾಥೆಯನ್ನು ತಪ್ಪಿಸಲಾಗದುದು ನಮ್ಮ ಜನರ ದೋಷವೇ ? ಅಥವಾ ಅಲ್ಲಿಯವರೆಗೆ ಅಹಿಂಸೆ ಬೆಳೆಯಲೇ ಇಲ್ಲವೇ ? ಹಾಗಾಗಿದ್ದಲ್ಲಿ ಅದು ಯಾರ ಸೋಲು ?

ಇಂಥ ಅನುಮಾನಗಳಿದ್ದೇ ಇವೆ. ಆದರೆ ಅಹಿಂಸೆ ವಿಚಾರದಲ್ಲಿ ನನಗೂ ಪೋಲಂಕಿಯವರಿಗೂ ಇರುವ ಭಿನ್ನಾಭಿಪ್ರಾಯವನ್ನು ಇಲ್ಲಿ ಹೇಳಲೇಬೇಕು. ಎಲ್ಲ ಅಹಿಂಸೆಯೂ ಹೊರಮುಖವಾಗಿ ಮಾತ್ರ ನಿಜವಾಗಬಲ್ಲದು. ಅಹಿಂಸೆ ಅನ್ನುವುದು ಸಂಬಂಧಗಳಲ್ಲಿ, ಸಂಬಂಧಗಳನ್ನು ಬದಲಿಸುವ ಹೋರಾಟದಲ್ಲಿ ಅನ್ವಯವಾಗುವ, ಒಟ್ಟಾರೆಯಾಗಿ ಒಂದು ಸಾಮಾಜಿಕ ಮೌಲ್ಯವಾದ್ದರಿಂದ ಅದು ಆತ್ಮಹಿಂಸೆಯಾಗಿಯೇ ಕಾಣಿಸಿಕೊಳ್ಳಬೇಕಾಗುತ್ತೆ. ಇದು ಗಾಂಧಿಮಟ್ಟಿಗೂ ನಿಜ, ಬುದ್ಧನಿಗೂ ನಿಜ.

ಆದರೆ ಸ್ವಾತಂತ್ರ್ಯ ಹೋರಾಟದಲ್ಲಿ ಹಾಸುಹೊಕ್ಕಾಗಿ ಬಂದ, ಗಾಂಧೀಜಿಗಿಂತ ಮುಂಚಿತವಾಗಿಯೇ ಬೇರುಬಿಟ್ಟ ಹಿಂದೂತನವನ್ನು ಗಾಂಧಿ ತಲೆಗೇ ಕಟ್ಟಿಬಿಡುವುದು ಸರಿಯಲ್ಲ. ಲೋಹಿಯಾ ಮಾತನ್ನೇ ನೋಡಿ :— "ಭಾರತದ ಎಲ್ಲ ರೋಗಗಳ ಅಡಿಯಲ್ಲೂ ಆಳುವವರ ಮತ್ತು ಆಳಿಸಿಕೊಳ್ಳುವವರ, ಮಧ್ಯಮವರ್ಗ ಮತ್ತು ಜನಸಾಮಾನ್ಯರ ನಡುವಣ ಅಗಾಧ ಕಂದಕವೇ ಹೊಡೆದು ಕಾಣುತ್ತದೆ. ಈ ಕಂದಕ ಶತಮಾನಗಳಿಂದಲೂ ಜಾತಿಭೇದದ ರೂಪದಲ್ಲಿ ದಾಖಲಾಗಿದೆ.......ಮಹಾತ್ಮಾಗಾಂಧಿ ಈ ಸ್ಥಿತಿಯನ್ನು ಸೃಷ್ಟಿಸಲಿಲ್ಲ. ಇದು ಆತನಿಗೆ ಬಳುವಳಿಯಾಗಿ ಬಂದಿದ್ದು. ಆತನಿಗೆ ಸಹಸ್ರಾರು ವರ್ಷಗಳ ಭಾರತದ ಇತಿಹಾಸ ಕೊಟ್ಟ ಕಾಣಿಕೆಯಿದು...... ವಿಭಜನೆಗೆ ಇದೇ ಖಂಡಿತ ಕಾರಣವೆಂದು ನನ್ನ ನಂಬಿಕೆ... ..."[31]

ಇದರರ್ಥ ಗಾಂಧೀಜಿಯನ್ನು ಮೇಲಕ್ಕೇರಿಸಿ ಅಂತಲೂ ಅಲ್ಲ, ಕೆಳಕ್ಕಿಳಿಸಿ ಅಂತಲೂ ಅಲ್ಲ ಆದರೆ ದುರಂತವೆಂದರೆಈಗ ನಡೆದಿರುವುದು ಅದೇ. ಗಾಂಧೀಜಿ ದೇವರಾಗಿ ಕಾಣುತ್ತಾರೆ, ಇಲ್ಲವೇ ದೆವ್ವವಾಗಿ ಕಾಡುತ್ತಾರೆ. ಯಾಕೆ ಹೀಗೆ ? ಅತನೇಕೆ ನಮ್ಮೊಡನೆ ಬಾಳಿದ, ನಮ್ಮ ನೋವು ನುರಿಗಳಲ್ಲಿ ಭಾಗಿಯಾದ, ತನ್ನನ್ನೂ ಪರಿಸರವನ್ನೂ ಸದಾ ಮೇಲಕ್ಕೆತ್ತಲು ಯತ್ನಿಸಿದ ಮನುಷ್ಯನ ಹಾಗೆ ಕಾಣುವುದಿಲ್ಲ ?

ನಮ್ಮ ಬೇರುಗಳನ್ನು ಕತ್ತರಿಸಿ ನಮ್ಮ ಇತಿಹಾಸದಿಂದ ನಮ್ಮನ್ನು ದೂರತಳ್ಳಿರುವ ವಸಾಹತುಶಾಹಿ ನೆನಪುಗಳು ಇದಕ್ಕೆ ಕಾರಣವೇನೋ ಎಂದು

> ಯಾವ ಧರ್ಮ ಬರೀ ಹುಟ್ಟಿನ ಕಾರಣವಾಗಿ ಒಂದು ಜನಾಂಗವನ್ನೇ ಹತ್ತಿಕ್ಕುವುದೋ ಆ ಧರ್ಮ ನಾಶವಾಗಲಿ"- ಎಂದೇ ಪ್ರಾರ್ಥಿಸುತ್ತೇನೆ.... ನಾವು ಎಲ್ಲ ಅರ್ಥದಲ್ಲೂ ಹರಿಜನರೇ ಆಗಬೇಕಾದ ಅಗತ್ಯವನ್ನು ಇದು ಎತ್ತಿತೋರುತ್ತದೆ....

ಅನಿಸುವುದುಂಟು. ಅಂಥ ನೆನಪುಗಳೇ ಕನ್ನಡವನ್ನು ಕನ್ನಡಿಗರಿಂದ ಗಾಂಧಿಯನ್ನು ಭಾರತದಿಂದ ದೂರ ಮಾಡುತ್ತಿರಬಹುದೇನೋ.... ...

ಡಾ॥ ಪೋಲಂಕಿಯವರು ಎತ್ತಿದ ಇನ್ನು ಕೆಲ ಪ್ರಶ್ನೆಗಳನ್ನು ಇಲ್ಲಿ ನಾನು ಪ್ರಸ್ತಾಪಿಸಬಯಸುವುದಿಲ್ಲ. ಹಾಗೆ ನೋಡಿದರೆ, ಗಾಂಧಿ ಕೆಲಸಕ್ಕೆ ಪರಿಸರ ತೋರಿದ ಪ್ರತಿಕ್ರಿಯೆ,—ಪರಿಸರ ಮತ್ತು ಗಾಂಧಿ ನಡುವಣ ಅಂತರಕ್ರಿಯೆಯ ವಿವರ ಮುಂತಾದ್ದೆಲ್ಲದ್ದರ ದಾಖಲೆಯನ್ನೂ ಇಲ್ಲಿ ಮಾಡಿದರೆ ಲೇಖನ ಪೂರ್ಣವಾಗುತ್ತಿತ್ತೆಂದು ನಾನುಬಲ್ಲೆ, ಆದರೆ ಈಗಾಗಲೇ ಉದ್ದವಾಗಿದೆ. ಹಾಗಾಗಿ ಮನುಕುಲಕ್ಕೆ ಒಟ್ಟಾರೆ ಗಾಂಧೀಜಿ ಅರ್ಥವೇನು

(ಮುಂದಿನ ಪುಟಕ್ಕೆ)

ಕೊಲೆ ಮುಚ್ಚಿ 'ಮಾನನಷ್ಟ'ಗೊಂಡ ಬಿಳಿಗಿರಿರಂಗಯ್ಯ

ಮದ್ದೂರಿನಲ್ಲಿ ನಡೆದ ವೆಂಕಟನಾರಾಯಣರ ಕೊಲೆ 'ಪಂಚಮ'ದ ಕಣ್ಣಿಗೆ ಬಿದ್ದ ಆಕಸ್ಮಿಕದಿಂದಾಗಿ ದಲಿತ ಸಂಘರ್ಷ ಸಮಿತಿಯ ಪ್ರತಿಭಟನೆಗೆ ತುತ್ತಾಗಿದೆ. ಈ ಕೊಲೆಯನ್ನು 'ಆತ್ಮಹತ್ಯೆ' ಮಾಡಿದ ಮದ್ದೂರಿನ ಡಾಕ್ಟರು ಮತ್ತು ಪೋಲೀಸರೊಂದಿಗೆ, ಹೆಣವನ್ನು ರಾತ್ರೋರಾತ್ರಿ ಸುಡಿಸಿ ಮಹಾಪರಾಧ ಮಾಡಿದ ಮೂರ್ಖ ಶ್ರೀ ಎಸ್. ಸಿ. ಬಿಳಿಗಿರಿರಂಗಯ್ಯನವರ ಬಗ್ಗೆ ಕಳೆದ ಸಂಚಿಕೆಯಲ್ಲಿ ಬರೆದಿದ್ದೆವು. ಇದರಿಂದ ತನ್ನ 'ಮಾನ' ಹೋಯಿತೆಂದು "ಮಾನನಷ್ಟ ಮೊಕದ್ದಮೆ" ಹಾಕುತ್ತೇನೆಂದೂ ಪಂಚಮಕ್ಕೆ ಬೆದರಿಕೆ ಪತ್ರ ಬರೆದಿದ್ದಾರೆ. ಇದಕ್ಕೆ ನಮ್ಮ ಮುಳ್ಳೂರು ನಾಗರಾಜು ಬರೆದ ಉತ್ತರ ಇಲ್ಲಿದೆ.–ಸಂಪಾದಕ

ಪ್ರೀತಿಯ ಡಾ॥ ಎಸ್. ಸಿ. ಬಿಳಿಗಿರಿರಂಗಯ್ಯನವರಿಗೆ.

ಹೃತ್ಪೂರ್ವಕ ವಂದನೆಗಳು. ದಿನಾಂಕ 7–1–84ರ ತಮ್ಮ ಪತ್ರ ತಲುಪಿದೆ. ತಮಗಾಗಿರುವ ನೋವು ನನಗೂ ನೋವು ತಂದಿದೆ. ಆದರೂ ಇದು 'ಅಪಾಲಜಿ' ಅಲ್ಲ, ಯಾವುದೇ ತಪ್ಪು ಮಾಡದೆ ನಾನು ಯಾಕಾದರೂ 'ಅಪಾಲಜಿ, ಬರೆಯಬೇಕು ? ನಿಮ್ಮ ಆಲೋಚನೆಗಳು ಮತ್ತು ಅಭಿಪ್ರಾಯಗಳು ಅಸಂಗತವಾಗಿವೆ. ತಾವು ಅನಗತ್ಯವಾಗಿ ಉದ್ರಿಕ್ತರಾಗಿದ್ದೀರಿ. ನಾನು ನಿಮ್ಮ ವೈರಿಯಲ್ಲ. ಅಥವಾ ಸ್ನೇಹಿತನೂ ಅಲ್ಲ. ಯಾವುದೇ ಪೂರ್ವಗ್ರಹಗಳಿಲ್ಲದೆ ನಾನು ಬರೆದ ವರದಿ ನಿಮಗೆ ಮಾನನಷ್ಟ ಉಂಟುಮಾಡಿದೆಯೆಂಬುದು ನಿಮ್ಮ ಕಲ್ಪನೆ. ಈಗಲಾದರೂ ನೀವು ವಸ್ತುನಿಷ್ಟವಾಗಿ ಯೋಚಿಸಲು ಯತ್ನಿಸಬೇಕೆಂದು ವಿನಂತಿಸುವೆ.

ಜನವರಿ 84ರ ಪಂಚಮದಲ್ಲಿ "ಮದ್ದೂರಿನಲ್ಲಿ ಆತ್ಮಹತ್ಯೆ ಎಂಬ ಹೆಸರಿನ ಭೀಕರ ಕೊಲೆ" ಎಂಬ ನನ್ನ ವರದಿ ಪ್ರಕಟವಾಗಿದೆ. ಮೇಲ್ಕಂಡ ವರದಿಯಲ್ಲಿ ಎರಡು ಕಡೆ ತಮ್ಮ ಹೆಸರು ಅನಿವಾರ್ಯವಾಗಿ ಪ್ರಸ್ತಾಪವಾಗಿದೆ. ಸತ್ಯವನ್ನು ವಿರೂಪಗೊಳಿಸುವುದು ಮತ್ತು ಬಚ್ಚಿಡುವುದು ನಿಜವಾದ ಪತ್ರಿಕೋದ್ಯಮಿಯ ದೃಷ್ಟಿಯಿಂದ ಘೋರ ಅಪರಾಧವೆಂದು ನಾನು ತಿಳಿದಿರುವೆ. ಅದರಿಂದಾಗಿ ಸತ್ಯಕ್ಕೆ ವಿರುದ್ಧವಾದ್ದನ್ನು ನಾನು ಖಂಡಿತವಾಗಿ ಬರೆಯಲಾರೆ. ಯಾರಿಗೂ ಯಾವ ಕಾರಣಕ್ಕೂ ರಿಯಾಯಿತಿ ಕೊಡಲಾರೆ. ಆದರೆ ನಡೆದ ಸಂಗತಿಯನ್ನು ಪ್ರಾಮಾಣಿಕವಾಗಿ ಮಂಡಿಸುವುದಷ್ಟೆ ನನ್ನ ಉದ್ದೇಶವಾಗಿತ್ತು. ಆದರೂ ನಿಮಗಿದು ಮಾನನಷ್ಟದಂತೆ ಕಂಡಿದ್ದರೆ ನಾನೇನು ಮಾಡುವಂತಿಲ್ಲ. ನಮಗೆ ಈಗಲೂ ಅನೇಕ ಗುಮಾನಿಗಳಿವೆ. ಅದಕ್ಕೆಲ್ಲ ಉತ್ತರಿಸುವ ನೈತಿಕ ಜವಾಬ್ದಾರಿ ನಿಮ್ಮದು! ನೀವು ಪ್ರಖ್ಯಾತ ಕ್ರಿಮಿನಲ್ ಲಾಯರ್ ಎಂಬುದನ್ನು ನಿಮ್ಮ ಶತ್ರುಗಳೂ ಒಪ್ಪಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಮಾತ್ರ ಹಳ್ಳಿಯ ಅನಕ್ಷರಸ್ಥ ಮುಗ್ಧರಂತೆ ವರ್ತಿಸಿದ್ದೀರಿ, ಯಾಕೆ ?

ಕೊಲೆಯಾದ ವೆಂಕಟನಾರಾಯಣ ನಿಮ್ಮ ರಕ್ತ ಸಂಬಂಧಿಕ. ಆತನ ಹೆಣದ ಪೋಸ್ಟ್ ಮಾರ್ಟಂ ಆದ ಕೂಡಲೇ ನೀವೇಕೆ ಅದರ ರಿಪೋರ್ಟನ್ನು ಪರಿಶೀಲಿಸಲಿಲ್ಲ ? ಸತ್ತವರ ಹೆಂಡತಿ ಇಲ್ಲದ ಸಂದರ್ಭದಲ್ಲಿ ನಡೆದ ಪೋಸ್ಟ್ ಮಾರ್ಟಂ ಅನ್ನು ನೀವೇಕೆ ಒಪ್ಪಿಕೊಂಡಿರಿ.

ಹೆಣವನ್ನು ಧಫನ್ ಮಾಡುವುದಕ್ಕಿಂತಲೂ, ಕೊಲೆಯ ಕಾರಣಗಳನ್ನು ತಿಳಿಯಲು ನೀವೇಕೆ ಪ್ರಯತ್ನಿಸಲಿಲ್ಲ ?

ಸಂಶಯಾಸ್ಪದ ಸಾವನ್ನು ಅನುಭವಿಸಿದ ವೆಂಕಟನಾರಾಯಣರ ದೇಹವನ್ನು ಸುಡಿಸಲು ನಿಮ್ಮ ಕ್ರಿಮಿನಲ್ ಲಾಯರ್ ಬುದ್ಧಿ ಹೇಗೆ ಒಪ್ಪಿಗೆ ಕೊಟ್ಟಿತು ?

ಕೊನೆಯ ಮಾತು : ನಿಮ್ಮ ಮಕ್ಕಳು ಯಾರಾದರೂ ವೆಂಕಟನಾರಾಯಣರ ರೀತಿ ಕೊಲೆಯಾಗಿದ್ದರೆ ನೀವು ಏನು ಮಾಡುತ್ತಿದ್ದಿರಿ ?

ನಾವು ಕೊಲೆಯನ್ನು ಪ್ರತಿಭಟಿಸುವ, ಕೊಲೆ ತಪ್ಪೆಂದು ಹೇಳುವ ಕೆಲಸ ಮಾಡಿದ್ದೇವೆ. ಹೋರಾಟದ ಮೂಲಕ ನ್ಯಾಯ ಪಡೆಯಲು ಹೊರಟಿದ್ದೇವೆ. ಒಂದು ವೇಳೆ ನಿಮಗೇ ವೆಂಕಟನಾರಾಯಣರ ಪರಿಸ್ಥಿತಿ ಉಂಟಾಗಿದ್ದರೂ ಹೋರಾಟದ ಮೂಲಕ ನ್ಯಾಯ ಪಡೆಯಲು ದಲಿತ ಸಂಘರ್ಷ ಸಮಿತಿ ಪ್ರಯತ್ನಿಸುತ್ತಿತ್ತು.

ಮತ್ತೊಮ್ಮೆ ನಿಮ್ಮನ್ನು ನೀವೇ ವಿಮರ್ಶಿಸಿಕೊಂಡು ಸೂಕ್ತ ತೀರ್ಮಾನಕ್ಕೆ ಬರುವುದು ಒಳ್ಳೆಯದು. ಗಾಢ ಆತ್ಮಗೌರವವುಳ್ಳ ನಾನು ನಿಮಗೆ ಅಪಾಲಜಿ ಬರೆದು ನನ್ನ ಘನತೆಗೆ ಕುಂದು ತಂದುಕೊಳ್ಳಲಾರೆ. ಇದಕ್ಕಿಂತ ಹೆಚ್ಚಿಗೆ ಏನನ್ನೂ ಹೇಳಲು ಬಯಸುವುದಿಲ್ಲ. ನಿಮಗೆ ಸರಿ ಕಂಡಂತೆ ನಡೆಯಲು ನೀವು ಸ್ವತಂತ್ರರು. ಇಷ್ಟೆ.

ಇಂತಿ ತಮ್ಮ ವಿಶ್ವಾಸಿ
ಮುಳ್ಳೂರು ನಾಗರಾಜು

ಎಂಬ ಶೋಧನೆಗೂ ಇಲ್ಲಿ ತೊಡಗುವುದಿಲ್ಲ.

ಗಾಂಧಿಗೆ ನನ್ನಂಥವನ ವಕಾಲತ್ತಿನ ಅಗತ್ಯವಿಲ್ಲ. ನಾನು ಗಾಂಧಿವಾದಿಯೂ ಅಲ್ಲ. ಆದರೆ ಸದ್ಯಕ್ಕೆ ನನ್ನ ಆಶಯವಿಷ್ಟೇ : ನಿಷ್ಠುರ ಸತ್ಯಶೋಧಕರಾಗಿರುವ ಡಾ॥ ಪೋಲಂಕಿಯವರಿಗೆ ಈ ವಿಚಾರದಲ್ಲಿ 'ಎರಡನೇಆಲೋಚನೆ' ಸಾಧ್ಯವಿದೆ ಅನಿಸಿದರೆ ಸಾಕು ನನ್ನ ಉದ್ದೇಶ ಈಡೇರಿದಂತೆ.

ಆಕರಗಳು:–ಇಲ್ಲಿನ ಬಹುತೇಕ ಉಲ್ಲೇಖಗಳನ್ನು ಡಿ. ಜಿ ತೆಂಡುಲ್ಕರ್ ಅವರ 'ಮಹಾತ್ಮ' ಎಂಟು ಸಂಪುಟಗಳಿಂದ ತೆಗೆದುಕೊಂಡಿದ್ದೇನೆ. ಬರೀ ಸಂಪುಟದ ಸಂಖ್ಯೆ ಹಾಕಿರುವಲ್ಲಿ ಅದು 'ಮಹಾತ್ಮ' ಪುಸ್ತಕದ್ದೆಂದು ತಿಳಿಯುವುದು.

1. ಪುಟ 166–7, ಸಂಪುಟ ಒಂದು
2. ಎಂ. ಕೆ. ಗಾಂಧಿ : 'ಗ್ಲಿಂಪ್ಸಸ್ ಆಫ್ ರಿಲಿಜನ್' (ಮೈ ಎಕ್ಸ್‌ಪಿರಿಮೆಂಟ್ ವಿತ್ ಟ್ರುತ್)
3. ಅದೇ ; ಅಧ್ಯಾಯ–ಕ್ರಿಶ್ಚಿಯನ್ ಕಾಂಟಾಕ್ಟ್ಸ
4. ಅದೇ ; ಅಧ್ಯಾಯ–ರಿಲಿಜಿಯಸ್ ಫರ್ಮೆಂಟ್
5. ಪುಟ, 35, ಸಂಪುಟ ಎರಡು
6. ಪುಟ [illegible]2-3, ಸಂಪುಟ ಮೂರು
7. ಪುಟ 181-2, ಸಂಪುಟ ಮೂರು
8. ಪುಟ 283, ಸಂಪುಟ ಎರಡು
9. ಪುಟ 308, ಸಂಪುಟ ಎರಡು
10. ಪುಟ 42, ಸಂಪುಟ ನಾಲ್ಕು
11. ಪುಟ 71, ಸಂಪುಟ ನಾಲ್ಕು
12. ಪುಟ 97, ಸಂಪುಟ ಐದು
13. ಪುಟ 243-4, ಸಂಪುಟ ಮೂರು
14. ಪುಟ 181-2, ಸಂಪುಟ ಮೂರು
15. ಪುಟ 192, ಸಂಪುಟ ಮೂರು
16. ಪುಟ 161, ಸಂಪುಟ ಏಳು
17. ಪುಟ 411, ಸಂಪುಟ ಏಳು
18. ಪುಟ 334, ಸಂಪುಟ ಏಳು
19. ಲೋಹಿಯಾ : ಗಿಲ್ಟಿ ಮೆನ್ ಆಫ್ ಇಂಡಿಯಾಸ್ ಪಾರ್ಟಿಷನ್ ಪುಟ 93
20. ಅದೇ ಪುಟ 78
21. ಪುಟ 192, ಸಂಪುಟ ಮೂರು
22. ಪುಟ 7, ಸಂಪುಟ ನಾಲ್ಕು
23. ಪುಟ 81 ಸಂಪುಟ ನಾಲ್ಕು
24. ಪುಟ 181, ಸಂಪುಟ ನಾಲ್ಕು
25. ಪುಟ 239 9, ಸಂಪುಟ ನಾಲ್ಕು
26. ಪುಟ 88–9, ಸಂಪುಟ ಏಳು
27. ಅದೇ
28. ಪುಟ 156, ಸಂಪುಟ ಏಳು
29. ಪುಟ 35, ಸಂಪುಟ ಎಂಟು
30. ಪುಟ 49–50 ಸಂಪುಟ ಎಂಟು
31. ಲೋಹಿಯಾ : ಗಿಲ್ಟಿ ಮೆನ್....... ಪುಟ 35

ಸಂಪಾದಕ, ಪ್ರಕಾಶಕ : ಗೋವಿಂದಯ್ಯ, ವಿನಯ ಪ್ರಿಂಟರ್ಸ್ 25'4, ಕೆ. ಜಿ. ಕೊಪ್ಪಲು, ಮೈಸೂರು–14.